UNIVERSAL LIBRARY
OU_198197
UNIVERSAL LIBRARY

OSMANIA UNIVERSITY LIBRARY

Call No. K83·1/A49K Accession No. K2104

Author ఆన్వి, శ్రీనారాయణ గారు.

Title కైవ్య. 1970

This book should be returned on or before the date last marked below.

# ಕಿಚ್ಚು

ಬಿ. ಅಶ್ವತ್ಥನಾರಾಯಣರಾಯರು

# ಕಿಚ್ಚು

ಬಿ. ಅಶ್ವತ್ಥನಾರಾಯಣರಾವ್

ಎಂಟಾಣೆ

ರಾ. ಮೇ. ಗಂಗಾವತಿ
ಆದರ್ಶ ಸಾಹಿತ್ಯ ಪ್ರಕಟನ ಮಂದಿರ
ಗೌಳಿಗೂಡಾ, ಹೈದರಾಬಾದ (ದ.)

ಪ್ರತಿಗಳು
ಮನೋಹರ ಗ್ರಂಥ ಭಾಂಡಾರ, ಧಾರವಾಡ
ಇಲ್ಲಿಯೂ ದೊರೆಯುವವು.

ಮುದ್ರಕ :
ಎನ್. ಎ. ಹೊಸಕೇರಿ
ವಿಜಯ ಮುದ್ರಾಲಯ
ಧಾರವಾಡ

# ನಮ್ಮ ಮಾತು

ಸಂಕಲ್ಪಿಸಿದಂತೆ 'ಕಿಚ್ಚ'ನ್ನು ಹೊತ್ತಿಸಿದ್ದಾಯಿತು. ಆದರೆ 'ಕಿಚ್ಚು' ಬಹಳೇ ತಡವಾಗಿ ವಾಚಕರಿಗೆ ಅರ್ಪಿಸುತ್ತಿದ್ದೇವೆ. ಆದಕ್ಕೆ ಕನ್ನಡಿಗರು ನಮ್ಮನ್ನು ಕ್ಷಮಿಸುವಿರೆಂದು ನಂಬಿದ್ದೇವೆ. ನಮ್ಮ ಮೊದಲನೆ ಪ್ರಕಟನೆಯಾದ "ಪರಮೇಶ್ವರ ಪುಲಕೇಶಿ"ಯನ್ನು ಸ್ವಾಗತಿಸಿದಂತೆ "ಕಿಚ್ಚ"ನ್ನು ಸಹ ತಾವೂ ಆದರದಿಂದ ಬರಮಾಡಿಕೊಳ್ಳುವಿರೆಂದು ನಂಬಿದ್ದೇವೆ. "ಪರಮೇಶ್ವರ ಪುಲಿಕೇಶಿ"ಯನ್ನು ಮುಂಬಯಿ ವಿಶ್ವವಿದ್ಯಾಲಯದವರು (ಪ್ರಿವ್ಹಿಯಸ್) ಕಾಲೇಜದ ಮೊದಲನೆ ತರಗತಿಗೆ ಪಠ್ಯ ಪುಸ್ತಕ (೩೯-೪೦) ವನ್ನಾಗಿ ನಿಯಮಿಸಿದ ಬಗ್ಗೆ ಅವರಿಗೆ ಕೃತಜ್ಞತಾಪೂರ್ವಕ ವಂದನೆಗಳು.

ನಮ್ಮ ಪ್ರಕಟನ ಮಂದಿರದ ಮೊದಲನೆ ಹೊತ್ತಿಗೆಯ ಪೋಷಕರಿಗೂ ಮತ್ತು ಆಶ್ರಯದಾತರಿಗೂ ನಮ್ಮ ಧನ್ಯವಾದಗಳು. ಇದೇ ಪ್ರಕಾರವಾಗಿ ನಮ್ಮ ಮುಂದಿನ ಪ್ರಕಟನೆಗಳಿಗೂ ತಾವುಗಳು ಸಹಾಯ ಮಾಡುವಿರೆಂದು ನಂಬಿದ್ದೇವೆ. ಶ್ರೀ ವಿದ್ಯಾರಣ್ಯ ಜಯಂತಿಗೆ ನಾವು ನಮ್ಮ ಮುಂದಿನ ಪ್ರಕಟನೆಯಾದ "ಸರ ಸಾಲಾರ ಜಂಗ" ಪುಸ್ತಕವನ್ನು ಅರ್ಪಿಸುತ್ತೇವೆ. ಆ ಮೇಲೆ ಚಂದಾ ಪದ್ಧತಿಯ ಮೇಲೆ ವರ್ಷಕ್ಕೆ ೪ ಪುಸ್ತಕಗಳನ್ನು ಕೊಡುವ ಏರ್ಪಾಡು ಮಾಡುತ್ತೇವೆ. ನಮ್ಮೀ ಸಾಹಸ ಮತ್ತು ಸೇವೆಗಳನ್ನು ತಾವು ಸ್ವೀಕರಿಸುವಿರೆಂದು ನಂಬಿದ್ದೇವೆ.

ನಮ್ಮ ಗೆಳೆಯರೂ, ಸಲಹೆಗಾರರೂ ಆದ ಕೀರ್ತಿ ಶೇಷ ಶ್ರೀ ಶಿವರಾಮ ಶಾಸ್ತ್ರಿ, ಕೊಪ್ಪಳ ಇವರ ಅಕಾಲ ನಿಧನದಿಂದ ನಮಗೆ ಅಪಾರ ದುಃಖ ವಾಗಿದೆ. ಅವರ ಕುಟುಂಬದವರ ದುಃಖದಲ್ಲಿ ನಾವು ಸಹಾನುಭೂತಿಯನ್ನು ವ್ಯಕ್ತಮಾಡುತ್ತೇವೆ. ಮಹನೀಯರು ಉತ್ತಮ ವರ್ಗದ ಸಾಹಿತಿಗಳೂ, ಕಲಾವಿದರೂ, ಸಾಹಸಿಗಳೂ ಆಗಿದ್ದರು. ನಿಜಾಮ ಕರ್ನಾಟಕದ ಏಳಿಗೆ ಗಾಗಿ ಸದಾ ದುಡಿಯುವವರಲ್ಲಿ ಇವರು ಮೊದಲನೆ ತರಗತಿಯವರಾಗಿದ್ದರು.

ಇವರು ಕೆಲವು ಅತ್ಯುತ್ತಮ ಕತೆಗಳನ್ನು ಬರೆದಿಟ್ಟಿದ್ದಾರೆ. ಅವನ್ನು ಕನ್ನಡಿಗರಿಗೆ ಅರ್ಪಿಸುವ ವಿಚಾರ ನಡೆಸಿದ್ದೇವೆ. ಪರಮಾತ್ಮನು ನಮ್ಮ ಗೆಳೆಯರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಬೇಡಿಕೊಳ್ಳುತ್ತೇವೆ.

ನಮ್ಮ ಪ್ರಕಟನ ಮಂದಿರಕ್ಕೆ ಸಹಾಯ ಮಾಡುತ್ತ ನಮಗೆ ಶ್ರೀ. ಬಿ. ಅಶ್ವತ್ಥನಾರಾಯಣರಾಯರ ಪರಿಚಯ ಮಾಡಿಸಿಕೊಟ್ಟ ಶ್ರೀ. ಡಾ. ಆರ್. ವೆಂಕಟರಾವ, ಹೈದರಾಬಾದ; ಇವರಿಗೆ ನಾವು ತುಂಬಾ ಕೃತಜ್ಞರು. ತಮ್ಮ ಅತ್ಯುತ್ತಮ ಕತೆಗಳ ಸಂಗ್ರಹವನ್ನು ನಮಗೆ ಪ್ರಕಟನೆಗಾಗಿ ಕೊಟ್ಟ ಬಗ್ಗೆ ಉತ್ತಮ ಕತೆಗಾರರಾದ ಶ್ರೀ. ಬಿ. ಅಶ್ವತ್ಥನಾರಾಯಣರಾಯರಿಗೆ ನಾವು ತುಂಬಾ ಋಣಿಗಳು. ಉತ್ತಮವಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ವಿಜಯ ಮುದ್ರಣಾಲಯದ ಒಡೆಯರಾದ ಶ್ರೀ. ಹೊಸಕೇರಿ ನಾರಾಯಣರಾಯರಿಗೆ ನಮ್ಮ ಧನ್ಯವಾದಗಳು.

೧ ಏಪ್ರೀಲ ೧೯೪೦ ಪ್ರಕಾಶಕರು

# ಒಂದೆರಡು ಮಾತುಗಳು

ಈ ಸಂಗ್ರಹದಲ್ಲಿ ಒಟ್ಟು ಒಂಬತ್ತು ಕತೆಗಳಿವೆ. ಅವುಗಳಲ್ಲಿ ಏಳು ಅಲ್ಲಲ್ಲಿ ಹಿಂದೆ ಪ್ರಕಟವಾಗಿದ್ದವು. ಉಳಿದವು ಹೊಸವು. ಪ್ರಕಟವಾಗಿದ್ದ ಏಳು ಕತೆಗಳ ಇಂದಿನ ರೂಪಿಗೂ ಅವುಗಳ ಪೂರ್ವದ ರೂಪಿಗೂ ಹೋಲಿಸಿದರೆ ಅವುಗಳಲ್ಲಿರುವ ಬದಲಾವಣೆಯು ಮನದಟ್ಟಾಗುವುದು. ಆಗ ಓದುಗರು ಅವನ್ನು ಹೊಸ ಕತೆಗಳೆಂದು ಕರೆಯುವರು. ನನ್ನ ಹೇಳಿಕೆಯಾದರೂ ಅವು ಹಳೆಯುವಲ್ಲ; ಹೊಸವು.

ನನ್ನ ಸ್ನೇಹಿತರಾದ ಡಾ. ಆರ್. ವೆಂಕಟರಾಯರು ಈ ಕತೆಗಳನ್ನು ಒಟ್ಟುಗೂಡಿಸಬೇಕೆಂದು ನನಗೆ ವಾತ್ಸಲ್ಯದಿಂದ ಆಣತಿಯಿತ್ತರು. ನಾನು ಅದರಂತೆಯೇ ಮಾಡಿದೆ. ಹೆಸರಿಡುವ ಪೌರೋಹಿತ್ಯದ ಭಾರವನ್ನು ಗೆಳೆಯರಾದ ಶ್ರೀಯುತ ಸಿದ್ಧನಾಥಪಂತರು ಮತ್ತು ಗುರುನಾಥ ಜೋಶಿಯವರು ಹೊತ್ತರು. ಆದುದರಿಂದ ಸಂಗ್ರಹವು ಓದುಗರ ಕೈಯಲ್ಲಿರುವುದು ಅವರ ಕೆಲಸ.—ಅದಕ್ಕಾಗಿ ಅವರಿಗೆ ನನ್ನ ಅಭಿವಂದನೆಗಳು.

ಮೊದಮೊದಲು ಈ ಸಂಗ್ರಹಕ್ಕೆ ಒಂದು ಉದ್ದವಾದ, ವಿಚಾರ ಪರಿಪ್ಲುತವಾದ ಪ್ರಸ್ತಾವನೆಯನ್ನು ಬರೆಯಬೇಕೆಂಬ ಹಿರಿದಾಶೆಯಿದ್ದಿತು. ಆದರೆ ಅದು ಈಗ ಲುಪ್ತವಾಗಿ ಹೋಗಿದೆ.

ನನ್ನೀ ಕತೆಗಳು— ಪ್ರತಿಯೊಂದೂ—ಅನುದಿನದನುಭವಗಳ ಚಿತ್ರ. ಅವುಗಳಲ್ಲಿ ಹಾಕಿ ನಲಿಯುವವರ ಚಿತ್ರಗಳಲ್ಲ.

ಎಲ್ಲ ಚಿತ್ರಗಳೂ ದುಃಖಪರಿಪೂರ್ಣವಾದುವು. ಕಾರಣವಿಷ್ಟೆ. ಅವು ಸಮಾಜಜೀವಿಯಾದ, ಆದರ ಸವಿಯನ್ನು ಅರಿತ ಲೇಖನಿಯ ಕೃತಿಗಳು.

ಅವು ವ್ಯಕ್ತಿಟೀಕೆಯಲ್ಲ—ಅವು ಸುಧಾರಣೆಯ ಮಾರ್ಗವನ್ನು ತಿಳಿಯ ಹೇಳುವ ಉನ್ನತಕಾರ್ಯಕ್ಕೆ ಕೈಹಾಕುವುದಿಲ್ಲ.

ಅವುಗಳ ಸೀಮೆಯ ಮೇರೆಯು ಬಹು ಕಿರಿದಾದುದು; ಸಂಕುಚಿತವಾದುದು.

ಅಸಾಮರ್ಥ್ಯೇಯರಾದ ಮಾನವರ ಜೀವನದಲ್ಲಿ ನನಗೆ ಬೇರೆ ಕಾಣಬರುವುದು ಏನೂ ಇಲ್ಲ. ನನಗೆ ಗೋಚರವಾಗುವುದು ತೀರ ಸ್ವಲ್ಪ ಭಾಗ.

ಅದು ಭೀಕರವಾದ, ಹಿಂಸಾಮಯವಾದ ಸಂಗ್ರಾಮ. ಆದರಲ್ಲಿ ಯಾವುದಕ್ಕೂ ಎಡೆಯಿಲ್ಲ.

ಸತ್ಯಕ್ಕೆ, ಶಕ್ತಿಗೆ ಮಾತ್ರ ಸ್ಥಾನವುಂಟು. ಉಳಿದವು ಕಾಲನ ಬಾಯಿಯಲ್ಲಿ ಹೊಕ್ಕು ನಾಮಾವಶೇಷವಾಗಬೇಕು.

ಮೂವರಲ್ಲಿಬ್ಬರಿಗೆ

ಜುಲೈ ರಾತ್ರಿಗಳ ಸ್ಮರಣಾರ್ಥವಾಗಿ

ಮೂರನೆಯವನ ಕಾಣಿಕೆ

ಬಿ. ಅಶ್ವತ್ಥನಾರಾಯಣರಾವ್

# ಪರಿವಿಡಿ


| | | |
|---|---|---|
| ೧ | ಜೀವನದ ಒಂದು ದೃಶ್ಯ | ೧ |
| ೨ | ಅಪರಾಧಿಯೇನು ? | ೧೦ |
| ೩ | ಸಂಶಯ ಪಿಶಾಚ | ೨೧ |
| ೪ | ಚರಿತ್ರ ಹೀನೆ | ೩೭ |
| ೫ | ಪಿತೃಹೀನ | ೪೯ |
| ೬ | ಒಂದು ವೇಳೆ | ೬೪ |
| ೭ | ಸಮಸ್ಯೆ. | ೭೬ |
| ೮ | ಸಂಭಾವಿತ | ೮೫ |
| ೯ | ಪರಿತ್ಯಕ್ತ | ೯೩-೧೦೬ |

# ಜೀವನದ ಒಂದು ದೃಶ್ಯ

೧

ಓದುತ್ತಾ ಕುಳಿತಿದ್ದವನ ಚಿತ್ತೈಕಾಗ್ರತೆಯು ಶಾರದೆಯಿಂದ ಭಂಗವಾಯಿತು. ಅವಳದು ಅದೊಂದು ವಿಲಕ್ಷಣವಾದ ಅಭ್ಯಾಸ. ತಾನು ಓದುತ್ತಿರುವಾಗ ಏನಾದರೂ ಒಂದು ಸೋಜಿಗವಾದ ವಿಷಯವು ಬರೆಯಲ್ಪಟ್ಟಿದ್ದರೆ, ನನಗೆ ಅದನ್ನು ಹೇಳಿ ತೋರಿಸದೆ ಕೊಡದಿದ್ದರೆ ಅವಳಿಗೆ ತೃಪ್ತಿಯಿರುತ್ತಿರಲಿಲ್ಲ ಈಗಿನದೂ ಅಂತಹದೇ ಒಂದು ಸಂದರ್ಭ. ಗತ್ಯಂತರವಿಲ್ಲದೆ "ಏನು?" ಎಂದು ಕೇಳಿದೆ.

"ಇಲ್ಲಿ ನೋಡಬಾರದೇ ಟಾಗೋರನು ಹೇಳುವುದನ್ನು. ಕವಿಗಳೂ, ತತ್ವಜ್ಞರೂ ಹಾಗೆಯೇ ಎಂದು ಕಾಣುತ್ತದೆ. ನೋಡಿ." ಎಂದು ಪುಸ್ತಕವನ್ನು ಕೊಟ್ಟು, ತನಗೆ ಸಂದಿಗ್ಧವಾಗಿದ್ದ ಭಾಗವನ್ನು ಬೆರಳು ಮಾಡಿ ತೋರಿದಳು. ನೋಡಿ ಓದಿಕೊಂಡೆ. ಕವಿಯು ಬರೆದಿದ್ದುದು ಇಷ್ಟೆ.

"Must you call me, you unquiet one? Then let the sad eyes of love vainly watch and weep. Let the lamp burn in the lonely house. Let the ferry boat take the weary labourers to their home. I leave behind my dreams and I hasten to your call."

ಓದಿದ ಬಳಿಕ ಶಾರದೆಯನ್ನು ಕೇಳಿದೆ "ಇದರಲ್ಲಿ ಏನಿದೆ?"

ಅವಳು "ಸರಿ ಹೋಯಿತು; ಅವಶ್ಯವಾದ ಯಾವುದೋ ಒಂದು ಭಾವನೆಗಾಗಿ ಸರ್ವತ್ಯಾಗವನ್ನೂ ಮಾಡುವ ಮೂರ್ಖರುಂಟೇ? ಕವಿಯು ಎಷ್ಟೇ ಆಗಲಿ ಕವಿ. ಜೀವನದ ವಿಷಯಗಳಿಗೂ ಮನದಲ್ಲಿ ಬರತಕ್ಕ ವಿಷಯಗಳಿಗೂ ಇರುವ ವಾಸ್ತವಿಕವಾದ ಭೇದವು ಆತನಿಗೆ

ತಿಳಿಯುವುದಿಲ್ಲ. ಆದರಿಂದ ಈ ಹೇಳಿಕೆಯು ತಪ್ಪು" ಎಂದು ವಾದಿಸಿದಳು.

ಈ ವಾದಕ್ಕೆ ವಿರುದ್ಧವಾಗಿ ನಾನು ಹಲವು ಬಗೆಯಾಗಿ ಉತ್ತರ ಹೇಳಿದೆ. ಅವಳಿಗೆ ಸಮಾಧಾನವಾಗಲಿಲ್ಲ. ಕವಿಯ ಸಂಗಡ ನನ್ನನ್ನೂ ಬುದ್ಧಿಹೀನನೆಂದು ಹೇಳಿಬಿಟ್ಟಳು. ಕೊನೆಗೆ ನಾನು "ನೋಡು, ಶಾರದೆ, ಈಗ ನಾವಿಬ್ಬರೂ ಕೂಡಿಲ್ಲವೇ?" ಈ ವಿಚಾರಕ್ಕೆ ನೀನು ಉತ್ತರ ಕೊಡಬಲ್ಲೆಯಾ? ಎಂದು ಕೇಳಬೇಕಾಗಿ ಬಂದಿತು.

ಅದಕ್ಕೆ ಅವಳ ಉತ್ತರವು ಸ್ವಲ್ಪ ತೀಕ್ಷ್ಣವಾಗಿ ಬಂದಿತು "ನಮ್ಮ-ನನ್ನ, ನಿಮ್ಮ-ಗೊಡವೆಯು ಜಗತ್ತಿಗೆ ಸೇರಿದುದಲ್ಲ. ಅದು ಕೇವಲ ವೈಯಕ್ತಿಕವಾದ ಸಂಬಂಧ. ಅದರ ಸಂಪರ್ಕ ಮಾತ್ರ ನಮ್ಮಿಬ್ಬರದು"

ಈ ಬಗೆಯ ತರ್ಕಕ್ಕೆ ಉತ್ತರಗೊಡಲು ನನ್ನಿಂದ ಸಾಧ್ಯವಿಲ್ಲ. ಅವಳು ಹೇಳಿದುದು ನಿಜ. ನಾನು, ಶಾರದೆ, ಮತ್ತು ಜಗತ್ತು, ಗುಂಪು ಕೂಡಲಾರದ ಸಾಮಗ್ರಿಯುಗಳು. ನಾನು ಅವಳು ಒಂದು; ಹಲವು ಸಾರಿ ನಮ್ಮಲ್ಲಿ ವ್ಯತ್ಯಾಸಗಳಿರಬಹುದು. ಆದರೂ ನಾವು ಒಂದೇ, ಲೋಕವು ಮಾತ್ರ ಬೇರೆ.

ವಿಧಿಯಿಲ್ಲದೆ ಈ ತರ್ಕದಿಂದ ಸೋತು, ನಾನು ಜೀವನದ ಒಂದು ದೃಶ್ಯವನ್ನು ತೆಗೆದು ಅವಳ ಮುಂದಿಟ್ಟೆ. ಅವಳು ಕೇಳತೊಡಗಿದಳು. ಆ ದೃಶ್ಯ ನನ್ನ ಪರಿಚಿತರ ಜೀವನದಲ್ಲಿ ನಡೆದು ಹೋದ ಸಂಗತಿ.

## ೨

"ಅಮ್ಮಾ"

ಉತ್ತರವಿಲ್ಲ.

"ಅಮ್ಮಾ, ಅಮ್ಮಾ, ಬಾಗಿಲು"

ಪುನಃ ನಿರುತ್ತರ.

"ಅಮ್ಮಾ, ಬಾಗಿಲು ತೆಗೆ"

ಈ ಸಾರಿ ಒಳಗಿನಿಂದ ಉತ್ತರವು ಬಂದಿತು "ಯಾರದು?"

" ನಾನು—ನಾರಾಯಣ "

ಒಳಗಿನಿಂದ ಅಗಣಿಯನ್ನು ತೆಗೆದು ಮಧ್ಯವಯಸ್ಸಿನ ಹೆಂಗುಸೊಬ್ಬಳು " ಎಷ್ಟು ಹೊತ್ತಿಗೆ ಮನೆಗೆ ಬರೋದು ? ಜ್ಞಾನವಿಲ್ಲವೇ ? " ಎಂದು ಗದರಿಸಿದಳು.

ಯುವಕನು ಮಾತನಾಡಲಿಲ್ಲ. ಸುಮ್ಮನೆ ಒಳಗೆ ಹೋಗಿ ಕೊಠಡಿಯಲ್ಲಿ ತನ್ನ ಅಂಗಿಯನ್ನು ಕಳಚಿ ಹಾಕಿ ಪುನಃ ಹೊರಗೆ ಬಂದು ನಲ್ಲಿಯ ಬಳಿ ಕೈಕಾಲುಗಳನ್ನು ತೊಳೆದುಕೊಂಡನು. ಹೆಂಗುಸು ಮಾತ್ರ ಇವೆಲ್ಲವನ್ನು ದುರದುರನೆ ನೋಡುತ್ತಾ ತೊಟ್ಟಿಯಲ್ಲಿಯೇ ನಿಂತುಕೊಂಡಿದ್ದಳು. ಒಳಗೆ ಬಂದೊಡನೆಯೇ "ಎಷ್ಟು ದಿನ ಹೇಳೋದು?" ಒಂದು ದಿನ ಹೇಳಿದರೆ ಸಾಲದೇ? ಕತ್ತೆಗಾದರೂ ಬುದ್ಧಿಯಿದೆ. ಹೇಳಿದರೆ ತಿಳಿಯುತ್ತೆ. ಎಲ್ಲಿ ಹೋಗಿದ್ದೆ ಇಷ್ಟು ಹೊತ್ತು ? ನಾಯಿ ತಿರುಗುವ ಹಾಗೆ ಅಲೆಯೋಕ್ಕೆ ?" ಎಂದು ಗರ್ಜಿಸಿದಳು.

ನಾರಾಯಣನು "ಅಮ್ಮಾ, ಪೇಟೆಗೆ ಹೋಗಿದ್ದೆ. ರಾಘವನು ಸಿಕ್ಕಿದ ಅವನ ಜತೆಯಲ್ಲಿ ಲಾಲ್-ಬಾಗಿಗೆ ಹೋಗಿದ್ದೆ. ಹೊತ್ತಾಗಿ ಹೋಯಿತು" ಎಂದು ಉತ್ತರಗೊಟ್ಟ.

ತಾಯಿಗೆ ಬಹಳ ಕೋಪ ಬಂದಿತು. 'ಸಾಕು ನಿನ್ನ ಬುದ್ಧಿಗೆ ನಿನ್ನ ಜನ್ಮ ಸುಡ. ಈ ಹೊತ್ತು ರಾಘವ ಸಿಕ್ಕಿದ. ನಾಳೆ ಹೀಘವ ಸಿಕ್ಕಿದ. ನಿನಗೆ ಸಿಕ್ಕೋಂ ಇರೋ ದಿನ ಎಂದು. ಅವರ ಜತೆ ಇವರ ಜತೆ ಹೋಗಿ ತಿರುಗಿಕೊಂಡು ಬಾ ಮನೆಗೆ, ನಿನಗೆ ಇಲ್ಲಿ ಕೂಡಿಸಿ ಮಾಡಿ ಹಾಕುತ್ತಾರೆ? '

"ಇಲ್ಲವಮ್ಮಾ, ಏನೋ ಹೊತ್ತಾಗಿ ಹೋಯಿತು."

"ಹೊತ್ತಾಗದೇ ಏನು? ಹೊತ್ತು ನಿನಗೆ ಕಾಯುತ್ತೇನು ? ಇನ್ನು ಮೇಲೆ ನಿನ್ನ ಕೆಲಸ ನೀನು ಮಾಡಿಕೊಂಡಿರೋ ಹಾಗಿದ್ದರೆ ಮನೆಯಲ್ಲಿರು. ಇಲ್ಲದಿದ್ದರೆ ನಿನ್ನ ಪಾಡು ಬಂದಹಾಗೆ ಯಾರ ಸಂಗಡ ಬೇಕೋ ಹೋಗು."

ಯುವಕನು ಮಾತನಾಡಲಿಲ್ಲ. ನೆಟ್ಟಗೆ ಹೋಗಿ ಎಲೆಯನ್ನು ಹಾಕಿಕೊಂಡು ಕುಳಿತನು. ತಾಯಿಯು ಏನೇನೋ ಬೈಯುತ್ತಾ ಮಾಡಿದ ಅಡಿಗೆಯನ್ನು ತಂದು ಬಡಿಸಿದಳು. ನಾರಾಯಣನು ಊಟ ವನ್ನು ಮಾತಿಲ್ಲದೆ ಮಾಡಿದನು. ಬಳಿಕ ಯಾವುದೋ ಪುಸ್ತಕವನ್ನು ತೆಗೆದುಕೊಂಡು ದೀಪದ ಒಳಿ ಓದಬೇಕೆಂದು ಕುಳಿತುಕೊಂಡನು.

ತಾಯಿಗೆ ಇದನ್ನು ಕಂಡು ಸಹಿಸದಾಯಿತು. ಕೋಪವುಂಟಾ ಯಿತು. ಕೂಡಲೇ "ಓದುವಾಗ ಓದಲಿಲ್ಲ. ಈಗ ಓದೋದಕ್ಕೆ ಪಾಪ ಕೂತುಕೊಂಡ. ಹೊತ್ತು ಸಾಲದು; ಪಾಪ, ನಾಳೆ ಪರೀಕ್ಷೆ ಇದೆ" ಎಂದು ವ್ಯಂಗ್ಯವಾಗಿ ಹೇಳಿದಳು.

ನಾರಾಯಣನಿಗೆ ಬಹಳ ವ್ಯಾಕುಲವಾಯಿತು. ಏನೂ ಮಾಡಲು ತೋರದೆ ಹಾಸಿಗೆ ಹಾಕಿಕೊಂಡು ಅದರ ಮೇಲೆ ಬಿದ್ದು ಹೊರಳಾಡ ಲಾರಂಭಿಸಿದನು. ಮನಸ್ಸಿನಲ್ಲಿ ಏನೇನೋ ಯೋಚನಾತರಂಗಗಳು ಬರಲಾರಂಭಿಸಿದವು.

× × × ×

ನಾರಾಯಣನಿಗೆ ಈಗ ಸುಮಾರು ಇಪ್ಪತ್ತು ವರ್ಷ ವಯಸ್ಸು. ಅವನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಿದ್ದನು. ಅದರಲ್ಲಿ ಅವ ನಿಗೆ ಅರ್ಧ ತೇರ್ಗಡೆಯಾಯಿತು. ಮುಂದೆ ಪುನಃ ಶಾಲೆಗೆ ಹೋಗಲು ಮನಸ್ಸಿರಲಿಲ್ಲ. ಆದುದರಿಂದ ಅವನು ಯಾವುದಾದರೊಂದು ಕೆಲಸ ವನ್ನು ದೊರಕಿಸಿಕೊಳ್ಳಬೇಕೆಂದು ಹವಣಿಸುತ್ತಿದ್ದ. ಆದರೆ ಇದು ವರೆಗೆ ಯಾವುದೂ ಸಿಕ್ಕಿರಲಿಲ್ಲ. ಅದಕ್ಕಾಗಿ ಬೇಕುಬೇಕಾದವರ ಮನೆ ಬಾಗಿಲುಗಳಿಗೆ ಅಲೆಹಾಕುತ್ತಿದ್ದ. ಆದರೆ ಅದರಿಂದ ಇನ್ನೂ ಉಪ ಯೋಗವಾಗಿರಲಿಲ್ಲ.

ಅವನ ತಾಯಿಯ ಹೆಸರು ನರಸಮ್ಮ. ಆಕೆಗೆ ಬಹಳ ಮುಂಗೋಪ. ಜತೆಗೆ ಬಾಯಿ ಬಹಳ. ಮಾತು ಆರಂಭವಾಯಿತೆಂ ದರೆ ಅದಕ್ಕೆ ಕೊನೆ ಮೊದಲಿರುತ್ತಿರಲಿಲ್ಲ. ಮನಸ್ಸಿಗೆ ಬಂದಂತೆ ನುಡಿ ಯುವಳು. ನಾರಾಯಣಗೆ ಬೈಯಿಸಿಕೊಂಡು ಸಾಕಾಗಿತ್ತು. ಆದರೆ

ಏನು ಮಾಡುವದು ತಾಯಿ "ಮಾತೃದೇವೋ ಭವ." ಎಂದು ಹಿಂದುಗಳ ಶಾಸ್ತ್ರ ಹೇಳುತ್ತದೆ

ಮಾರನೆಯ ದಿನ ನಾರಾಯಣನು ಸುಮಾರು ಎಂಟು ಗಂಟೆಯ ಹೊತ್ತಿಗೆ ಅಂಗಿ ಹಾಕಿಕೊಂಡು ತಾಯಿ ಇರುವ ಕಡೆಗೆ ಬಂದು "ಅಮ್ಮಾ, ಪೇಟೆಗೆ ಹೋಗಿಬರುತ್ತೇನೆ" ಎಂದು ಹೇಳಿದನು ಅದಕ್ಕೆ ತಾಯಿಯು "ಎಲ್ಲಾದರೂ ಹೋಗು, ಯಾರಿಗೇನು ಪ್ರಯೋಜನ" ಎಂದು ಉತ್ತರವಿತ್ತಳು

ನಾರಾಯಣನು ಮನಸ್ಸಿನಲ್ಲಿ "ಯಾರಿಗೇನು ಪ್ರಯೋಜನ" ವೆಂದು ಹೇಳಿಕೊಂಡು ಮನೆಬಿಟ್ಟು ಹೊರಟ. ಯಾವುದನ್ನೂ ಯೋಚಿಸುತ್ತಾ ದಾರಿ ಕ್ರಮಿಸತೊಡಗಿದನು. ಸ್ವಲ್ಪ ದೂರ ಕಳೆಯಿತು. ಇದ್ದಕ್ಕಿದ್ದ ಹಾಗೆ "ಅಯ್ಯೋ ಮಗು" ಎಂಬ ಚೀತ್ಕಾರವು ಕೇಳಬಂದಿತು.

ನಾರಾಯಣನು ತಲೆಯೆತ್ತಿ ನೋಡಿದನು ಮುಂದೆ ರಸ್ತೆಯಲ್ಲಿ ಸಣ್ಣ ಮಗುವೊಂದು ನಿರಾಂತಕವಾಗಿ ಆಡುತ್ತಿತ್ತು. ಹತ್ತು ಹೆಜ್ಜೆಗಳ ದೂರದಲ್ಲಿ ಒಂದು ಜಟಕಾ ಗಾಡಿಯು ನಾಗಲೋಟದಿಂದ ಬರುತ್ತಿತ್ತು. ಗಾಡಿಯವನು ಚಪ್ಪರಿಸುತ್ತಾ ಕುದುರೆಯನ್ನು ಓಡಿಸುತ್ತಲಿದ್ದನು. ಇಷ್ಟರಲ್ಲಿ ಮಗು ರಸ್ತೆಯಲ್ಲಿದ್ದುದನ್ನು ಕಂಡು ಗಾಬರಿಯಾಗಿ 'ಅಯ್ಯೋ, ಮಗು ಎಂದು ಅರಚಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡಳು. ಇನ್ನೊಂದು ಕ್ಷಣದಲ್ಲಿ ಗಾಡಿಯು ಮಗುವಿನ ಮೇಲೆ ಹರಿದು ಹೋಗಬೇಕು.

ಇಷ್ಟೆಲ್ಲವನ್ನು ನಾರಾಯಣನು ತಲೆಯೆತ್ತಿ ನೋಡಿದವನೇ ಗ್ರಹಿಸಿದನು. ಕೂಡಲೆ ಮುಂದಕ್ಕೆ ತಟ್ಟನೆ ನೆಗೆದು ಮಗುವನ್ನು ಎತ್ತಿಕೊಂಡನು. ಗಾಡಿಯು ಪಕ್ಕಕ್ಕೆ ತಗುಲಿ ಹಾದು ಹೋಯಿತು. ಎಲ್ಲಾ ಕ್ಷಣಾರ್ಧದಲ್ಲಿ ನಡೆದು ಹೋಯಿತು.

ನಾರಾಯಣನು ಏದುತ್ತಾ, ಏನೂ ತೋರದೇ ಮಗುವನ್ನೆತ್ತಿಕೊಂಡು ಬೀದಿಯಲ್ಲಿ ನಿಂತುಕೊಂಡಿದ್ದನು ಕೆಲವು ನಿಮಿಷಗಳ ನಂತರ ಮಗುವಿನ ಕಡೆ ನೋಡಿದನು. ಮಗು ಅವನಿಗೆ ಪರಿಚಿತರದು.

ನಾರಾಯಣನು ಮಗುವನ್ನು ಮನೆಯವರೆಗೆ ಸೇರಿಸಬೇಕೆಂದು ಹೊರಟನು. ನಾಲ್ಕೈದು ಮನೆಗಳನ್ನು ದಾಟಿ ಕೊನೆಗೆ ಒಂದು ಮನೆಯ ಮುಂದೆ ನಿಂತು "ಸುಭದ್ರಮ್ಮಾ" ಎಂದು ಕೂಗಿದನು.

ಒಳಗಿನಿಂದ ರೂಪರಾಶಿಯಾದ ಯುವತಿಯೊಬ್ಬಳು ಬಂದು "ಒಳಗೆ ಬರಬಾರದೇ ?" ಎಂದು ಕರೆದಳು.

"ಬರುತ್ತೇನೆ, ಆಗಲಿ ಮಗುವನ್ನು ಮಾತ್ರ ಇನ್ನು ಮೇಲೆ ಎಚ್ಚರಿಕೆಯಾಗಿ ನೋಡಿಕೋಮ್ಮ" ಎಂದು ಹೇಳಿ ನಡೆದ ವೃತ್ತಾಂತವನ್ನು ಹೇಳಿದನು.

ಸುಭದ್ರಮ್ಮನಿಗೆ ಕಣ್ಣುಗಳಲ್ಲಿ ನೀರು ತುಂಬಿ "ನಾರಾಯಣ ಈ ದಿನ ನೀನು ಮಗುವಿಗೆ ಪ್ರಾಣದಾನ ಮಾಡಿದೆ. ನೀನು ಸುಖವಾಗಿರಪ್ಪ" ಎಂದು ನುಡಿದಳು.

ನಾರಾಯಣನು, ಮನಸ್ಸಿನಲ್ಲಿ ಏನೋ ತೋರಿಬಂದು "ಈ ಜನ್ಮದಲ್ಲಿಲ್ಲ" ಎಂದುಕೊಂಡು ಯುವತಿಯ ಕಡೆಗೆ ತಲೆ ಎತ್ತಿ ನೋಡಿದನು. ಇಬ್ಬರೂ ಕೂಡಿ ಆಡಿದವರು. ವಯಸ್ಸಿನಲ್ಲಿ ಸ್ವಲ್ಪ ಅಂತರವಿತ್ತು. ಸುಭದ್ರಮ್ಮನು ನಾರಾಯಣನಿಗೆ ತಿಂಡಿ ತಂದುಕೊಟ್ಟಳು. ನಾರಾಯಣನು ಅದನ್ನು ತಿನ್ನುತ್ತಾ ಅಲ್ಲಿಯೇ ಮಾತನಾಡುತ್ತಾ ಕುಳಿತನು. ಹೊತ್ತು ಕಳೆದು ಹೋದುದು ತೋರಲಿಲ್ಲ. ಬಹಳ ಕಾಲದ ನಂತರ "ನಾನು ಮನೆಗೆ ಹೋಗುತ್ತೇನೆ. ಅವ್ವಾ ಕಾದಿರುತ್ತಾಳೆ" ಎಂದು ಹೇಳಿ ಮನೆಬಿಟ್ಟು ಸ್ವಗೃಹಕ್ಕೆ ಹೋಗಲು ಹೊರಟನು.

ಮನೆಗೆ ಬಂದೊಡನೆಯೇ ನರಸಮ್ಮನು "ಏನು ತಿಂಡಿಯಾಯ್ತೇನೋ? ಇನ್ನೂ ಬರೋಕ್ಕಾಗಲಿಲ್ಲ" ಎಂದಳು. ನಾರಾಯಣನು ನಡೆದುದನ್ನು ಹೇಳಿದನು. ಅದು ನರಸಮ್ಮನಿಗೆ ನಿಜವೆಂದು ತೋರಿಬರಲಿಲ್ಲ. ಕೋಪಗೊಂಡು "ಸುಳ್ಳು ಹೇಳಬೇಡ. ಸುಭದ್ರೆಯ ಜತೆಯಲ್ಲಿ ಹರಟುತ್ತಿದ್ದೆನೆಂದು ಬೊಗಳಬಾರದೇ? ಇಬ್ಬರಿಗೂ ನಾಚಿಕೆಯಿಲ್ಲ. ಈ ಜನ್ಮವಿಟ್ಟುಕೊಂಡಿರೋದಕ್ಕಿಂತ ಸನ್ಯಾಸಿಯಾಗಿ ಹೋಗು

ಸದಾ ಮೇಲು .... .... ಹೂಂ—ಸ್ನಾನಮಾಡು ಹೋಗು" ಎಂದು ಹೇಳಿ ಸಿಟ್ಟಿನಿಂದ ಅಡಿಗೆ ಮನೆಗೆ ಹೊರಟು ಹೋದಳು.

ನಾರಾಯಣನು ಸ್ನಾನಕ್ಕೆ ಹೋದನು. ಬಳಿಕ ಊಟವಾಯಿತು. ಆದರೆ ಮನಸ್ಸಿನಲ್ಲಿ ಒಂದು ದಾರುಣವಾದ ಚಿಂತೆ. ಶಾಂತಿಯಿಲ್ಲ. ತಾಯಿಯ ಎರಡು ಮಾತುಗಳು ಬಾಧಿಸತೊಡಗಿದವು. ಕೊಂಚ ಹೊತ್ತಿನ ಮೇಲೆ "ಆದುದಾಗಲಿ. ಯಾರಿಗೇನು ನಷ್ಟ" ಎಂದುಕೊಂಡು ಏನೋ ಮನಸ್ಸಿನಲ್ಲಿ ನಿಶ್ಚಯವನ್ನು ಮಾಡಿಕೊಂಡನು.

ಮಧ್ಯಾಹ್ನ "ಕೆಲಸವಿದೆ ಹೋಗುತ್ತೇನಮ್ಮಾ" ಎಂದು ಹೇಳಿ ಮನೆಬಿಟ್ಟು ಹೊರಟನು. ಸಾಯಂಕಾಲವಾಯಿತು; ನಾರಾಯಣನು ಬರಲಿಲ್ಲ. ರಾತ್ರಿಯಾಯಿತು; ನಾರಾಯಣನು ಮನೆಗೆ ಬರಲೇ ಇಲ್ಲ.

ನರಸಮ್ಮನು ಕಾದುಕಾದು ಬೇಸತ್ತು, ಕೊನೆಗೆ ಮನಸ್ಸಿಜ್ಜೈಯುತ್ತ ಮಲಗಿದಳು.

× × × ×

ಒಂದೆರಡು ದಿನಗಳ ನಂತರ ಅದೇ ಬೀದಿಯಲ್ಲಿ ಸಣ್ಣ ವಯಸ್ಸಿನವನಾದ ಸನ್ಯಾಸಿಯು ಶುಭ್ರವಾದ ಕಾವಿಯನ್ನು ಧರಿಸಿ, ಭಗವನ್ನಾಮವನ್ನೇ ಹಾಡುತ್ತಾ ಭಿಕ್ಷೆಗೆ ಬಂದನು. ಅವನನ್ನು ಬೀದಿಯವರು ನೋಡಿ "ಇದೇನು ಬಂತು ಕೇಡುಗಾಲ?" ಎಂದುಕೊಂಡು ನರಸಮ್ಮನ ಮನೆಗೆ ಹೋಗಿ "ಬೀದಿಯಲ್ಲಿ ಬಂದು ನೋಡಿ" ಎಂದು ಕರೆದರು.

ನರಸಮ್ಮನು ಬಂದು ನೋಡಿದಳು. ಒಡನೆಯೇ ಬಹಳ ದುಃಖವಾಯಿತು; ರೋಷವೂ ಬಂದಿತು. "ಸುಟ್ಟ ಮೋರೆಯವ. ಹೊಟ್ಟೆಯಲ್ಲಿ ಹುಟ್ಟಿ ಉರಿಸುತ್ತಾನೆ" ಎಂದು ಅಳುತ್ತಾ ಒಳಗೆ ಹೊರಟು ಹೋದಳು

ಸನ್ಯಾಸಿಯು ಮುಂದೆ ಹೊರಟು ಸುಭದ್ರಮ್ಮನ ಮನೆ ಬಾಗಿಲ ಬಳಿ ನಿಂತು, ಗದ್ಗದಸ್ವರದಿಂದ "ಭಿಕ್ಷ ನೀಡಿ ತಾಯಿ" ಎಂದು ಕೇಳಿ

ದನು. ಒಳಗಿನಿಂದ ಸುಭದ್ರೆಯು ಒಂದು ಹಿಡಿ ಭಿಕ್ಷವನ್ನು ತಂದಳು ಭಿಕ್ಷುಕನನ್ನು ನೋಡಿ ಎದೆಯೊಡೆದು ಹೋಯಿತು. ಕಂಣುಗಳಲ್ಲಿ ನೀರು ತುಂಬಿದವು. ಮೆಲ್ಲಗೆ "ನಾರಾಯಣ" ಎಂದುಸಿರಿದಳು.

ಸನ್ಯಾಸಿಯು ಮುಖವನ್ನು ಸ್ನೇಹಪೂರ್ಣದೃಷ್ಟಿಯಿಂದ ನೋಡಿದನು. ಸುಭದ್ರೆಯ ಕೈಯಲ್ಲಿದ್ದ ಅಕ್ಕಿ ಮೆಲ್ಲಗೆ ಕೆಳಗೆ ಸರಿಯುತ್ತಿತ್ತು. ಬಳಿಕ ತನ್ನಲ್ಲಿಯೇ ತಾನು "ಇಬ್ಬರ ದರ್ಶನವನ್ನು ಮಾಡಬೇಕೆಂದು ಆಶೆಯಿತ್ತು. ಒಂದು ಕಡೆ ತಾಯಿ-ಮತ್ತೊಂದು ಕಡೆ——" ಎಂದು ಕೊಂಡು

"ನಾ ಮಾತಾ ನಾ ಪಿತ್ರ...." ಎಂದು ಹಾಡಿದನು. ಬಳಿಕ ಉಚ್ಚ ಸ್ವರದಲ್ಲಿ ".... ತ್ವಮೇರಾ ಭವಾನಿ" ಎಂದು ಸಾರುತ್ತ ಮುಂದೆ ಹೊರಟನು.

ಸುಭದ್ರೆಯು ಎನೆಯುಕ್ಕಡೆ ನೋಡುತ್ತಾ ನಿಂತಳು ತಟ್ಟನೆ ದಾರಿಗೆ ಬಂದು "ನಾರಾಯಣ, ನಾರಾಯಣ" ಎಂದು ಕೂಗಿದಳು.

ಇಷ್ಟರೊಳಗಾಗಿ ಕೈಯಲ್ಲಿದ್ದ ಕಾಳುಗಳು ನೆಲದಮೇಲೆ ಬಿದ್ದು ಹರಡಿ ಹೋಗಿದ್ದವು.

೩

ಶಾರದೆಯು ಮಾತನಾಡಲಿಲ್ಲ. ಕಂಣುಗಳಲ್ಲಿ ಕಂಬನಿಗಳು ಪಿಪಿದಿದ್ದವು. ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ "ಪಾಪ, ಅನ್ಯಾಯವಾಯಿತು. ಆದರೆ ಕವಿಯ ವಾಕ್ಯಕ್ಕೂ ಇದಕ್ಕೂ ಏನು ಸಂಬಂಧ?" ಎಂದು ಪ್ರಶ್ನೆ ಹಾಕಿದಳು.

"ಸಂಬಂಧವಿಲ್ಲದೆ ಇಲ್ಲ. ವಾತಾವರಣದ ಬಲದಿಂದ ಅತಿ ಸೂಕ್ಷ್ಮವಾದ ಬಯಕೆಯು ಮನದಲ್ಲಿ ಮೂಡಿ ಬಲಿತು, ವಾತಾವರಣದ ಸಹಾಯದಿಂದಲೇ ಬೆಳೆಯಬಹುದು. ಇದಕ್ಕೆ ಹೆಚ್ಚಿಗೆ ನಾನು ಹೇಳುವುದಿಲ್ಲ." ಎಂದು ಪ್ರತ್ಯುತ್ತರವನ್ನು ಕೊಟ್ಟೆ. ಈ ಉತ್ತರದಿಂದ ಅವಳ ಮನದಲ್ಲಿದ್ದ ಸಂಶಯವು ದೂರವಾಗಲಿಲ್ಲ. "ಅಂದರೆ?" ಎಂದು ಪುನಃ ಕೇಳಿದಳು.

"ಅಂದರೆ, ಅದು ಹೋಗಲಿ ಬಿಡು. ಈಗ ನಿಮ್ಮಿಬ್ಬರ ವಿಷಯವನ್ನು ವಿಚಾರ ಮಾಡು ... ... ನನಗೆ ಮಾತ್ರ ನೀನು "ತ್ರಿಸೋಕ್ಷಭವಾಸ" ಉಳಿದುದೆಲ್ಲವೂ .."

ನನ್ನ ಉತ್ತರವು ಪೂರ್ತಿಯಾಗಲಿಲ್ಲ. ಅವನ ನುಡಿಯು ಅದನ್ನು ಅರ್ಧದಲ್ಲಿಯೇ ನಿಲ್ಲಿಸಿತು

"ನಿನಗೆ ಬುದ್ಧಿಯಿಲ್ಲ"

ಅವನು ಹೇಳಿದುದು ನಿಜ ನನಗೆ ಬುದ್ಧಿಯಿಲ್ಲ. ಅವನಿಗೂ ಇಲ್ಲ ಇದ್ದಿದ್ದರೆ ನಾವು ಸಂಗಡ ಇರುತ್ತಿರಲಿಲ್ಲ.

ಬುದ್ಧಿಯಿಲ್ಲದುದರಿಂದ ಮನದಲ್ಲಿ ಜನಿಸಿದ ಅವ್ಯಕ್ತ ಭಾವನೆಯನ್ನು ರೂಪುಗೊಳಿಸಲು ಅವನ ಬಳಿ ಹೋದೆ. ಶಾರದೆಯು ನಗುತ್ತಾ ಓಡಿದಳು.

ಈಗ ನಾನು ನಿಜವಾಗಿಯೂ ಬೆಂಗೇಡಿ. ಕಾರಣವನ್ನು ನೀವು ಹೇಳಬಹುದು

# ಅಪರಾಧಿಯೇನು ~ ~ ~ ~

೧

ಕಾಂಗ್ರೆಸ್ಸಿನವರು ಕಾನೂನುಗಳನ್ನು ಉಲ್ಲಂಘಿಸುತ್ತಿದ್ದ ಸಮಯ ವದು. ಎಲ್ಲ ಕಡೆಗಳಲ್ಲಿಯೂ ಕಾನೂನುಭಂಗ ಚಳವಳಿ ಕಾರಾಗೃಹ ಗಳನ್ನು ತುಂಬುವ ದಿನಗಳವು. ಜೀವನವು ಹರಿಯಬೇಕಾಗಿದ್ದ ಪಾತ್ರ ದಲ್ಲಿ ಹರಿಯದೆ ತನ್ನದೇ ಒಂದು ಕಟ್ಟಿಲ್ಲದ, ಸ್ವತಂತ್ರವಾದ ಪಾತ್ರವನ್ನು ಆಯ್ದು ಹರಿಯುತ್ತಿದ್ದ ವೇಳೆಯದು. ನಮ್ಮ ಪರಿಚಯದವರಲ್ಲಿ ಬಹುಮಂದಿ ಹೊರಗಿರಲಿಲ್ಲ.

ನಾನು ಶಾರದೆಯೂ ಕೂಡಿ ಅನೇಕಸಾರಿ ಈ ವಿಚಾರವಾಗಿ ಮಾತನಾಡಿದ್ದೆವು. ಅವಳದು ಒಂದು ಪಂಗಡ; ನನ್ನದು ಬೇರೊಂದು. ಆದರಿಂದಲೇ ತರ್ಕ. ಹಾಗಿಲ್ಲದಿದ್ದರೆ ಇಬ್ಬರೂ ಒಟ್ಟು ಗೂಡಿ ಸಾಮ್ರಾಜ್ಯದವರ ಆತಿಥ್ಯವನ್ನು ಸ್ವೀಕರಿಸಿ ಎಷ್ಟೋ ದಿನಗಳಾಗಿ ಹೋಗಿರುತ್ತಿತ್ತು. ಹಲಕೆಲವು ಕಾರಣಗಳಿಂದ ನಾನು ಇನ್ನೂ ಹೊರ ಗಿದ್ದೆ. ಆದರೂ ಸಹಾ ನಾನು ಹೊರಗೆ ಇರಬಹುದಾದ ದಿನಗಳ ಸಂಖ್ಯೆಯು ಅತ್ಯಲ್ಪವಾಗಿತ್ತು.

ಶಾರದೆಯು ನನ್ನನ್ನು ಒಂದು ಬಿರಸಾದ ಪ್ರಶ್ನೆಯನ್ನು ಕೇಳಿ ದಳು. ನಿಯತವಾದ ಕಟ್ಟಳೆಗಳನ್ನು ನ್ಯಾಯಪಂಥಗಳನ್ನು ಅನುಸರಿ ಸದೆ ಬೇರೊಂದು ದಾರಿಯನ್ನು ಹಿಡಿಯುವುದು ತಪ್ಪೆಂದು ಅವಳು ಹಟಹಿಡಿದಳು. ನಾನು ಬಹಳವಾಗಿ ಅವಳನ್ನು ಬದಲಾಯಿಸಲು ಪ್ರಯತ್ನಿಸಿದೆ. ಉಪಯೋಗವಾಗಲಿಲ್ಲ. ಕೊನೆಗೆ ನಮ್ಮ ಉದಾ ಹರಣೆಯನ್ನೇ ತೆಗೆದುಕೊಂಡು ನಮ್ಮ ಸಮಾಜ ಬಾಹಿರತೆಯನ್ನು ತೋರಿಸಿದೆ. ಅವಳು ನಕ್ಕು ಸಮಾಜಕ್ಕೆ ಬುದ್ಧಿಯಿಲ್ಲವೆಂದು ಹೇಳಿ ಬಿಟ್ಟಳು.

ಇದರಿಂದ ನನಗೆ ನನ್ನ ಪಕ್ಷವನ್ನು ಸಾಧಿಸಲು ಅವಕಾಶವಾಯಿತು. ಪ್ರತಿಷ್ಠಿತವಾದ ಸಮಾಜಕ್ಕೆ ಅರಿವು ಕಡಿಮೆಯಾಗಿದ್ದರೆ, ಅದರ ನಿಯಮಗಳನ್ನು ಅಲ್ಲಗಳೆದು ಮುಂದೆ ಅಡಿಯಿಟ್ಟರೆ ತಪ್ಪಲ್ಲವೆಂದು ವಾದಿಸಿದೆ. ಕೆಲಮಟ್ಟಿಗೆ ಒಪ್ಪಿಕೊಂಡಳು. ನನ್ನ ಪಕ್ಷವನ್ನು ಸಮರ್ಥಿಸಲು ಮೇಡಾಂ ಬ್ಲಾವಟ್ಸ್ಕಿಯ ಒಂದು ವಾಕ್ಯವನ್ನು ಉದ್ಧರಿಸಿದೆ.

" Duty is that which is due to humanity especially to those who are poorer and more helpless than ourselves."

ಶಾರದೆಯು ಇದರ ನಿಜಾಂಶವನ್ನು ಒಪ್ಪಿದಳು. ಆದರೆ ಸ್ತ್ರೀಬುದ್ಧಿಗನುಸರಿಸಿ ಹಿಂದಕ್ಕೆ ಜಾರತೊಡಗಿದಳು. ಇದ್ದಕ್ಕಿದ್ದ ಹಾಗೆ " ಆ ಅಜ್ಜಿಯ ನೆನಪಿದೆಯೇ ? " ಎಂದು ಕೇಳಿದಳು

ಯಾವ ಅಜ್ಜಿಯೆಂದು ನನಗೆ ಅರ್ಥವಾಗಲಿಲ್ಲ. ಯಾರೆಂದು ಕೇಳಲು ಅಜ್ಜಿಯ ಕಥೆಯನ್ನು ಅವಳೇ ಹೇಳಿದಳು.

೨

" ಅಜ್ಜಿಗೆ ಈಗ ದೇಹ ಸ್ಥಿತಿ ಹೇಗಿದೆ? "

" ಹೆಚ್ಚು ಇಲ್ಲ; ಕಡಿಮೆಯೂ ಇಲ್ಲ. '

ಮಾತನಾಡುತ್ತಿದ್ದವರು. ಇಬ್ಬರು ಸ್ತ್ರೀಯರು ಅವರ ಮೋರೆಗಳಲ್ಲಿ ದುಡಿದು ಆಯಾಸಗೊಂಡಿದ್ದವರಿಗೆ ಇರಬೇಕಾಗಿದ್ದ ಗುರುತುಗಳು ಹೇರಳವಾಗಿದ್ದವು. ಇಬ್ಬರೂ ಹೊರಗೆ ನಿಂತಿದ್ದ–ಬಾಗಿಲಬಳಿ ಇದ್ದ–ಕಾರಣವು ಒಂದೇ. ಅಂಚೆ ಜವಾನನ ಬರುವನ್ನು ಇದಿರು ನೋಡುತ್ತಿದ್ದರು.

" ದೇವರು ಒಳ್ಳೆಯದು ಮಾಡುವನೆಂದು ಆ ಮುದುಕಿಗೆ ಬಲವಾದ ನಂಬುಗೆ ಆದರೆ ನನಗೆ ಆ ವಿಶ್ವಾಸವಿಲ್ಲ. ಚೀ, ಪಾಪ. ಅಜ್ಜಿಯು

ಬಹು ಒಳ್ಳೆಯವಳು. ಇದು, ನೋಡಮ್ಮ, ಒಳ್ಳೆಯವರಿಗೆ ಕಾಲವಲ್ಲ. ಕೆಟ್ಟವರನ್ನು ನೋಡು ಎಷ್ಟು ಆನಂದದಿಂದ ಇರುತ್ತಾರೆ."

"ಇರಬಹುದು. ಅವರಿಗೇನು ಕೊರತೆ? ಇಹದಲ್ಲಿ ಸಂಪತ್ತಿದೆ, ಸಂತೋಷವಿದೆ. ಆದರೆ ದೇವರು ದೊಡ್ಡವನು ಪರಲೋಕದಲ್ಲಿ ನೋಡಿಕೊಳ್ಳುತ್ತಾನೆ. ಆದರೂ ಸಹ ಇಹದಲ್ಲಿ ಸೌಖ್ಯವಿದ್ದರೆ ಪರದಲ್ಲಿ ಬೇಕಾದ್ದು ಆಗಲಮ್ಮಾ ಸಹಿಸಬಹುದು." ಎಂದು ಮೊದಲು ಮಾತನಾಡಿದ ಯುವತಿಯು ಹೇಳಿದಳು

ಇನ್ನೊಬ್ಬಳು. "ಸರಿ, ಆದರೆ ಅಜ್ಜಿಗೆ ಹಾಗೆ ಹೇಳಿದರೆ ಸಿಟ್ಟು ಬರುವುದು. "ಹೌದು, ಅದು ಆ ಮುದುಕಿಗೆ ಸರಿ ಬರುವುದಿಲ್ಲ "

ಈ ಮಾತುಕತೆಗಳಿಗೆ ಕಾರಣಳಾದ ಅಜ್ಜಿಯು ತನ್ನ ಕೊಠಡಿಯಲ್ಲಿ ಮಲಗಿದ್ದಳು. ಆ ವೃದ್ಧೆಗೆ ಸುಮಾರು ತೊಂಭತ್ತು ವರ್ಷಗಳಾಗಿದ್ದವು. ವಯಸ್ಸಾದುದರಿಂದ ಅವಳಿಗೆ ಕಣ್ಣು ಕಾಣುತ್ತಿರಲಿಲ್ಲ. ಆಕೆಯ ಸಂಸಾರದಲ್ಲಿ ಎಲ್ಲವೂ ಇದ್ದುವು ಆದರೆ ಸಂತಾನರಲ್ಲಿ ಒಬ್ಬರೂ ಬದುಕಿರಲಿಲ್ಲ. ಗೋಪಾಲನೆಂಬ ದೌಹಿತ್ರನನ್ನು ಮಾತ್ರ ಬಿಟ್ಟರೆ ಆ ಮುದುಕಿಯು ಜಗತ್ತಿನಲ್ಲಿ ಏಕಾಕಿನಿಯು

ಗೋಪಾಲನು ಇಲ್ಲಿ ಇಂಜನಿಯರ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಇನ್ನೂ ಹೆಚ್ಚು ಓದಬೇಕೆಂದು ವಿಲಾಯತಿಗೆ ಹೋಗಿದ್ದನು ಹೋಗಿ ಸುಮಾರು ಎರಡು ವರ್ಷಗಳಾಗಿದ್ದವು. ಹೋಗುವ ವೇಳೆಯಲ್ಲಿ ತನ್ನ ನೆರೆಹೊರೆಯವರಿಗೂ ತನ್ನ ಸ್ನೇಹಿತರಿಗೂ ಅಜ್ಜಿಯನ್ನು ನೋಡಿಕೊಳ್ಳುವಂತೆ ಹೇಳಿದ್ದನು

ಅಜ್ಜಿಯನ್ನು ಕಂಡರೆ ಎಲ್ಲರಿಗೂ ಪ್ರೀತಿ. ಆದುದರಿಂದ ಗೋಪಾಲನು ಹೇಳಿದುದು ಯಾರಿಗೂ ಭಾರವಾಗಿ ತೋರಲಿಲ್ಲ ನೆರೆಹೊರೆಯವರು ಬಂದು ಅಜ್ಜಿಗೆ ಬೇಕಾದುದೆಲ್ಲವನ್ನೂ ಸಂತಸದಿಂದ ಮಾಡಿಕೊಡುತ್ತಿದ್ದರು. ಆದರೆ ಈಗ ಸ್ವಲ್ಪ ದಿನಗಳಿಂದ ಅಜ್ಜಿಗೆ ದೇಹದಲ್ಲಿ ಆರೋಗ್ಯವಿರಲಿಲ್ಲ ಏನೋ ಒಂದು ಸಂಕಟ. ಸಾಲದುದಕ್ಕೆ ಮನೋವ್ಯಥೆಯೊಂದು.

ಗೋಪಾಲನು ಹೋದವನು ಯಾವಾಗಲೂ ವಾರಕ್ಕೆ ಎರಡು ಕಾಗದಗಳನ್ನು ಬರೆಯುತ್ತಿದ್ದನು. ಯಾವ ಕಾರಣದಿಂದಲೇ ಏನೋ ತಿಳಿಯದು. ಸುಮಾರು ಒಂದು ತಿಂಗಳಿಂದ ಅವನಿಂದ ಕಾಗದ ಬಂದಿರ ಲಿಲ್ಲ; ಸಮಾಚಾರವೂ ತಿಳಿದಿರಲಿಲ್ಲ ಇವರಿಂದ ಪಾಪ, ಆ ಮುದುಕಿಗೆ ಬಹಳ ಕಾತರ.

ಈ ಕಾತರತೆಯಿಂದ ಕಾಹಿಲೆಯಿದ್ದ ಮುದುಕಿಯು ಎರಡು ಮೂರು ದಿನಗಳಿಂದ ಬಹಳ ಕ್ಷೀಣಸ್ಥಿತಿಗೆ ಬಂದಿದ್ದಳು. ನೆರೆಹೊರೆಯ ವರು ನೋಡಿ ದೈವಚಿತ್ತವು ಹೇಗಿದೆಯೋ ಎಂದು ಯೋಚಿಸುತ್ತಿದ್ದರು.

ರಾಮು ಆ ಊರಿಗೆ ಅಂಚೆಜವಾನ. ಗೋಪಾಲನೂ ಅವನೂ ಕೂಡಿ ಆಡಿದವರು; ಒಟ್ಟಿಗೆ ಬೆಳೆದವರು ರಾಮುವಿನ ದುರಾದೃಷ್ಟ ದಿಂದ ಯಾವ ಪರೀಕ್ಷೆಯೂ ಆಗಲಿಲ್ಲ. ಬಹಳ ಓದುವುದಕ್ಕೂ ಅವ ನಿಗೆ ಅನುಕೂಲವಿರಲಿಲ್ಲ. ತಂದೆ-ತಾಯಿಗಳು ಬಡವರು ಯಾರನ್ನೋ ಅವಲಂಬಿಸಿ ಅಂಚೆಮನೆಯಲ್ಲಿ ಕೆಲಸಕ್ಕೆ ಸೇರಿದ್ದ.

ಅಜ್ಜಿಯನ್ನು ಕಂಡರೆ ರಾಮುವಿಗೆ ಬಹಳ ವಿಶ್ವಾಸವಿತ್ತು. ಭಕ್ತಿ ಯಿತ್ತು. ಗೋಪಾಲನ ಕಾಗದ ಬಂದರೆ ಮೊಟ್ಟಮೊದಲು ಆ ಕಾಗದ ವನ್ನು ಅಜ್ಜಿಗೆ ತಂದುಕೊಟ್ಟು ನಂತರ ತನ್ನ ಕೆಲಸದಲ್ಲಿ ಮಗ್ನನಾಗು ತ್ತಿದ್ದನು. ಆದರೆ ಕಾಗದಗಳು ಇಲ್ಲದಿದ್ದರಿಂದ ಅವನು ಈ ದಿನ ನಾವ ಧಾನವಾಗಿ ಬೀದಿಯಲ್ಲಿ ಬರುತ್ತಿದ್ದ. ಬಳಿಯಲ್ಲಿ ಹಲವು ಕಾಗದಗಳು ಮಾತ್ರ ಇದ್ದವು

ಮನೆಯೊಳಗೆ ಮುದುಕಿಯು ಚಡಪಡಿಸುತ್ತಿದ್ದಳು ಆ ಶಬ್ದ ವನ್ನು ಕೇಳಿ ಹೊರಗಿದ್ದ ಹೆಂಗುಸರಲ್ಲೊಬ್ಬಳು ಒಳಗೆ ಹೋಗಿ 'ಅಜ್ಜಿ, ಕೂಗಿದೇನು, ಏನು ಬೇಕು ?' ಎಂದು ಕೇಳಿದಳು.

"ಇಲ್ಲ, ಕಂದ, ಏನೂ ಬೇಡ. ನನಗೆ ಕಣ್ಣು ಕಾಣೋದಿಲ್ಲ.– ಆದರೆ ಇದ್ದಕ್ಕಿದ್ದ ಹಾಗೆ ಗೋಪಾಲ ಬಂದುನಿಂತ ಹಾಗಾಯಿತು" ಎಂದು ನುಡಿದಳು. ಬಳಿಕ ಪುನಃ "ರಾಮು ಕಾಗದ ತಂದನೇನು ?" ಎಂದು ಪ್ರಶ್ನೆ ಹಾಕಿದಳು.

"ಇನ್ನೂ ಇಲ್ಲ."

ಮುದುಕಿಯು ವ್ಯಸನಚಿತ್ತಳಾಗಿ ನಿಟ್ಟುಸಿರಿಟ್ಟು ಪಕ್ಕಕ್ಕೆ ಹೊರಳಿ ಮಲಗಿದಳು. ರಮಣಿಯು ಮೆಲ್ಲನೆ ಎದ್ದು ಹೊರಬಾಗಿಲಬಳಿ ಪುನಃ ಬಂದುನಿಂತಳು. ನಿಂತವಳು ತಲೆಯಾಡಿಸುತ್ತಾ "ಅಜ್ಜಿ ಸ್ಥಿತಿಯು ಸರಿಯಾಗಿಲ್ಲ. ವೈದ್ಯರನ್ನು ಕರೆಯಿಸುವುದು ಒಳ್ಳೆಯದು" ಎಂದು ತನ್ನ ಅಭಿಪ್ರಾಯವನ್ನು ಕೊಟ್ಟಳು. ಅದಕ್ಕೆ ಎರಡನೆಯವಳು "ಕರೆಯಿಸುವುದು ಉತ್ತಮ" ವೆಂದು ತನ್ನ ಸಮ್ಮತಿಯನ್ನಿತ್ತಳು.

ಈ ಹೊತ್ತಿಗೆ ಸರಿಯಾಗಿ ರಾಮು ಆ ಬೀದಿಯಲ್ಲಿ ಕಾಲು ಹಾಕಿದನು. ಮುಂದೆ ಮುಂದೆ ತೀವ್ರವಾಗಿ ಬಂದು ಅಜ್ಜಿಯನ್ನು ಕಾಣಲು ಅವನಿಗೆ ಇಂದು ಮನಸ್ಸಿಲ್ಲ. ಅಜ್ಜಿಯ ಹೆಸರಿಗೆ ಒಂದು ಕಾಗದವು ಬಂದಿತ್ತು.

ಸೀಮೆಯಿಂದ ಬಂದ ಕಾಗದವನ್ನು ರಾಮುವು ಕೈಗೆ ತೆಗೆದುಕೊಂಡ ಕೂಡಲೆ ಅವನಿಗೆ ಅಂಜಿಕೆಯಾಯಿತು. ಕಾಗದದ ಮೇಲಿನ ಅಕ್ಷರವು ಗೋಪಾಲನದಲ್ಲ. ಬೇರೆ ಯಾರದೋ ಇತ್ತು. ಸಾಲದುದಕ್ಕೆ ಲಕೋಟೆಯ ಸುತ್ತಲೂ ಕರಿಗೆರೆಯು ಬೇರೆ ಅಚ್ಚು ಮಾಡಲ್ಪಟ್ಟಿತ್ತು. ರಾಮುವಿಗೆ ಕರಿಗೆರೆಯೆಂದರೆ ಮರಣಸೂಚಕ ಚಿನ್ಹೆಯೆಂದು ಅಲ್ಪಸ್ವಲ್ಪವಾಗಿ ತಿಳಿದಿತ್ತು. ಸೀಮೆಯಿಂದ ಈ ಕಾಗದವು ಅಜ್ಜಿಯ ಹೆಸರಿನಲ್ಲಿ ಬರಬೇಕಾದರೆ, ಗೋಪಾಲನಿಗೆ ಏನೋ ಆಗಿದೆಯೆಂದು ಅವನು ಶಂಕಿಸಿದನು ಹಾಗೆ ನಂಬಲು ಮನಸ್ಸು ಒಪ್ಪದು.

ಅಂಚೆಯ ಇಲಾಖೆಯ ನಿಯಮಾನುಸಾರವಾಗಿ ಅವನು ಬಂದ ಕಾಗದವನ್ನು ವಿಳಾಸಗಾರರಿಗೆ ಕೊಡಬೇಕಾಗಿತ್ತು. ನಿಯಮವಿರಬಹುದು. ಆದರೆ ಇಂತಹ ಕಾಗದವನ್ನು ಬಡಮುದುಕಿಗೆ ಕೊಡುವುದು ಹೇಗೆ? ಕೊಡದಿದ್ದರೆ ತನ್ನ ಕರ್ತವ್ಯವನ್ನು ತಾನು ಪಾಲಿಸಿದಂತೆ ಆಗುವುದಿಲ್ಲ.

ಪಾಪ! ರಾಮುವಿಗೆ ಮುಂದಿನ ಮಾರ್ಗವು ತೋರಲಿಲ್ಲ. ಗೊಂದಲದಲ್ಲಿ ಬಿದ್ದು ವಿಚಾರ ಮಾಡತೊಡಗಿದನು. ನಿಧಾನವಾಗಿ-

ದಾಟಿ ತೋರದೆ–ರಾಮು ಮುಂದೆ ನಡೆಯತೊಡಗಿದನು. ಮನಸ್ಸಿನಲ್ಲಿ ಒಂದು ವಿಷಯವು ತಟ್ಟನೆ ಹೊಳೆಯಿತು.

"ಅಜ್ಜಿಗೆ ಹೇಗಿದ್ದರೂ ಸ್ವಸ್ಥವಿಲ್ಲ. ಈ ಕಾಗದವನ್ನು ಎರಡು ಮೂರು ದಿನ ತಡೆದು ಬಿಡೋಣ ಆ ಮೇಲೆ ದೈವಚಿತ್ತ."

ಮುಂದೆ ದಾರಿಯನ್ನು ಕ್ರಮಿಸತೊಡಗಿದನು.

ಬೀದಿಯಲ್ಲಿ ಅವನಿಗಾಗಿ ಕಾದಿದ್ದ ಇಬ್ಬರು ರಮಣಿಯರು ರಾಮು ದೂರದಲ್ಲಿ ಬರುವುದನ್ನು ಕಂಡು "ರಾಮು, ಜಾಗ್ರತೆ ಬರ ಬಾರದೇ? ಅಜ್ಜಿಯು ನಿನಗಾಗಿ ಕಳವಳಪಡುತ್ತಿರುವಳು" ಎಂದು ಕೂಗಿದರು.

ರಾಮು ಸ್ವಲ್ಪ ಜಾಗ್ರತೆಯಾಗಿ ಬರತೊಡಗಿದನು. ಅಜ್ಜಿಯ ಪ್ರಕೃತಿಯ ಮೇಲೆ ತನ್ನ ನಡವಳಿಕೆಯನ್ನು ನಿರ್ಧರಿಸಲು ನಿಶ್ಚಯ ಮಾಡಿದನು.

ಹತ್ತಿರ ಬಂದೊಡನೆಯೇ "ಅಮ್ಮಾ, ಅಜ್ಜಿಗೆ ಹೇಗಿದೆ? ಕಾಹಿಲೆ ಹೆಚ್ಚಿಲ್ಲವಷ್ಟೇ?" ಎಂದನು.

"ಏನೂ ಹೇಳುವ ಹಾಗಿಲ್ಲ ಕಳವಳ ಹೆಚ್ಚಾಗಿದೆ –ಗೋಪಾಲ ನಿಂದ ಕಾಗದ ಬಂತೇನು?"

"ಇಲ್ಲ" ಈ ಸಾರಿ ರಾಮು ನಿಜವಾದ ಉತ್ತರವನ್ನಿತ್ತನು. ಯಥಾರ್ಥವಾಗಿ ಕಾಗದವು ಗೋಪಾಲನದಲ್ಲ.

ರಾಮು ಹೊರಬಾಗಿಲನ್ನು ದಾಟಿ ಅಜ್ಜಿಯ ಕೊಠಡಿಗೆ ಹೋದನು ಕಾಲು ಸಪ್ಪಳವನ್ನು ಕೇಳಿ ವೃದ್ಧೆಯು ಮಗ್ಗುಲು ತಿರುಗಿ "ಯಾರದು, ರಾಮು, ಬಂದೇನಪ್ಪ?" ಎಂದು ಕ್ಷೀಣಸ್ವರದಿಂದ ಕೇಳಿದಳು. "ತಲೆ ಯಲ್ಲಿ ಏನೋ ಒಂದು ರೀತಿಯಿದೆ– ದನಿ ಗುರುತೇ ಆಗಲಿ, ಕಾಲು ಸಪ್ಪಳದ ಗುರುತೇ ಆಗಲಿ ಚೆನ್ನಾಗಿ ತಿಳಿಯೋದಿಲ್ಲ.—ನೀನು ರಾಮು ತಾನೇ?"

"ನಾನು ರಾಮು, ಅಜ್ಜಿ" ಎಂದು ಉತ್ತರಗೊಟ್ಟು, ರಾಮು

ಅಜ್ಜಿಯ ಕಡೆಗೆ ಕರುಣಾಪರಿಪೂರ್ಣವಾದ ದೃಷ್ಟಿಯಿಂದ ನೋಡತೊಡಗಿದನು. " ನಿನಗೆ ಅಂತಹ ಮರುಳೇನೂ ಇಲ್ಲ, ಅಜ್ಜಿ. "

" ಏನಾದರೂ ಕಾಗದ ಬಂದಿದೆಯೇ ? "

" ಇಲ್ಲ. "

ಸುಳ್ಳನ್ನು ಹೇಳಿದುದು ಆಯಿತು. ರಾಮುವಿಗೆ ತನ್ನ ಕಪಾಲಕ್ಕೆ ಯಾರೋ ಬಲವಾದ ಒಂದು ಏಟು ಕೊಟ್ಟಂತೆ ಭಾಸವಾಯಿತು. ಮುದುಕಿಯು ನಿರುತ್ಸಾಹದಿಂದ " ಮಗು, ದಿನ ಹೀಗೆ ಕಾಯುವುದು ಬಹಳ ಕಷ್ಟ " ಎಂದು ಒಟಗುಟ್ಟಿದಳು.

ರಾಮುವಿನ ಸಂಗಡಲೇ ಇಬ್ಬರು ಹೆಂಗುಸರೂ ಒಳಕ್ಕೆ ಬಂದಿದ್ದರು. ಅವರ ಮುಖವನ್ನು ನೋಡಿ ರಾಮು ಮೆಲ್ಲಗೆ " ನಾನು ವೈದ್ಯರ ಮನೆಕಡೆಗೆ ಹೋಗುತ್ತೇನೆ. ಅವರನ್ನು ಇಲ್ಲಿಗೆ ಬರುವಂತೆ ಹೇಳುತ್ತೇನೆ " ಎಂದು ಹೇಳಿ ಗಟ್ಟಿಯಾಗಿ " ಏನೂ ಯೋಚಿಸಬೇಡಜ್ಜಿ, ಈ ದಿನ ಸೀಮೆಯಿಂದ ಕಾಗದ ಬರೋಲ್ಲ " ಎಂದು ಬೊಂಕಿದನು.

" ಹಾಗಿದ್ದರೆ ನಾಳೆ ಕಾಗದ ಬರುತ್ತೇನಪ್ಪಾ ? " ಅಜ್ಜಿಯ ಧ್ವನಿಯಲ್ಲಿ ಸ್ವಲ್ಪ ಉತ್ಸಾಹವಿದ್ದಿತು.

" ಇಲ್ಲ, ನಾಡಿದ್ದು ಬರಬಹುದು. ಆಗ ಗೋಪಾಲನ ಕಾಗದ ಬರಬಹುದು. "

" ನನಗೇಕೋ ಹೆದರಿಕೆ ನಿಜವಾಗಿ ಬರಬಹುದೇನಪ್ಪಾ ? "

" ಅವನಿಗೇನಜ್ಜಿ, ಚೆನ್ನಾಗಿದ್ದಾನೆ. ಕಾಗದ ಬರಿತಾನೆ ಬಿಡು. "

ತಟ್ಟನೆ ಮುದುಕಿಯು ಎದ್ದು ಕುಳಿತು " ರಾಮು, ನೀನು ಬಹಳ ದಿನ ಚೆನ್ನಾಗಿರಪ್ಪಾ, ಗೋಪಾಲ ಚೆನ್ನಾಗಿದ್ದಾನೆ. ನೀನು ಸುಳ್ಳು ಹೇಳೋದಿಲ್ಲ. " ಎಂದು ಹೇಳಿದಳು.

ರಾಮುವು ಕೊಠಡಿಯಿಂದ ಶಬ್ದ ಮಾಡದೆ ಹೊರಬಿದ್ದನು. ಬಂದ ಕಾಗದವು ಇನ್ನೂ ಅವನ ಚೀಲದಲ್ಲಿ ಉಳಿದಿತ್ತು.

ಮೂರು ದಿನಗಳು ಕಳೆದವು.

ನಾಲ್ಕನೆಯ ದಿನ ಬೆಳಿಗ್ಗೆ ರಾಮುವು ಟಪ್ಪಾಲಿನ ರಾಶಿಯನ್ನು ನೋಡುತ್ತಿರುವಾಗ ಗೋಪಾಲನ ಹಸ್ತಾಕ್ಷರವುಳ್ಳ ಒಂದು ಕಾಗದವು ಸಿಕ್ಕಿತು. ಕಾಗದವನ್ನು ನೋಡಿ, ತೆಗೆದುಕೊಂಡು ತಿರುಗಿಸಿ ತಿರುಗಿಸಿ ನೋಡಿದನು ಅವನಿಗೆ ಅರ್ಥವಾಗಲಿಲ್ಲ.

ನಾಲ್ಕು ದಿನಗಳ ಹಿಂದೆ ಆ ಕಾಗದ ಬಂದಿತ್ತು, ಈ ದಿನ ಈ ಕಾಗದ.

ರಾಮು ಏನಾದರೂ ಇರಲೆಂದು ಉಳಿದ ಕೆಲಸವನ್ನು ಬಿಟ್ಟು, ಜಾಗ್ರತೆಯಾಗಿ ಕಾಗದವನ್ನು ತೆಗೆದುಕೊಂಡು ಅಜ್ಜಿಯ ಮನೆಗೆ ಓಡಿದನು. ಬರುವ ಆತುರದಲ್ಲಿ "ಅಜ್ಜಿ, ಅಜ್ಜಿ" ಎಂದು ಕೂಗಿದನು.

ಅಜ್ಜಿಯು ಮಲಗಿದ್ದಳು. ಕೂಗನ್ನು ಕೇಳಿ ಎಚ್ಚತ್ತು ದನಿ ಗುರುತು ಹಿಡಿದು, ಅವನನ್ನು ಹತ್ತಿರಕ್ಕೆ ಬರಹೇಳಿದಳು. ಹತ್ತಿರಕ್ಕೆ ಹೋಗಿ ನೋಡಿದನು. ಮುದುಕಿಯು ಬಹು ಕಷ್ಟದಿಂದ ಶ್ವಾಸ ಬಿಡುತ್ತಿದ್ದಳು. "ಮಗು, ಈಹೊತ್ತು ಸಂಕಟ ಹೆಚ್ಚು-ಹೇಗೇಗೋ ಆಗುತ್ತೆ.— ಹೂಂ ಕಾಗದ ಬಂದಿದೆಯೇನು ?"

"ಬಂದಿದೆ ಅಜ್ಜಿ" ಎಂದು ರಾಮು ಅಜ್ಜಿಯ ಕೈಗೆ ಕಾಗದವನ್ನು ಕೊಟ್ಟನು. ಮುದುಕಿಯು ಕಾಗದವನ್ನು ತೆಗೆದುಕೊಂಡು ಸವರಿ ನೋಡಿದಳು. "ದೇವರು ದೊಡ್ಡೋನಪ್ಪಾ, ಗೋಪಾಲ ಏನು ಬರೆದಿದಾನೆ ?"

ಅದು ಎಂತಹ ಕಾಗದ! ಎಷ್ಟು ಉತ್ಸಾಹ ಪರಿಪೂರ್ಣತೆ! ಎಷ್ಟು ಮುಂದಿನ ದಿನಗಳ ಸವಿಗನಸುಗಳು! ಕಾಗದದ ತುಂಬ ಅಜ್ಜಿಯ ವಿಚಾರ. ಅಜ್ಜಿಯ ಅಶಾಂತಿಗೆ ಸಮಾಧಾನಗಳು. ಕೊನೆಯಲ್ಲಿ "ಅಜ್ಜಿ ವಿಶೇಷ ಕಳವಳ ಪಡಬೇಡ. ಪರೀಕ್ಷೆಯಲ್ಲಿ ಪಾಸಾಯಿತು. ಇನ್ನೊಂದು ತಿಂಗಳಿಗೆ ಊರಿಗೆ ಬರುತ್ತೇನೆ." ಎಂದು ಇದ್ದಿತು.

ಮುದುಕಿಯ ಮನಸ್ಸಿಗೆ ಸಮಾಧಾನವಾಯಿತು. ಏನೂ ಕಾಣಿಸಿದ್ದ ಕಂಣುಗಳನ್ನು ಪೂರ್ಣವಾಗಿ ಮುಚ್ಚಿ, ದೊಡ್ಡದೊಂದು ಶ್ವಾಸ

ವನ್ನು ತೆಗೆದಳು. "ರಾಮು, ನನ್ನ ಕಷ್ಟವೆಲ್ಲವೂ ಪರಿಹರವಾಯಿತು. ದೇವರ ದಯೆಯಿಂದ ಒಳ್ಳೆಯ ದಿನ ಬಂತು" ಎಂದು ನುಡಿದಳು.

ಮುದುಕಿಯು ಕಾಗದವನ್ನು ಮಡಿಲಿನಲ್ಲಿಟ್ಟುಕೊಂಡು ಸುಮ್ಮನೆ ಮಲಗಿದಳು. ಮನಸ್ಸಿನಲ್ಲಿ ಏನೇನೋ ದೇವರ ನಾಮಗಳನ್ನು ಹೇಳುತ್ತಿದ್ದಳು.

ಆದಿನ ರಾತ್ರಿ ಅಜ್ಜಿಯ ಆತ್ಮವು ಕ್ಷಣಿಸಿದ್ದ ದೇಹ ಪಂಜರವನ್ನು ಬಿಟ್ಟು ಹೊರಟು ಹೋಯಿತು. ಆಗಬೇಕಾದ ಅಂತ್ಯ ಸಂಸ್ಕಾರಗಳು ಆಗಿ ಹೋದವು.

× × × ×

ಅಜ್ಜಿಯು ತೀರಿ ಹೋಗಿ ಒಂದು ವಾರ ಕಳೆಯಿತು. ರಾಮುವಿಗೆ ಮನಸ್ಸಿನಲ್ಲಿ ಸಮಾಧಾನವಿರಲಿಲ್ಲ ಸುಳ್ಳನ್ನು ಹೇಳಿದುದರಿಂದ ತನ್ನ ಕರ್ತವ್ಯಕ್ಕೆ ಭಂಗ ಬಂತೆಂದು ಅವನಿಗೆ ಬಹಳ ಅಸಮಾಧಾನ. ಕೊನೆಗೆ ಈ ಗೊಂದಲವನ್ನು ತಡೆಯಲಾರದೆ ತನ್ನ ಮೇಲ್ವಿಚಾರಕನ ಬಳಿಗೆ ಹೋಗಿ "ಸ್ವಾಮೀ, ನನ್ನದೊಂದು ಅರಿಕೆಯಿದೆ. ದಯವಿಟ್ಟು ಕೇಳಬೇಕು'' ಎಂದು ಬೇಡಿಕೊಂಡನು

ಅಧಿಕಾರಿಯು ಏನೋ ಬರೆಯುತ್ತಿದ್ದವನು, ಸ್ವಲ್ಪಹೊತ್ತು ತಲೆಯೆತ್ತಿ ನೋಡದೆ " ಏನದು, ಹೇಳು ಎಂದು ಗದರಿಸಿದನು."

"ಒಂದು ತಪ್ಪಾಗಿದೆ ಸ್ವಾಮೀ ಚಿತ್ತಕ್ಕೆ ತೋರಿದಂತೆ ಮಾಡಬೇಕು."

ತಪ್ಪು ಎಂದೊಡನೆಯೆ ಅಧಿಕಾರಿಯು ಲೇಖನಿಯನ್ನು ಕೆಳಗೆ ಇಟ್ಟು ರಾಮುವಿನ ಮುಖವನ್ನು ನೋಡುತ್ತಾ " ಏನು ಮಾಡಿದೆ" ಎಂದು ಕೇಳಿದನು.

ರಾಮುವು ಜೇಬಿನಲ್ಲಿದ್ದ ಕಾಗದವನ್ನು ತೆಗೆದು ಮೇಜಿನ ಮೇಲೆ ಇಟ್ಟು ಸಮಾಚಾರವನ್ನು ಆದ್ಯಂತವಾಗಿ ಹೇಳುತ್ತಾ "ಸ್ವಾಮಿ, ನಾನು ಕಾಗದವನ್ನು ಮುದುಕಿಗೆ ಕೊಟ್ಟಿದ್ದರೆ ಆಕೆಗೆ ಕಡು ದುಃಖವಾಗು

ತ್ತಿತ್ತು. ಒಳಗಿನ ಸಮಾಚಾರ ನನಗೆ ತಿಳಿಯದು. ಆದರೂ ಕೊಡ ಲಿಲ್ಲ. ಚಿತ್ತಕ್ಕೆ ತೋರಿದಂತೆ ಮಾಡಬಹುದು. ನಾನು ಬಡವ" ಎಂದು ಹೇಳಿದನು.

ಅಧಿಕಾರಿಯು ನಿಶ್ಶಬ್ದವಾಗಿ ಎಲ್ಲವನ್ನೂ ಕೇಳಿದನು. ಮರು ಮಾತಾಡದೆ ಮೇಜಿನ ಮೇಲಿದ್ದ ಕಾಗದವನ್ನು ಒಡೆದು ಓದಿಕೊಂಡನು. ಓದಿದ ಬಳಿಕ "ರಾಮು, ನೀನು ಓದು" ಎಂದು ರಾಮುವಿಗೆ ಕಾಗದ ವನ್ನು ಕೊಟ್ಟನು. ಕಣ್ಣುಗಳನ್ನು ಒರಸಿಕೊಂಡನು. ಗೋಪಾಲನು ಅವನಿಗೆ ಬಹಳ ಪರಿಚಯುದವನು. ಕಾಗದದಲ್ಲಿ ಹೀಗೆ ಬರೆದಿತ್ತು.

" Madam,

I am very sorry to inform you that Mr. Gopalrao was run over by a passing lorry while crossing the Strand. He was brought to the Hospital unconscious. He did not rally. He passed away quietly two hours later.

Please accept my condolences and sympathies."

ಕೊನೆಯಲ್ಲಿ ಒಬ್ಬ ಡಾಕ್ಟರನ ಸಹಿ ಯಿದ್ದಿತು.

ರಾಮುವು ಕಾಗದವನ್ನು ಓದಿದನು. ಕಣ್ಣುಗಳಲ್ಲಿ ನೀರು ತುಂಬಿ ದವು. ತೋಳಿನಿಂದ ಅವನ್ನು ಒರಸಿಕೊಂಡನು.

ಸ್ವಲ್ಪ ಕಾಲದ ಮೇಲೆ "ಸ್ವಾಮೀ" ಎಂದು ಪುನಃ ಕೇಳಿದನು. ಅಧಿಕಾರಿಯು ಉತ್ತರವಾಗಿ "ರಾಮು, ಚಿಂತಿಸಬೇಡ. ನೀನು ಸರಿ ಯಾದುದನ್ನೇ ಮಾಡಿದೆ. ಇಲ್ಲಿ ನೋಡು ನಾನೂ ತಪ್ಪುಮಾಡಿರು ತ್ತೇನೆ. ಕಾಗದವನ್ನು ಮೇಲಿನ ಕಚೇರಿಗೆ ಕಳುಹಿಸದೆ ಒಡೆದುಬಿಟ್ಟೆ" ಎಂದು ಹೇಳಿ ಕಾಗದವನ್ನು ತೆಗೆದುಕೊಂಡು ಎರಡು ಚೂರಾಗಿ ಹರಿದು ಬಿಟ್ಟನು.

ಅವನತ ಶಿರನಾಗಿ ರಾಮು ಹೊರಗೆ ಬಂದನು. ಅವನಿಗೆ ಅಸ ಹ್ಯವಾದ ಒಂದು ವೇದನೆ. ವೇದನೆಯ ಮಧ್ಯದಲ್ಲಿ ಒಂದು ಬಗೆಯ ಶಾಂತಿ.

೩.

ಶಾರದೆಯು ಇದನ್ನು ಹೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಆ ಮೇಲೆ " ನೋಡಿ, ಬುದ್ಧಿಯಿಲ್ಲದೆ ಕಾನೂನುಗಳು. ಇದರಿಂದ ಯಾರಿಗೂ ಉಪಯೋಗವಿಲ್ಲ. ಇಂತಹವು ಇರಬಾರದು. " ಎಂದು ಉದ್ಗಾರ ತೆಗೆದಳು.

ನಾನು ಇದೇ ಸಂಧಿಯನ್ನು ಸಾಧಿಸಿ, ಇಂತಹವು ಇರಬಾರದೆಂದೂ ಇಂತಹವನ್ನು ನಿಯಮಿಸುವ ಮೂರ್ಖರ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದೂ ಹೇಳಿದೆ. ಇದಕ್ಕೆ ಅವಳು ಒಪ್ಪಿದಳು.

ಇಬ್ಬರೂ ಹಾಗೆ ಮಾಡಲು ಮಾರ್ಗಗಳನ್ನು ಹುಡುಕಲು ಯತ್ನ ಮಾಡಿದೆವು. ಶಾರದೆಯು ಎಷ್ಟಾದರೂ ಸ್ತ್ರೀ. ಸ್ತ್ರೀಬುದ್ಧಿಗೆ ಅನುಸರಿಸಿ ಯಾವುದಕ್ಕೂ ಒಪ್ಪಲಿಲ್ಲ.

ಒಂದೊಂದು ವೇಳೆ ನನಗೆ ತೋರುತ್ತದೆ. ಹೆಂಗುಸರಿಗೆ ಕೇವಲ ತತ್ವದ ಕಡೆಗೆ ಬುದ್ಧಿಯೋಡುವುದಿಲ್ಲ. ಭಾವನೆಯ ಕಡೆಗೆ, ತಥ್ಯಾಂಶದ ಕಡೆಗೆ ಅವರ ಗಮನವು ಸೆಳೆದು ಬರುವುದಿಲ್ಲ. ಜೀವನದ ದೃಶ್ಯಗಳ ಮೇಲೆ ಮಾತ್ರ ಅವರ ನೋಟ.

ಆದರಲ್ಲಿಯೂ ಆತ್ಮೀಯತೆಯು ಸೇರಿದ್ದರೆ, ಸಲ್ಲಬಹುದಾದ ತೀರ್ಪಿಗೂ ಮುಪ್ಪು.

ಹೂಂ. ಶಾರದೆಯಂತಹರು ಜಗತ್ತಿನಲ್ಲಿ ಅಸಂಖ್ಯಾಕರು. ಅದರಿಂದಲೇ ಈ ಜಗತ್ತು ಉಳಿದು ದಿನಗಳನ್ನು ದಬ್ಬುತ್ತಿರುವುದು.

---

# ಸಂಶಯ ಪಿಶಾಚ

## ೧.

ಸುಮಾರು ಆರುನೂರು ಎಂಭತ್ತು ವರ್ಷಗಳ ಹಿಂದೆ ಒಂದು ದಿನ ಸಾಯಂಕಾಲ ಐದುವರೆ ಗಂಟೆಯ ಸಮಯದಲ್ಲಿ ಓರಗಲ್ಲು ಅಂಬಾಲ ಗ್ರಾಮಗಳ ನಡುವೆ ಇರುವ ಅರಣ್ಯಪ್ರದೇಶದಲ್ಲಿ ಒಂದು ಪಲ್ಲಕ್ಕಿಯು ಓರಗಲ್ಲಿಗೆ ಅಭಿಮುಖವಾಗಿ ಬರುತ್ತಿತ್ತು. ಪಲ್ಲಕ್ಕಿನೊಳಗಿದ್ದ ಯುವತಿಗೆ ಸುಮಾರು ಹದಿನೆಂಟು ವರ್ಷಗಳು ಆಗಿರಬಹುದಿತ್ತು. ಆಕೆಯ ಗಂಡನು ಸಂಗಡಲೇ ಅಶ್ವಾರೋಹಿಯಾಗಿ ಬರುತ್ತಿದ್ದನು. ಪ್ರಯಾಣದ ಪ್ರತಿಫಲನಾದ ಆಯಾಸವು ಯುವತಿಯ ಮುಖದಲ್ಲಿಯೂ, ಅಶ್ವಾರೋಹಿಯ ಮುಖದಲ್ಲಿಯೂ, ಪಲ್ಲಕ್ಕಿಯ ವಾಹಕರಾದ ಬೋಯಿಗಳ ಮುಖದಲ್ಲಿಯೂ ಒಡೆದು ಕಾಣುತ್ತಿತ್ತು.

ವೇಳೆಯು ಸಾಯಂಕಾಲ, ಪ್ರಯಾಣ ಮಾಡುತ್ತಿದ್ದ ಪ್ರದೇಶವು ಅರಣ್ಯಮಯವಾಗಿದ್ದುದರಿಂದ ಆ ಅಶ್ವಾರೋಹಿಯು ಬೋಯಿಗಳನ್ನು ಜಾಗ್ರತೆಯಾಗಿ ನಡೆಯಲು ಆಜ್ಞಾಪಿಸುತ್ತಲೂ, ಅಡಿಗಡಿಗೆ ಕುದುರೆಯನ್ನು ಚಪ್ಪರಿಸುತ್ತಲೂ, ಪಲ್ಲಕ್ಕಿಯಲ್ಲಿದ್ದ ಸುಂದರಿಗೆ ಭಯವಾಗದಂತೆ ವಿನೋದವಾಗಿ ಮಾತನಾಡಲೂ ದಾರಿಸಾಗಿಸುತ್ತಿದ್ದನು. ಬೋಯಿಗಳು ಸೇವಿಸಿದ್ದ ಮದ್ಯದ ಪ್ರಭಾವದಿಂದ ಜಾಗ್ರತೆಯಾಗಿ ನಡೆಯಲು ಉಪಕ್ರಮ ಮಾಡಿದವರು ಬರಬರುತ್ತ ಮೆಲ್ಲಗೆ ಓಡಲು ಆರಂಭಮಾಡಿದರು. ಆದರೆ ಕುದುರೆಯು ದಣಿದಿದ್ದುದರಿಂದ ರಾವುತನು ಅವರನ್ನು ಸರಿಗಟ್ಟಲಾರದೆ ಹೋದನು.

ಸಂಜೆಯಾದುದರಿಂದ, ಜಾಗ್ರತೆಯಾಗಿ ಸುರಕ್ಷಿತವಾದ ಸ್ಥಳವನ್ನು ನೋಡಬೇಕೆಂದು ಹವಣಿಸಿದ್ದ ಯುವಕನು ತನ್ನ ಕುದುರೆಯು

ಮಂದಗಮನವನ್ನು ನೋಡಿ ಬೋಯಿಗಳಿಗೆ ನಿಧಾನವಾಗಿ ಹೋಗಲು ಕೂಗಿ ಹೇಳಿದನು. ಆದರೆ ಅವರು ಈ ಆಜ್ಞೆಯನ್ನು ಲಕ್ಷಿಸದೆ ಪಲ್ಲಕ್ಕಿಯನ್ನು ಹೊತ್ತುಕೊಂಡು ಭರದಿಂದ ಮುಂದಕ್ಕೆ ಸಾಗಿದರು. ಅವರು ದಾರಿಯಲ್ಲಿ ಹಾಡುತ್ತಿದ್ದ ಹಾಡುಗಳಿಂದ ಪಲ್ಲಕ್ಕಿಯಲ್ಲಿದ್ದ ರಮಣಿಗೂ ಸಹಾ ತನ್ನ ಪತಿಯು ಕೂಗು ಕೇಳಬರಲಿಲ್ಲ.

ಸ್ವಲ್ಪ ಹೊತ್ತು ಬೋಯಿಗಳು ಹೀಗೆಯೇ ಮುಂದಕ್ಕೆ ಸಾಗಿದರು. ಕ್ರಮವಾಗಿ ಮುಳುಗುತ್ತಿದ್ದ ಸೂರ್ಯನ ಅರುಣಕಿರಣಗಳು ಕಣ್ಣಿಗೆ ಕಾಣದಾದವು. ಸುತ್ತಲೂ ಕತ್ತಲೆಯು ಕವಿಯಲಾರಂಭಿಸಿತು. ಆಗ ಆಕೆಯು ವಾಹಕರಿಗೆ ತನ್ನ ಪತಿಯು ಬರುವವರೆಗೂ ನಿಲ್ಲಬೇಕೆಂದು ಹೇಳಿದಳು. ಬೋಯಿಗಳು ಕಾನನವು ಭೀಕರವಿದ್ದರೂ, ತಮಗೆ ಅಂಜಿಕೆಯಿಲ್ಲವೆಂದು ಆಕೆಗೆ ಸಮಾಧಾನಪಡಿಸಿ, ಮೊದಲಿನಂತೆಯೇ ತೀವ್ರವಾಗಿ ದಾರಿಯನ್ನು ಕ್ರಮಿಸತೊಡಗಿದರು. ಸ್ವಲ್ಪಕಾಲದಲ್ಲಿಯೇ ಪಲ್ಲಕ್ಕಿಗೂ ರಾವುತನಿಗೂ ಸುಮಾರು ಒಂದು ಮೈಲಿಯುವರೆಗೆ ಅಂತರವಾಯಿತು.

ಅಷ್ಟರಲ್ಲಿಯೇ ರಾತ್ರಿಯಾಯಿತು. ಆಗ ಶುಕ್ಲಪಕ್ಷವಾದುದರಿಂದ ಚಂದ್ರೋದಯವಾಯಿತು. ಮದ್ಯದ ಅಮಲು ಕಡಿಮೆಯಾಗಲು ಬೋಯಿಗಳು ತಮ್ಮ ತೀವ್ರಗತಿಯನ್ನು ತಗ್ಗಿಸಿ ಮೆಲ್ಲಮೆಲ್ಲಗೆ ನಡೆಯಲು ತೊಡಗಿದರು.

ಇದೇ ಸಮಯದಲ್ಲಿ ಮಾರ್ಗದ ಪಕ್ಕದಲ್ಲಿದ್ದ ಪೊದೆಯೊಂದರಲ್ಲಿ ಏನೋ ಶಬ್ದವಾಗಲು ಪಲ್ಲಕ್ಕಿಯಲ್ಲಿದ್ದ ಯುವತಿಗೆ ಸಂಶಯವು ಬಂದು, ಆ ಅವಮಾನದಿಂದ ಆಕೆಯು ಪೊದೆಯನ್ನು ದಿಟ್ಟಿಸಿ ನೋಡಿದಳು; ಆದರೆ ಏನೂ ಕಾಣಬರಲಿಲ್ಲ. ಆ ಚಲನೆಯು ತನ್ನ ಮನದಲ್ಲಿದ್ದ ಭೀತಿಯಿಂದ ಚಿತ್ರಭ್ರಮೆಯಿರಬಹುದೆಂದು ಆಕೆಯು ತನ್ನಲ್ಲಿಯೇ ಧೈರ್ಯವನ್ನು ತಂದುಕೊಂಡಳು. ಹಾಗೂ ಬೋಯಿಗಳಿಗೆ ಏನೂ ಹೇಳಲಿಲ್ಲ.

ಆದರೆ ಮರುಕ್ಷಣದಲ್ಲಿಯೇ ದೀರ್ಘಕಾಯರಾದ ಕಳ್ಳರ ಗುಂಪೊಂದು ಆ ಪೊದೆಯ ಸಮೀಪದಿಂದ ಹೊರಬಿದ್ದು ಚೀರುತ್ತಾ

ಪಲ್ಲಕ್ಕಿಯನ್ನು ಅಡ್ಡಗಟ್ಟಿ, ಬೋಯಿಗಳ ದಾರಿಯನ್ನು ತಡೆದರು. ಕೂಡಿದ್ದ ಬೋಯಿಗಳು ಧೈರ್ಯಗೆಟ್ಟು, ಕರ್ತವ್ಯಹೀನರಾಗಿ, ಪಲ್ಲಕ್ಕಿಯನ್ನು ಚಲ್ಲಿಕೊಟ್ಟು ಚದರಿ ಓಡಿ ಹೋದರು.

ಆಗ ಆ ಯುವತಿಯ ಮಾನಸಿಕ ಸ್ಥಿತಿಯನ್ನು ಹೇಳಲಾಗುವುದಿಲ್ಲ. ಮೊದಮೊದಲು ಈ ಕಾರ್ಯಗಳಿಂದ ಆಕೆಯು ಧೈರ್ಯಗುಂದಿದ್ದರೂ, ಸಂಕಟದ ಸಹವಾಯಿಯಾದ ಒಂದು ಬಗೆಯ ಪಾಷಾಣತೆಯು ಆಕೆಯ ಹೃದಯವನ್ನು ಆಕ್ರಮಿಸಿತು. ಇಷ್ಟರಲ್ಲಿ ಕಳ್ಳರ ನಾಯಕನು ಬೋಯಿಗಳನ್ನು ಚದುರಿಸಿ, ಪಲ್ಲಕ್ಕಿಯ ಸಮೀಪಗತನಾದನು. ಅದುವರೆಗೂ ಕರ್ತವ್ಯಮೂಢೆಯಾಗಿದ್ದ ಯುವತಿಗೆ ಹೇಗೋ ಚೇತನವು ಬಂದು ಗುಪ್ತವಾಗಿಟ್ಟುಕೊಂಡಿದ್ದ ಕಠಾರಿಯನ್ನು ಹೊರತೆಗೆದು ಆ ದಸ್ಯುನಾಯಕನನ್ನು ಇರಿಯಲು ಸನ್ನದ್ಧಳಾದಳು. ಇದನ್ನು ಗ್ರಹಿಸಿದ ಆ ದಳಪತಿಯು, ಟೊಂಕದಲ್ಲಿ ಅಲೆದಾಡುತ್ತಿದ್ದ ಖಡ್ಗವನ್ನು ಸೆಳೆದು ಆ ಯುವತಿಯ ಮೇಲೆ ಪ್ರಯೋಗಿಸಲು ಕೈಯನ್ನು ಮೇಲಕ್ಕೆತ್ತಿದನು.

## ೨.

ನಮ್ಮೀ ಸಂಗತಿಯು ನಡೆದ ವೇಳೆಯಲ್ಲಿ ತ್ರಿಲಿಂಗ ರಾಜ್ಯವನ್ನು ಕಾಕತೀಯ ವಂಶಸ್ಥಳಾದ ಮಹಾರಾಣಿ ರುದ್ರಮ್ಮದೇವಿಯು ಮಹಾ ವೈಭವದಿಂದ ಓರಗಲ್ಲು ನಗರವನ್ನು ರಾಜಧಾನಿಯಾಗಿಟ್ಟುಕೊಂಡು ರಾಜ್ಯವನ್ನು ಪರಿಪಾಲಿಸುತ್ತಿದ್ದಳು. ರಾಜಧಾನಿಗೆ ಹನ್ನೆರಡು ಮೈಲಿಗಳ ದೂರದಲ್ಲಿದ್ದ ಅಂಬಾಲಗ್ರಾಮವು ರಾಣಿಗೆ ಅತ್ಯಂತ ಪ್ರಿಯತಮವಾದ ಪ್ರದೇಶ. ಈ ಕಾರಣದಿಂದ ಆ ಎರಡು ಸ್ಥಳಗಳ ನಡುವೆಯಿದ್ದ ದಾರಿಯಲ್ಲಿ ಜನಸಂಚಾರವು ಹೆಚ್ಚೆಂದು ಹೇಳಬಹುದಾಗಿತ್ತು. ಆದರೂ ಸಹಾ ಪ್ರದೇಶವು ಸಾಂದ್ರವಾದ ಅರಣ್ಯಮಯವಾದುದರಿಂದ ಹಲವು ವೇಳೆ ಕಳ್ಳಕಾಕರಿಗೆ ಆಶ್ರಯ ಸ್ಥಾನವಾಗಿ ಆಗಾಗ ಅನಾಹುತಗಳು ಸಂಭವಿಸುತ್ತಿದ್ದವು.

ಮೇಲಿನ ಘಟನೆಯು ನಡೆದು ಹೋಗುತ್ತಿರುವ ವೇಳೆಯಲ್ಲಿ ಓರಗಲ್ಲಿನಿಂದ ಅಂಬಾಲಗ್ರಾಮೋನ್ಮುಖರಾಗಿದ್ದ ಇಬ್ಬರು ಅಶ್ವಕರು ಆಕಸ್ಮಿಕವಾಗಿ ರಂಗಸ್ಥಳಕ್ಕೆ ಬಂದು ಸೇರಿದರು. ಹೊಸದಾಗಿ ಸಂಧಿಸಿದ ದಾರಿಗರ ಸಂಖ್ಯೆಯು ಅತ್ಯಲ್ಪವಾದುದರಿಂದ ಕಳ್ಳರು ಅವರನ್ನು ಲಕ್ಷಿಸದೆ ತಮ್ಮ ಕೆಲಸದಲ್ಲಿಯೇ ನಿರತರಾಗಿದ್ದರು.

ದಸ್ಯುದಳಪತಿಯು ಆ ಯುವತಿಯನ್ನು ತುಂಡರಿಸಲು ಉದ್ಯಮಿಸಿದ್ದನು. ಇನ್ನೊಂದು ಕ್ಷಣದೊಳಗಾಗಿ ನಿರ್ದೋಷಿಯಾದ ಬಾಲೆಯು ಮೃತ್ಯುವಿನ ವಶವಾಗುತ್ತಿದ್ದಳು. ಅಷ್ಟರಲ್ಲಿ ಅಶ್ವಕರಲ್ಲೊಬ್ಬನು ಹಿಂದಿನಿಂದ ಒಂದೇ ಪೆಟ್ಟಿಗೆ ದಳಪತಿಯ ಮೇಲೆತ್ತಿದ ಕೈಯ್ಯನ್ನು ಕತ್ತರಿಸಿದನು. ಇನ್ನೊಬ್ಬನು ಉಳಿದವರ ಸುದ್ದಿಯನ್ನು ತೆಗೆದುಕೊಳ್ಳಹತ್ತಿದನು. ಕಳ್ಳರು ಅವರ ಹೊಡೆತಕ್ಕೆ ತಡೆಯಲಾರದೆ ದಿಕ್ಕಾಪಾಲಾಗಿ ಓಡಿಹೋದರು.

ಹೀಗೆ ಯುವತಿಗೆ ಜೀವವುಳಿಸಿದ ರಾವುತನ ಮೋರೆಯು ತೇಜಃಪುಂಜವಾಗಿಯೂ ದರ್ಪಯುಕ್ತವಾಗಿಯೂ ಇದ್ದಿತು. ಆದರೆ ಪೂರ್ಣ ಪುರುಷ ಸೌಂದರ್ಯಕ್ಕೆ ಅನುಗುಣವಾದ ಗಡ್ಡ-ಮೀಸೆಗಳು ಇರಲಿಲ್ಲ. ಯುವತಿಯು ತನ್ನ ಪ್ರಾಣದಾನಮಾಡಿದ ಪುಣ್ಯಾತ್ಮನ ಮುಖವನ್ನು ನೋಡಿ ಸ್ತ್ರೀ ಸಹಜವಾದ ಲಜ್ಜೆಯಿಂದ ಅವನತಶಿರಳಾದಳು. ಆಕೆಯ ಬಾಯಿಂದ ಮಾತುಗಳು ಹೊರಬೀಳಲಿಲ್ಲ; ಬಾಷ್ಪಗಳು ಕಣ್ಣುಗಳಿಂದ ಧಾರಾಳವಾಗಿ ಸುರಿದವು.

ಆಕೆಯ ಮನಸ್ಸಿನಲ್ಲಿದ್ದ ಉಚ್ಚಭಾವನೆಯನ್ನು ನೋಡಿ ಅಶ್ವಕನ ಮನವು ಕರುಣಾಪೂರಿತವಾಯಿತು. ಒಡನೆಯೇ ಅತನು ಮುಂದಕ್ಕೆ ಅಡಿಯಿಟ್ಟು, ಆಕೆಯನ್ನು ಹತ್ತಿರಕ್ಕೆ ಸೆಳೆದುಕೊಂಡು ಕಣ್ಣೀರನ್ನು ತನ್ನ ತೋಳಿನಿಂದ ಒರಸಿದನು.

ಇದೇ ಸಮಯಕ್ಕೆ ಸರಿಯಾಗಿ ಆ ಯುವತಿಯ ಗಂಡನು ಬಂದು ಆ ಸ್ಥಳವನ್ನು ಸೇರಿದನು.

ಅಲ್ಲಲ್ಲಿ ಬಿದ್ದ ಭಿನ್ನ ಅವಯುವಗಳನ್ನೂ, ರಕ್ತವನ್ನೂ ನೋಡಿ ದೊಡನೆಯೇ ಆತನು ತನ್ನ ಹತ್ತಿಗೆ ಒದಗಿದ್ದ ಭಯಂಕರ ಪ್ರಸಂಗ ವನ್ನು ಅರಿತುಕೊಂಡನು. ಅಲ್ಲಿದ್ದ ದೃಶ್ಯವನ್ನು ನೋಡಿ ಗ್ರಹಿಸಿದೊಡ ನೆಯೇ ಆತನ ಹೃದಯದಲ್ಲಿ ಸಂತೋಷ ಕೃತಜ್ಞತೆಗಳು ಮೂಡಿದವು.

“ ಯಮುನಾ ” ಒಂದು ಬಾರಿಕೂಗಿ, ಆತನು ಆಕೆಯನ್ನು ಸೆಳೆದು ಕೊಂಡು ಸಂತೈಸಿದನು. ಯಮುನೆಯು ಆತನ ವಕ್ಷಸ್ಥಲದ ಮೇಲೆ ಒರಗಿಕೊಂಡು ಅಳತೊಡಗಿದಳು.

ಆಗ ನರಸಿಂಗನು ಭಾರ್ಯೆಯನ್ನು ನೋಡಿ “ ಹುಚ್ಚಿ, ಅಳಬೇಡ. ಇಂದು ನಮ್ಮ ಪುಣ್ಯವಶದಿಂದ ದೈವವು ಈ ರಾವುತನ ರೂಪಿನಿಂದ ಬಂದು ನಿನ್ನ ಪ್ರಾಣವನ್ನೂ, ತನ್ಮೂಲಕ ನನ್ನ ಪ್ರಾಣವನ್ನೂ ಕಾಪಾ ಡಿತು. ಇಲ್ಲದಿದ್ದರೆ— ” ಇನ್ನೂ ಆತನು ಏನೋ ಹೇಳಬೇಕೆಂದಿದ್ದವನು ಸಮೀಪದಲ್ಲಿದ್ದ ರಾವುತನನ್ನು ನೋಡಿ, ವಿನಯದಿಂದ “ ಮಹಾಶಯ, ನಿಮ್ಮೀ ಉಪಕಾರವನ್ನು ಎಷ್ಟು ಹೊಗಳಿದರೂ ಸಾಲದು. ನಾನು ನಿಮಗೆ ಏನು ತಾನೇ ಪ್ರತ್ಯುಪಕಾರ ಮಾಡಿ ಈ ಋಣವನ್ನು ತೀರಿಸ ಬಲ್ಲೆ? ನಮ್ಮಂತಹ ಆರ್ತರನ್ನು ರಕ್ಷಿಸಲು ಈಶ್ವರನು ನಿಮ್ಮನ್ನು ಚಿರ ಕಾಲ ಸುರಕ್ಷಿತವಾಗಿರಿಸಲಿ ” ಎಂದು ನುಡಿದನು.

ಅಶ್ವಕ:— ಸ್ವಾಮೀ, ನಾವು ಅಂತಹ ಮಹತ್ಕಾರ್ಯವನ್ನೇನೂ ಮಾಡಿಲ್ಲ. ನಾವು ಮಾಡಿರುವುದು ನಮ್ಮ ಕರ್ತವ್ಯದಲ್ಲಿ ಒಂದು ಶತಾಂಶ ಮಾತ್ರ. ಈ ಸುಂದರಿಯ ಜೀವರಕ್ಷಣೆಯನ್ನು ಮಾಡುವ ಸುಯೋಗವು ಒದಗಿದುದಕ್ಕಾಗಿ ನನಗೆ ಬಹಳ ಆನಂದ. ನಾವು ಇನ್ನು ಹೊರಡು ತ್ತೇವೆ. ಈ ರಾವುತನು ನೀವು ಈ ಅರಣ್ಯವನ್ನು ದಾಟುವವರೆಗೂ ನಿಮ್ಮ ಸಂಗಡ ಬರುವನು.—ಪಾಪ ಕೋಮಲೆಯಾದ ಈ ಬಾಲಕಿ ಯನ್ನು ಒಂಟಿಕಳುಹಲು ಮನವೊಪ್ಪದು. ಆದರೆ ಯತ್ನವಿಲ್ಲ. ಎಂದಾ ದರೂ ಒಂದು ದಿನ ನಿಮ್ಮಲ್ಲಿಗೆ ಬಂದು ಪುನಃ ನಿಮ್ಮ ದರ್ಶನಲಾಭ ವನ್ನು ಪಡೆಯುವೆನು. ”

ನರಸಿಂಗ:—“ ನಿಜವಾಗಿಯೂ ನಮಗೆ ಅಂತಹ ಸುದೈವವು ಒದಗುವುದೇ? ಹಾಗಾಗುವುದಾದರೆ ನಾವೇ ಧನ್ಯರು. ಇಲ್ಲಿಗೆ ಆರು ಮೈಲಿ ದೂರದಲ್ಲಿರುವ ರುದ್ರಪುರವು ನಮ್ಮ ವಾಸಸ್ಥಾನ. ತಾವು ತಪ್ಪದೇ ಬಂದು ನಮ್ಮ ಗೃಹವನ್ನು ಪಾವನವಮಾಡಿ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕು ?

ಅಶ್ವಕ:—“ ಸ್ವಾಮಿ, ಆಗತ್ಯ ಆಗಬಹುದು, ಅಷ್ಟು ಉಪಚಾರ ಬೇಡ. ಈಗಿನಿಂದ ನಾವು ಬಂಧುಗಳು ನೋಡಿ, ಇವರು ನನಗೆ ಅತ್ಯಂತ ಆತ್ಮೀಯರು ” ಎಂದು ಯಮುನೆಯ ಕಡೆಗೆ ತೋರಿಸಿದನು. ನರಸಿಂಗ ಯಮುನೆಯರಿಬ್ಬರೂ ಆತನಿಗೆ ಪ್ರಣಾಮ ಮಾಡಿ “ಸ್ವಾಮೀ, ನಮ್ಮ ಮೇಲೆ ಇಷ್ಟು ಉಪಕಾರದ ಹೊರೆಯನ್ನು ಹೊರಿಸಿದ ನಿಮ್ಮ ಪವಿತ್ರನಾಮವನ್ನು ನಾವು ಕೇಳಬಹುದೇ? ” ಎಂದು ಪ್ರಶ್ನೆ ಮಾಡಿದರು.

ಅಷ್ಟರಲ್ಲಿ ಆ ಅಶ್ವಕನು ಸ್ವಲ್ಪ ದೂರ ಸಾಗಿದ್ದನಾಗಿದ್ದುದರಿಂದ ಆತನು ಈ ಪ್ರಶ್ನೆಗೆ ಕೊಟ್ಟ ಉತ್ತರವು ಸರಿಯಾಗಿ ಕೇಳಬರಲಿಲ್ಲ. ಬಂದ ಶಬ್ದಗಳಲ್ಲಿ “ ರುದ್ರಮದೇ—” ನೆಂಬ ಅಭಿಧಾನವು ತಿಳಿದು ಬಂದಿತು. ಇದರಿಂದ ಆ ದಂಪತಿಗಳು ಆತನ ಹೆಸರು ರುದ್ರಮದೇವನಿರಬೇಕೆಂದು ನಿರ್ಧರ ಮಾಡಿಕೊಂಡರು.

## ೩.

ರುದ್ರಪುರವು ಸಣ್ಣದಾಗಿದ್ದರಿಂದ ನೋಡುವುದಕ್ಕೆ ಅಂದವಾಗಿದ್ದಿತು. ಈಗ್ಗೆ ಆರು ವರ್ಷಗಳ ಹಿಂದೆ ನರಸಿಂಗನ ತಂದೆ-ತಾಯಿಗಳು ಕಾಲವಶವಾಗಿದ್ದರು; ಆತನು ಈಗ ಪೈತ್ರ್ಯಕವಾದ ಆಸ್ತಿಯಿಂದ ಜೀವನವನ್ನು ಸಾಗಿಸುತ್ತಿದ್ದನು. ಆತನ ಆದಾಯ ವರ್ಷಕ್ಕೆ ಹಲವು ಸಹಸ್ರ ರೂಪಾಯಿಗಳ ವರೆಗೂ ಇದ್ದಿತು.

ಆತನ ಸದನವು ರಾಜಭವನದಂತೆ ರಮ್ಯವಾಗಿದ್ದಿತು; ಅದರ ಸುತ್ತಲೂ ಒಂದು ಸುಂದರವಾದ ನವಾರಾಮವು ಇದ್ದಿತು. ಆ ತೋಟ

ದಲ್ಲಿ ಚಿತ್ತಮೋಹಕವಾದ ತರುಲತೆಗಳೂ, ಪುಷ್ಪಭರಿತವಾದ ತರುಲತೆಗಳೂ, ಗಿಡಗಳೂ ಅಲ್ಲಲ್ಲಿ ಅಂದವಾಗಿ ಸಿಸ್ತಿನಿಂದ ಬೆಳೆಸಲ್ಪಟ್ಟಿದ್ದವು. ಗೃಹದ ಸಿಂಹದ್ವಾರದಲ್ಲಿ ಒಂದು ಬಳ್ಳಿಯನ್ನು ವಿಚಿತ್ರವಾಗಿ ಹಬ್ಬಿಸಿ ಮತ್ತಷ್ಟು ಶೋಭೆಯನ್ನುಂಟುಮಾಡಿದ್ದರು.

ದಂಪತಿಗಳ ಸಂಸಾರವು ಬಹಳ ಯೋಗ್ಯರೀತಿಯಿಂದ ನಡೆಯುತ್ತಿತ್ತು. ಯಮುನೆಯು ಅಲ್ಲಿಗೆ ಬಂದು ನಾಲ್ಕು ವರ್ಷಗಳಾಗಿ ನರಸಿಂಗನು ಜೀವನದ ಸವಿಯನ್ನು ಪೂರ್ಣವಾಗಿ ಅನುಭವಿಸುತ್ತಿದ್ದನು. ಯಮುನೆಯ ಹೃದಯವು ಬಹಳ ಮೃದು, ವ್ಯವಹಾರವು ತೀರ ಸರಳ. ಆಕೆಯ ಜೀವಿತವು ಅತಿ ಪರಿಶುದ್ಧವಾದುದು. ಆಕೆಯು ಗಂಡನನ್ನು ಶುದ್ಧಾಂತಃಕರಣದಿಂದಲೂ ಹೃದಯಪೂರ್ವಕವಾಗಿಯೂ ಪ್ರೀತಿಸುತ್ತಿದ್ದಳು. ತನ್ನ ಪ್ರೀತಿಗೆ ಯೋಗ್ಯವಾದ ಪ್ರತಿಫಲವು ದೊರೆಯುತ್ತಿದೆಯೆಂದು ಆಕೆಯು ಸದಾ ಸಂತೋಷಚಿತ್ತಳಾಗಿರುವಳು.

ನರಸಿಂಗನು ಸಹ ತನ್ನ ಹೆಂಡತಿಯನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದನು. ಆದರೂ ಆತನ ಅನುರಾಗದಲ್ಲಿ ಮಾತ್ರ ಯಮುನೆಯ ಪ್ರೀತಿಗೆ ಸಮನಾದುದು ಇರಲಿಲ್ಲ.

ರಮಣಿಯರು ಪುರುಷರನ್ನು ಎಷ್ಟು ಗಾಢವಾಗಿ ಪ್ರೇಮಿಸಬಲ್ಲರೋ ಅಷ್ಟು ಗಾಢವಾಗಿ ಪುರುಷರು ಸ್ತ್ರೀಯರನ್ನು ಪ್ರೇಮಿಸುವುದಿಲ್ಲ. ಸಾಲದುದಕ್ಕೆ ಪುರುಷರ ಮನಸ್ಸು ಅತಿ ಚಂಚಲವಾದುದು.

ಸಾಲದುದಕ್ಕೆ ಬಹು ಬೇಗ ಸಂದೇಹಕ್ಕೆ ಸ್ಥಳವನ್ನು ಕೊಟ್ಟು ತನಗೇ ಅಘಾತಮಾಡಿಕೊಳ್ಳುವುದು.

ಯಮುನೆಯು ಜೀವರಕ್ಷಿಯಾಗಿ, ಅವನು ಪುನಃ ಸ್ವಗೃಹವನ್ನು ಸೇರಿದಂದಿನಿಂದಲೂ ನರಸಿಂಗನ ಸ್ವಚ್ಛಹೃದಯದಲ್ಲ ಮಾಲಿನ್ಯದ ಪ್ರವೇಶವಾಗಿತ್ತು. ವಸ್ತ್ರವು ಮಲಿನವಾದರೆ ತೆಗೆದು ಹಾಕಬಹುದು; ಆದರೆ ಹೃದಯವು ಮಲಿನವಾದರೆ ಅದನ್ನು ಶುಭ್ರಮಾಡುವುದು ದುಃಸ್ಸಾಧ್ಯವಾದ ಹಂಬಲ.

ನಿಗೆ ಸಂಶಯವು ದೂರವಾಗಿ, ತನ್ನ ಹಿಂದಿನ ನಿಶ್ಚಲಾನುರಾಗದಿಂದಲೂ, ತನ್ನ ಪವಿತ್ರ ವರ್ತನೆಯಿಂದಲೂ ಆತನಿಗೆ ನಿಜಾಂಶವು ತೋರಿ ಬಂದು ಮನಸ್ಸು ಪುನಃ ಸರಿ ಹೋಗಬಹುದೆಂದು ಭಾವಿಸುವಳು. ಆದರೆ ಉತ್ತರಕ್ಷಣದಲ್ಲಿ ಈ ಬಗೆಯ ನಡೆವಳಿಕೆಯ ವಿಷಯದಲ್ಲಿ ಅನುಮಾನವು ಬಂದು ಮುಂದೇನು ಮಾಡಬೇಕೆಂದು ಆಕೆಗೆ ನಿರ್ಣೈಯಿಸಲು ಆಕೆಯಿಂದ ಸಾಧ್ಯವಾಗಲಿಲ್ಲ.

ಮಾನವನ ಹೃದಯವು ವಿಚಿತ್ರವಾದ ಕ್ಷೇತ್ರ. ಒಂದು ನಿಮಿಷದಲ್ಲಿ ಪರಿಮಳಯುಕ್ತವಾದ ಆನಂದದಾಯಕವಾದ ಕುಸುಮವು ಉದಯಿಸುವುದು; ಮನೋಜ್ಞವಾದ ಫಲಗಳು ಬೀರುವುವು; ಉತ್ತರಕ್ಷಣದಲ್ಲಿಯೇ ಅದೇ ಭೂಮಿಯಲ್ಲಿ ಕಂಟಕಮಯವಾದ ವಿಷವೃಕ್ಷಗಳು ಜನಿಸಿ, ವಿಕಾರ ರೂಪುಗಳನ್ನು ಹೊಂದುವವು.

ನರಸಿಂಗನ ಮಾನಸಿಕ ಭೂಮಿಯಲ್ಲಿ ಇದೇ ಬೆಳೆ, ಇದೇ ಫಲ.

೪

ಈ ವಿಧವಾಗಿ ದಿನಗಳು ದುಃಖಮಯವಾಗಿ ಕಳೆದವು ಯಮುನೆಯ ಪ್ರಾಣರಕ್ಷಣೆಯಾದ ದಿನವು—ಆ ದುರ್ದಿನವು- ಕಳೆದು ಇಂದಿಗೆ ಮೂರು ಮಾಸಗಳಾದವು. ಅವರ ಗೃಹಕ್ಕೆ ಹೊಂದಿದ್ದ ಉದ್ಯಾನದಲ್ಲಿ ವೃಕ್ಷಗಳು ಲತಾವಿತಾನಗಳು ವಸಂತಾಗಮದಿಂದ ನಲಿದಾಡುತ್ತಿದ್ದವು. ಕುಸುಮಸಂತಾನಗಳು ವಾಯುದೇವನ ಸಹವಾಸದಿಂದ ತಮ್ಮ ಸೌರಭವನ್ನು ಹೊರಸೂಸಿ ಮಾನವರ ಮನಸ್ಸನ್ನು ಆನಂದಗೊಳಿಸುತ್ತಿದ್ದವು. ಉದ್ಯಾನದಲ್ಲಿ ಎಲ್ಲಿ ನೋಡಿದರೂ ಪಕ್ಷಿಗಳು ಕೋಲಾಹಲದಿಂದ ಸಹವಾಸ ಸುಖವನ್ನನುಭವಿಸುತ್ತಿದ್ದವು.

ಆದರೆ ನಿಸರ್ಗ ನಿರ್ಮಿತವಾದ ಈ ನಡವಳಿಕೆಗಳಿಂದಲೂ ಯಮುನಾ ನರಸಿಂಗರ ಚಿತ್ತಗಳಿಗೆ ಶಾಂತಿಯು ದೊರೆಯಲಿಲ್ಲ.

ಇದುವರೆಗೂ ದಾಂಪತ್ಯಸುಖವನ್ನು ಸವಿದು ಈಗ ಭರ್ತನಂತ

ರಂಗದಲ್ಲಿ ಬೇರೂರಿದ್ದ ಸಂಶಯದಲ್ಲಿ ಸಂತಾನಕ್ಕೂ ವಿರಹಕ್ಕೂ ಪಾಲು ಗಾರಳಾದ ಯಮುನೆಗೆ ಮನಶ್ಶಾಂತಿಯಿರಲಿಲ್ಲ.

"ಅಯ್ಯೋ, ದೇವರೇ! ನನಗೇಕೆ ಇಷ್ಟು ತೊಂದರೆಗಳು. ಕಳ್ಳರಿಂದ ಉಳಿಸಿ ಈ ಸೌಖ್ಯಕ್ಕೆ ಪಾಲುಗಾರಳನ್ನಾಗಿ ಮಾಡಬೇಕೆಂದು ಎಷ್ಟು ದಿನಗಳಿಂದ ಹವಣಿಸಿದ್ದೆ?........ರುದ್ರಮದೇವ, ನಿನ್ನ ಮನಸ್ಸಿನಲ್ಲಿ ಏನಿದೆಯೋ ನಾನರಿಯೆ. ಕೃತಜ್ಞತೆಯಿಂದಲೂ ಆದರದಿಂದಲೂ ಪ್ರೇಮರೆತವನನ್ನು ದಯೆಯುಳ್ಳವನಂತೆ ನಟಿಸಿ, ನನ್ನನ್ನು ಬರಸೆಳೆದು ಅಪ್ಪಿ, ನನ್ನ ನಾಥನ ಹೃದಯದಲ್ಲಿ ಅನುಮಾನಾಯರವನ್ನೂ ನೆಟ್ಟಿ ರುವ. ಈಗಲಾದರೂ ಯಾವ ರೀತಿಯಲ್ಲಿಯಾದರೂ ನನ್ನ ಗಂಡನ ಸಂದೇಹವನ್ನು ದೂರಮಾಡಿ ಪುನಃ ನನ್ನ ಜೀವನವನ್ನು ಸುಖಮಯಿ ಯಾಗಿ ಮಾಡಬಾರದೇ?" ಎಂದು ಕಣ್ಣೀರು ಸಾಗರವನ್ನು ಸುರಿಯಿ ಸುವಳು.

ಆ ದಂಪತಿಗಳ ಮನೋವೃತ್ತಿಯು ಈ ದುರ್ದೆಸೆಯನ್ನು ಹೊಂದಿದ್ದ ದಿನಗಳಲ್ಲಿಯೇ ಒಂದು ದಿನ ಅಕಸ್ಮಿಕವಾಗಿ ರುದ್ರಮದೇವ ನೆಂದು ಅವರು ಭಾವಿಸಿದ್ದ ವ್ಯಕ್ತಿಯು ಅವರ ಮನೆಗೆ ಬಂದಿತು.

ನರಸಿಂಗನು ರುದ್ರಮದೇವನು ಬಂದನೆಂದು ತಿಳಿದೊಡನೆಯೇ ಹೃದಯದಲ್ಲಿದ್ದ ವೇದನೆಯನ್ನು ಬದಿಗಿಟ್ಟು, ಗೌರವದಿಂದ ಆತನನ್ನು ಕಂಡು ಮನೆಯೊಳಕ್ಕೆ ಕರೆದುಕೊಂಡು ಹೋದನು.

ತನಗೆ ಲಭಿಸಿದ ಆದರಕ್ಕೆ ರುದ್ರಮದೇವನು ಕೃತಜ್ಞತೆಯನ್ನು ಸಲ್ಲಿಸಿ, ಯಜಮಾನಿಯನ್ನು ನೋಡಿದೊಡನೆಯೇ ಕುಶಲ ಪ್ರಶ್ನೆಗಳನ್ನು ಮಾಡಿದನು.

ನರಸಿಂಗನು ಎಷ್ಟೇ ಪ್ರಯತ್ನಪಟ್ಟು ತಮ್ಮ ತಮ್ಮಲ್ಲಿದ್ದ ವೈಮ ನಸ್ಸನ್ನು ಹೊರಗೆಡವದಿದ್ದರೂ ಚಾಣಾಕ್ಷನಾದ ರುದ್ರಮದೇವನು ಇದ್ದ ಅಂತಃಸ್ಥಿತಿಯನ್ನು ಗ್ರಹಿಸದೇ ಹೋಗಲಿಲ್ಲ.

ಈ ರೀತಿಯಾಗಿ ವಿಷಮಪರಿಸ್ಥಿತಿಯಲ್ಲಿ ಎರಡು ದಿನಗಳು ಕಳೆದು

ಹೋದವು. ಈ ಎರಡು ದಿನಗಳು ಯಮುನೆಗೆ ಎರಡು ದೀರ್ಘ ಯುಗಗಳಾಗಿ ಕಾಣಬಂದವು. ಈ ವೇಳೆ ಆಕೆಯ ಮನಸ್ಸು ತಳಮಳಗೊಂಡು, ವಿಚಿತ್ರವಾದ ತರ್ಕವಿತರ್ಕಗಳಲ್ಲಿ ಮುಳುಗಿ ಮುಂದಿನ ಮಾರ್ಗವನ್ನು ಯೋಚಿಸಲು ಆಕೆಯಿಂದ ಸಾಧ್ಯವಾಗದಾಯಿತು.

ಸಹಜವಾಗಿ ಎಲ್ಲಕ್ಕೂ ಮೂಲಕಾರಣನಾದ ರುದ್ರಮದೇವನನ್ನು ಮನಸ್ಸಿನಲ್ಲಿಯೇ ನಿಂದಿಸಲು ಆರಂಭಿಸಿದಳು. ಬಂದವನು ಒಡನೆಯೇ ಹಿಂದಿರುಗದೆ ಅಲ್ಲಿಯೇ ತಳವೂರಿದ್ದರಿಂದ ಆಕೆಗೆ ಕ್ರೋಧಾಗ್ನಿಯು ಜನಿಸಿ, ಆಕೆಯು ದುಃಖ ಸಮುದ್ರದ ಮೋರೆದೋರದೆ ಅದರಲ್ಲಿಯೇ ಮುಳುಗಿದಳು.

ದಾರುಣವಾದ ನೋವಿನಿಂದ, ನೊಂದಮನದಿಂದ ಉದ್ವಿಗ್ನಳಾಗಿ ಯಾರೊಡನೆಯೂ ಆಲೋಚಿಸದೆ, ಗಂಡನು ಏನೆಂದು ಹೇಳುವನೆಂದು ಗಮನಿಸದೆ, ಪ್ರಾಣರಕ್ಷಕನಾದ ರುದ್ರಮದೇವನಲ್ಲಿ ಕೃತಜ್ಞತೆಯನ್ನು ತಾಳದೆ, ಕೋಪಾವೇಶಪರವಶಳಾಗಿ ಕಣ್ಣೀರನ್ನು ಸುರಿಸುತ್ತಾ ರುದ್ರಮದೇವನ ಬಳಿಗೆ ಹೋಗಿ ಸಂತಾಪದಿಂದ ನುಡಿದಳು.

"ಸಾಕು, ಸಾಕು, ನೀನು ಬಹಳ ಸನ್ಮಾರ್ಗನು! ನಿನ್ನ ಮುಖ ದರ್ಶನದೊಡನೆಯೇ ನನ್ನ ಸುಖಸಂಸಾರವು ಮಣ್ಣುಪಾಲಾಯಿತು. ನಮ್ಮ ದಾಂಪತ್ಯ ಸುಖವನ್ನು ವಿನಾಶವಮಾಡಿಯೂ ಪುನಃ ಇಲ್ಲಿಗೆ ಬಂದು ನಮ್ಮನ್ನು ಪೀಡಿಸಲು ನಿನಗೆ ಮನಸ್ಸು ಹೇಗೆ ಒಪ್ಪುವುದೋ ನಾನರಿಯೇ? ನಿನಗೆ ನಾಚಿಕೆಯು ಸ್ವಲ್ಪವೂ ಇಲ್ಲವೇನು?"

ಬಳಿಯಲ್ಲಿಯೇ ಇದ್ದ ನರಸಿಂಗನು ತನ್ನ ಹೆಂಡತಿಯು ಈ ಪೌರುಷ ವಾಕ್ಯಗಳನ್ನು ಸುರಿಸುತ್ತಿರುವುದನ್ನು ಕಂಡು ಅವಳನ್ನು ಸಮಾಧಾನಮಾಡಬೇಕೆಂದು ಕಣ್ಣುಸನ್ನೆ ಮಾಡಿದನು. ಕ್ರುದ್ಧ ಮುದ್ರೆಯಿಂದ ನೋಡಿದನು. ಆದರೆ ಎಲ್ಲವೂ ನಿರರ್ಥಕವಾದವು.

ಈ ವಚನಗಳನ್ನು ಕೇಳಿ ಮುಖದಲ್ಲಿ ಹೊರಚೆಲ್ಲುತ್ತಿದ್ದ ನಗುವನ್ನು ತಡೆದು, ಯಮುನೆಗಿಂತಲೂ ಹೆಚ್ಚು ಕ್ರುದ್ಧನಂತೆ ನಟಿಸುತ್ತಾ ರುದ್ರಮದೇವನು ಉತ್ತರವಿತ್ತನು.

"ಅಮ್ಮಾ, ನನ್ನನ್ನು ಏಕೆ ಹೀಗೆ ಅಲ್ಲಗಳೆದು ನಿಂದಿಸುವೆಯೋ ತಿಳಿಯದು. ಅಂದು ನಿನ್ನನ್ನು ಮೃತ್ಯುದವಡೆಯಿಂದ ತಪ್ಪಿಸಿದುದೇ ನನ್ನ ಅಪರಾಧವಾಯಿತೇ? ಹಾಗಾದರೆ ಪರೋಪಕಾರದ ಮಹತ್ವ ವನ್ನು ನೀನು ನನಗೆ ಚೆನ್ನಾಗಿ ಹೇಳಿಕೊಟ್ಟಿರುವೆ. ಆ ದಿನ ನೀವು ಇಬ್ಬರೂ ಬಾ ಎಂದು ಹೇಳಿದುದರಿಂದ ಇಂದು ನಿಮ್ಮಲ್ಲಿಗೆ ಬಂದೆ. ಹೊಟ್ಟೆಗಿಲ್ಲದೆ ನಿಮ್ಮಲ್ಲಿಗೆ ಬರಲಿಲ್ಲ. ಈಶ್ವರಕೃಪೆಯಿಂದ ನನಗೂ ನಾಲ್ವರಿಗೆ ಹಾಕುವಷ್ಟು ಶಕ್ತಿಯಿದೆ. ನೀವು ಇಷ್ಟು ಸಭ್ಯರೆಂದು ನನಗೆ ಮೊದಲೇ ತಿಳಿದಿದ್ದರೆ ಈ ಎರಡು ದಿನಗಳವರೆಗೆ ನಿಮ್ಮ ಮನೆಯಲ್ಲಿ ನಾನು ನಿಲ್ಲುತ್ತಿರಲಿಲ್ಲ."

ನರಸಿಂಗನು ಮನೆಗೆ ಬಂದ ಅತಿಥಿಗೆ ತನ್ನ ಪತ್ನಿಯು ಮಾಡಿದ ಅಪಮಾನಕ್ಕಾಗಿ ಬಹಳ ಖೇದಗೊಂಡನು. ರುದ್ರಮದೇವನ ಕೋಪ ವನ್ನು ಶಮನಮಾಡಲು ಬಹುವಾಗಿ ಯತ್ನಿಸಿದನು. ಯಮುನೆಗೆ ಬಂದಿದ್ದ ಹುಚ್ಚನ್ನು ವಿಶದವಾಗಿ ವರ್ಣಿಸಿದನು. ಆದರೆ ಯಾವುದೂ ಫಲಿಸದೆ ಹೋಯಿತು.

ಅತಿಥಿಯು ಕೋಪಯುಕ್ತನಾಗಿ ಮನೆಯನ್ನು ಬಿಟ್ಟು ಚಾವಡಿಗೆ ಹೋಗಿ ಕುಳಿತನು.

ನರಸಿಂಗನು ಆಗಿ ಹೋಗಿದುದನ್ನು ಕುರಿತು ಯೋಚಿಸುತ್ತಾ ಬೀದಿಯ ಬಾಗಿಲಬಳಿ ನಿಂತುಬಟ್ಟನು.

ಅಷ್ಟರಲ್ಲಿ ವಸ್ತ್ರಧಾರಿಗಳಾದ ಸೈನಿಕರು ಹಲವರು ಅಶ್ವಾರೂಢರಾಗಿ ಬಂದು ನರಸಿಂಗನ ಗೃಹದ ಮುಂದೆ ಬಂದುನಿಂತರು. ಅವರಲ್ಲಿ ಮುಖಂಡನಾದವನು ಕುದುರೆಯಿಂದಿಳಿದು ನರಸಿಂಗನಿಗೆ ನಮಸ್ಕರಿಸಿ "ಸ್ವಾಮೀ, ಮೂರು ದಿನಗಳ ಹಿಂದೆ ಮಹಾರಾಣಿ ಶ್ರೀ ರುದ್ರಮ ದೇವಿಯವರು ಇಲ್ಲಿಗೆ ದಯಮಾಡಿದರು. ಈಗ ಅವರನ್ನು ದರ್ಶನ ಮಾಡಬೇಕಾಗಿದೆ. ದಯವಿಟ್ಟು ಅವರಿಗೆ ಈ ಅರಿಕೆಯನ್ನು ತಿಳಿಸು ವಿರಾ" ಎಂದು ನುಡಿದನು.

ಮಹಾರಾಣಿಯು ಇಲ್ಲಿಗೇಕೆ ಬಂದಿದ್ದಳೆಂದು ನರಸಿಂಗನು ಕೇಳಬೇಕೆಂದಿರುವಲ್ಲಿ ಚಾವಡಿಯಲ್ಲಿ ಕುಳಿತಿದ್ದ ರುದ್ರಮದೇವನು ಎದ್ದು ಗಂಭೀರ ನಡಿಗೆಯಿಂದ ಪುನಃ ದ್ವಾರದ ಬಳಿ ಬಂದು ನಿಂತನು.

ಆತನನ್ನು ನೋಡಿದ ರಾವುತನು ವಿನಯದಿಂದ ಪ್ರಣಾಮಮಾಡಿ "ತಾಯಿ, ಮಹಾರಾಣಿಯವರ ಅಪ್ಪಣೆಯಂತೆ ಎರಡು ಸಹಸ್ರಮಂದಿ ಭಟರು ಸನ್ನದ್ಧರಾಗಿ ಬಂದಿರುವರು. ದೇವಿಯವರಿಗೆ ಪಯಣಕ್ಕಾಗಿ ಪಾಲಕಿಯನ್ನು ಸಿದ್ಧಗೊಳಿಸಬೇಕೋ ಇಲ್ಲವೇ, ಅಶ್ವಾರೂಢರಾಗಿಯೇ ರಾಜಧಾನಿಗೆ ದಯಮಾಡಿಸುವಿರೋ ತಿಳಿಸಬೇಕು. ದೇವಿಯವರು ಆಜ್ಞೆಮಾಡಬೇಕು" ಎಂದು ನಮ್ರತರನಾಗಿ ಕೇಳಿದನು.

"ಪಲ್ಲಕ್ಕಿಯೇ ಸಾಕು, ಎರಡುಗಳಿಗೆಗಳಲ್ಲಿ ಓರಗಲ್ಲು ಸೇರಬಹುದು. ಜಾಗ್ರತೆಮಾಡು" ಎಂದು ರುದ್ರಮದೇವನು ಅಲ್ಲ ಮಹಾರಾಣಿ ಶ್ರೀ ರುದ್ರಮದೇವಿಯು ಆಜ್ಞಾಪಿಸಿದಳು.

ಅಲ್ಲಿಂದ ರಾವುತನು ಮರಳಿದನು.

ಈ ಸಂಭಾಷಣೆಯನ್ನು ಕೇಳುತ್ತಿದ್ದ ನರಸಿಂಗನು ತಟ್ಟನೆ ಒಳಗೆ ಹೋಗಿ ಇದುವರೆಗೂ ತಮ್ಮ ಮನೆಯಲ್ಲಿದ್ದ ವ್ಯಕ್ತಿಯು ತ್ರಿಲಿಂಗ ಸಾಮ್ರಾಜ್ಞಿಯಾದ ರುದ್ರಮದೇವಿಯೆಂದು ತಿಳಿದು ಯಮುನೆಯನ್ನು ಸಂಗಡಲೇ ಕರೆದುಕೊಂಡು, ರಾಣಿಯ ಪಾದಗಳ ಮೇಲೆ ಬಿದ್ದು ತಮ್ಮ ಅನಂತ ಅಪರಾಧವನ್ನು ಮನ್ನಿಸಬೇಕೆಂದು ಅಂಗಲಾಚಿದನು.

ರಾಣಿಯು ಮಂದಹಾಸದಿಂದ ಇಬ್ಬರನ್ನೂ ಎಬ್ಬಿಸಿ ಸಾದರದಿಂದ ನುಡಿದಳು. "ಅಮ್ಮಾ ಯಮುನಾ, ನೀನು ನಿಂದಿಸಿದೆಯೆಂದು ನಾನು ಕೋಪಿಸಿಕೊಳ್ಳಲಿಲ್ಲ. ನೀನು ಚಿಂತಿಸಬೇಡ. ಸ್ತ್ರೀ ಜಾತಿ ಸಹಜವಾದ ಕರುಣೆಯಿಂದಲೂ ಅನೇಕ ದುಃಖಪೀಡಿತವಾದ ನನ್ನ ಮನಸ್ಸು ನಿಲ್ಲದೆ, ನಿನ್ನ ದುಃಖವೂ ನೆನಪಿಗೆ ಬಂದು, ಪುರುಷವೇಷಧಾರಿಯೆಂಬುದನ್ನು ಮರೆತು ಅಂದು ನಿನ್ನನ್ನು ಆಲಂಗಿಸಿದೆನು. ಆದರೂ ಪುರುಷವೇಷಧಾರಿಯೆಂಬುದು ಮನಸ್ಸಿಗೆ ತಟ್ಟನೆ ಹೊಳೆದು, ನಿನ್ನ ರಮಣನ ಮನಸ್ಸಿನಲ್ಲಿ ಜನಿಸಬಹುದಾದ ಸಂದೇಹವು ತಲೆದೋರಿ ಇನ್ನೊಮ್ಮೆ ನಿಮ್ಮನು

ಕಾಣಬೇಕೆಂದು ಮಾಡಿಕೊಂಡೆನು ಅದರಂತೆಯೇ ಮೂರುದಿನ ಹಿಂದೆ ನಿಮ್ಮ ಮನೆಗೆ ಬಂದುದು. ನಿನ್ನ ನಿಷ್ಕಪಟ ಸ್ವಭಾವವನ್ನೂ, ನಿರ್ಮಲ ಪ್ರೀತಿಯನ್ನೂ ನೋಡಿ ನನಗೆ ಬಹಳ ಆನಂದವಾಯಿತು. ಆದರೂ ನಾನು ಸ್ವಲ್ಪಕಾಲದ ವರೆಗೆ ನಿಮ್ಮ ಸೌಖ್ಯಕ್ಕೆ ಕಂಟಕಮಯಳಾದುದ ರಿಂದ ನೀವು ನನ್ನನ್ನು ಮನ್ನಿಸಬೇಕು.

ದಂಪತಿಗಳು ರಾಣಿಗೆ ಪುನಃ ಪುನಃ ನಮಸ್ಕರಿಸುತ್ತಾ "ತಾಯಿ, ನಾವು ತಪ್ಪು ಮಾಡಿದವರು ಅದಕ್ಕಾಗಿ ನೀವು ನಮ್ಮನ್ನು ಕ್ಷಮಿಸ ಬೇಕು. ಉದಾರಹೃದಯದಿಂದ ಮನ್ನಿಸಬೇಕು. ಅಂತಹುದರಲ್ಲಿ ತಾವು ನಮ್ಮಲ್ಲಿ ಕ್ಷಮಾಪಣೆ ಕೇಳುವುದು ನ್ಯಾಯವಲ್ಲ" ಎಂದು ಕಂಬನಿ ತುಂಬಿ ಬಿನ್ನವಿಸಿದರು.

ಅಷ್ಟರಲ್ಲಿಯೇ ಪಲ್ಲಕ್ಕಿ ಬರಲು ದೇವಿಯು ಅದನ್ನು ಏರಿ, ದಂಪತಿ ಗಳ ಅನುಜ್ಞೆಯನ್ನು ಕೇಳಿದಳು. ಹೋಗುವಾಗ "ಅಮ್ಮಾ, ನಿಮ್ಮ ಸಂಶಯಪಿಶಾಚವು ಈಗ ದೂರವಾಯಿತೆಂದು ನಾನು ನಂಬಬಹುದೇ?" ಎಂದು ಕೇಳಿದಳು.

ಅದಕ್ಕೆ ಯಮುನಾ ನರಸಿಂಗರು "ದೇವಿಯವರ ಮಹದನು ಗ್ರಹದಿಂದ ಖಂಡಿತವಾಗಿ ಓಡಿಹೋಯಿತು." ಎಂದು ನಗುತ್ತಾ ಉತ್ತರಗೊಟ್ಟರು.

ಬಹುಮಾನವಾಗಿ ದೊರೆತ ಮುತ್ತಿನ ಹಾರವು ಯಮುನೆಯ ಕೊರಳಲ್ಲಿ ಸದಾ ಇರುತ್ತಿತ್ತು. ಯಾರಾದರೂ ಕೇಳಿದರೆ ಇದು ದೇವಿಯ ಅನುಗ್ರಹವೆಂದು ಆಕೆಯು ಹೇಳುತ್ತಿದ್ದಳು.

೫

ಕತೆಯನ್ನು ಆದ್ಯಂತವಾಗಿ ಶಾರದೆಯು ಕೇಳಿದಳು. ಕೇಳಿ ಒಂದು ಸಾರಿ ನಗಲಾರಂಭಿಸಿದಳು. ಅವಳ ನಗುವಿನಲ್ಲಿ ಬಿಗುವಿತ್ತು.

ನಗುತ್ತಿದ್ದ ಕಾರಣವನ್ನು ಏನೆಂದು ಕೇಳಿದೆ ಅದಕ್ಕೆ ಬರುತ್ತಿದ್ದ ನಗುವನ್ನು ತಡೆದು "ಗಂಡಸರು ಇಷ್ಟು ಮೂರ್ಖರೆಂದು ನಾನು ತಿಳಿದಿರಲಿಲ್ಲ" ಎಂದು ಉದ್ಗಾರತೆಗೆದಳು.

ಇದರಿಂದ ನನಗೆ ಸ್ವಲ್ಪ ವಿಚಾರಕ್ಕೆ ಇಟ್ಟಿತು. ಆದರೂ ನಾನು ಜವಾಬು ಹೇಳಿದೆ. "ನಿಸರ್ಗದಲ್ಲಿ ತನ್ನದೆಂಬ ಭಾವನೆಯಿದೆ. ಆ ಭಾವನೆಯನ್ನು ಹೊಂದಿಯೇ ಸಮಾಜದ ನಿಯಮಗಳು. ಆದರೆ ಭಾವನೆಗಳಿಂದ ಅನೇಕ ಸಾರಿ ವಿವೇಕಶೂನ್ಯರಾಗಿ ಜನರು ನಡೆಯುತ್ತಾರೆ."

"ವಿವೇಕಶೂನ್ಯತೆಗೆ ಮಿತಿಯಿಲ್ಲವೇ? ಸಂಶಯಕ್ಕೆ ಆಸ್ಪದವು ಬೇಡವೇ? ತಿಳಿಗೇಡಿಗಳಂತೆ ನಡೆದರೆ ಸಂಸಾರದ ಬಗೆ ಹೇಗೆ?" ಎಂದು ಸವಾಲು ಮಾಡಿದಳು.

ಜಗತ್ತಿನ ಇತಿಹಾಸದಲ್ಲಿ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವು ದೊರೆತಿಲ್ಲ. ಒಂದು ವೇಳೆ ದೊರೆತಿದ್ದರೆ ಕಥಾನಕವು ಬೇರೆಯಾಗುತ್ತಿತ್ತು; ಇತಿಹಾಸದ ಗತಿಯು ಬೇರೆಯಾಗಿರುತ್ತಿತ್ತು.

ಆದರಲ್ಲಿಯೂ ಸ್ತ್ರೀ–ಪುರುಷರ ಸಂಪರ್ಕದಲ್ಲಿ ಈ ಭಾವನೆಯು–ನನ್ನದು, ಯಾವತ್ತು ಹಕ್ಕು ಬೇರೆ ಯಾರಿಗೂ ಇಲ್ಲ– ದೂರವಾದರೆ ಸಮಾಜದ ರಚನೆಯು ಬದಲಾಗುವುದು

ಆದರೆ ಈ ಮಾರ್ಪಾಡು ರೂಢಿಯಲ್ಲಿ ಬರಬೇಕಾದರೆ ವರ್ಷಾಂತರಗಳು ಬೇಕು. ಅದುವರೆಗೆ ಅಸಂಖ್ಯ ಸಂಸಾರಗಳ ಜನನ ಬೆಳವಣಿಗೆ ಮರಣಗಳು ಆಗಿಹೋಗಬೇಕು.

ಅಂತಹ ವಿಲಕ್ಷಣ ಸಂಸಾರಗಳಲ್ಲಿ ಜಗತ್ತು ದಾರಿಗಾಣದೆ ಕುರುಡಾಗಿರುವುದು. ಅದರಿಂದಲೇ ಶಾರದೆಯ ಪ್ರಶ್ನೆಯು ಕಾನನದಲ್ಲಿ ಬೆಳೆದ ಕುಸುಮದಂತೆ.

# ಚರಿತ್ರ ಹೀನೆ × × × ×

೧

ನನಗೂ ಶಾರದೆಗೂ ಯಾವಾಗಲೂ ಇದೇ ಜಗಳ. ಅದು ಎಂದೂ ಮುಗಿಯದ ಜಗಳ. ನಾನೂ ಒಪ್ಪೆ; ಅವಳೂ ಒಪ್ಪುವುದಿಲ್ಲ. ಏನೇ ಆಗಲಿ ಅದು ಬಗೆಹರಿಯದ—ನಿರಂತರವಾದ ವ್ಯಾಜ್ಯ.

ಒಂದೊಂದು ಸಮಯದಲ್ಲಿ ನನಗೇ ಭಾಸವಾಗುವದು 'ಅವಳ ಮೇಲೆ ದೋಷಾರೋಪಣೆ ಮಾಡಿದರೆ ನನ್ನದೇ ತಪ್ಪು' ಎಂದು. ಯುಗ-ಯುಗಾಂತರಗಳಿಂದ ಜಗತ್ತು ಶಾರದೆಯ ಪಕ್ಷವನ್ನು ಹಿಡಿದು ವಾದಿಸುತ್ತದೆ. ಪ್ರತಿಕಕ್ಷಿಗಳನ್ನು ನೀತಿಬಾಹಿರರೆಂದು ಭಾವಿಸಿ, ಸಮಾಜದ ಹೊರಗೆ ಎಂದೆಂದೂ ಇರಿಸುತ್ತದೆ; ಆದರೂ ನನಗೆ ಈ ಬಗೆಯ ವರ್ತನವನ್ನು ಕಂಡರೆ ಕಡು ದುಃಖವಾಗುವುದು; ಜುಗುಪ್ಸೆಯಾಗುವುದು; ಆದರೆ ಮಾಡುವುದೇನು ?

ಯುಗಯುಗಾಂತರಗಳ ತೀರ್ಪಿನ ಮೇಲೆ—ಅಸಂಖ್ಯ ಶಾರದೆಯರ ತೀರ್ಪಿನ ಮೇಲೆ—ವಾದಿಸಿ. ತಪ್ಪೆಂದು ತೋರಿಸುವುದು ಬಹು ಕಷ್ಟದ ಕೆಲಸ; ನಿರುಪಯೋಗಿಯಾದ ಕೆಲಸ.

ಕಾರಣವಾದರೂ ಇಷ್ಟೇ; ಜಗತ್ತು ತನ್ನ ಕಣ್ಣಿನಲ್ಲಿರುವ ಕಸವನ್ನು ನೋಡುವುದಿಲ್ಲ; ನೋಡಿದರೂ ಲೆಕ್ಕಿಸುವುದಿಲ್ಲ. ಆದರೆ ವ್ಯಕ್ತಿಯು ಮಾತ್ರ ನಿಯಮಬದ್ಧವಾದ, ರೂಢಿಬದ್ಧವಾದ ಮಾರ್ಗದಲ್ಲಿ ನಡೆಯಲೇ ಬೇಕು. ಮುಂದಿನದನ್ನು ಕೇಳಿ, ನೀವೇ ಉತ್ತರವನ್ನು ಕೊಡಿ. ನಾನು ಹೆಚ್ಚಿಗೆ ಹೇಳಲು ಬಯುವುದಿಲ್ಲ.

೨

ನಾನು ಅವಳನ್ನು ಮೊದಲನೆಯ ಸಾರಿ ನೋಡಿದುದು ಬೀದಿಯಲ್ಲಿ. ಅದು ನನ್ನ ಪ್ರತಿದಿನದ ಹಾದಿ. ಒಂದು ದಿನ ಸಂಜೆ ಬೀದಿಯಲ್ಲಿ

ಬರುತ್ತಿದ್ದಾಗ, ನನ್ನ ಸ್ನೇಹಿತರೊಬ್ಬರು: "ರಾಯರೇ, ಮಿಲ್ಲು ಕೂಲಿಗಳ ಗುಂಪಿನಲ್ಲಿ ನೋಡಿ, ಒಂದು ತಮಾಷೆಯಿದೆ!" ಎಂದು ಹೇಳಿದರು. ನಾನು ಸ್ವಲ್ಪ ಕುತೂಹಲದಿಂದ ಎದುರಿಗೆ ಬರುತ್ತಿದ್ದ ಗುಂಪಿನ ಕಡೆಗೆ ನೋಡಿದೆ. ಬರುತ್ತಿದ್ದವರೆಲ್ಲರೂ ವಯಸ್ಸು ಬಂದ ಹೆಣ್ಣು-ಮಕ್ಕಳು; ಎಲ್ಲರೂ ಸಮೀಪದಲ್ಲಿದ್ದ ಗಿರಣಿಯಲ್ಲಿ ದುಡಿದು ಜೀವನವನ್ನು ಸಾಗಿಸುತ್ತಿದ್ದರು. ನಾನು ಅವರನ್ನು ನಿತ್ಯವೂ ನೋಡುತ್ತಿದ್ದೆ, ಇಂದೂ ನೋಡಿದೆ. ತಮಾಷೆಯೇನೂ ಕಂಡುಬರಲಿಲ್ಲ.

"ಏನೂ ಇಲ್ಲವಲ್ಲರಿ!" ಎಂದು ಉತ್ತರಕೊಟ್ಟೆ. ನನ್ನ ಸ್ನೇಹಿತರು ನಗುತ್ತಾ, "ಹಾದ್‌ಹೌದು ಏನು ಇಲ್ಲ; ಕಂಡರೂ ಇಲ್ಲ ಅನ್ನೋದು. ಚಿಂತೆಯಿಲ್ಲ; ಮೂರನೆಯವಳನ್ನು ನೋಡಿ ಹೇಳಿರಿ!" ಎಂದು ಮುಂದಣ ದಾರಿ ತೋರಿದರು.

ಹೀಗೆ ನಿರ್ದಿಷ್ಟವಾದ ಮೇಲೆ, ಗುಂಪಿನಲ್ಲಿ ಮೂರನೆಯವಳನ್ನು ನೋಡಿದೆ; ನೋಡಿ ಅಚ್ಚರಿಗೊಂಡೆ. ಅದೇ ಮೊದಲನೆಯ ಸಾರಿ ಅವಳ ದರ್ಶನ.

ಆ ಕೂಲಿಯವಳ ವಯಸ್ಸು ಸುಮಾರು ಇಪ್ಪತ್ತು-ಇಪ್ಪತ್ತೆರಡು ಇರಬಹುದು. ಮಟ್ಟತರಕ್ಕಿಂತಲೂ ಎತ್ತರ; ಮಧ್ಯಕ್ಕೆ ಸ್ವಲ್ಪ ಓರೆಯಾಗಿ ಬಾಚಿದ ಕೂದಲು; ಹಿಂದಕ್ಕೆ ಸರಿದು ಬಿದ್ದ ಸೆರಗು; ಸೆರಗಿನಿಂದ ಕಳೆಗೊಂಡಿದ್ದ ಮುಖಮಂಡಲ.

ಅದು ಸುಂದರವಾದ ಮೋರೆ, ಒಂದು ಸಾರಿ ನೋಡಿದರೆ ಮತ್ತೊಂದು ಸಾರಿ ನೋಡಬೇಕೆಂಬ ಬಯಕೆಯನ್ನು ಮನದಲ್ಲಿ ಮೂಡಿಸುವಂತಹ ಮುಖ. ವಿಸ್ತಾರವಾಗಿದ್ದು ಆಕರ್ಷಿಸುವ ನಯನಗಳು. ಆ ನಯನಗಳ ಲೋಕವೇ ಬೇರೆ. ಅವನ್ನು ನೋಡುವುದು ತೀರ ವಿರಳ; ಅನೇಕ ಸಾರಿ ದುರ್ಲಭವೆಂದೇ ಹೇಳಬಹುದು.

ಅವಳ ಮೈಕಟ್ಟು ತೆಳ್ಳಗೆ. ಒನಪು—ವೈಯಾರಗಳಿಗೆ ಒಪ್ಪುವಂತಿತ್ತು. ಮೈಬಣ್ಣ ಚೆಂಬೊನ್ನಿನಂತಹದು, ಬೆಳುಗೆಂಪಲ್ಲ. ದೂರದಿಂದ

ನೋಡಿದರೆ ಕೂಲಿಯುವಳು. ಹತ್ತಿರದಿಂದ ನೋಡಿದರೆ ಸುಂದರಳಾದ, ಮನಮೋಹಕಳಾದ ಯುವತಿ. ಯಾವನಾದರೂ ಒಬ್ಬ ಧನಿಕನ ಮನೆಯಲ್ಲಿದ್ದರೆ, ಆಕೆಯನ್ನು ಅತ್ಯಂತ ರೂಪವತಿಯೆಂದು ಹೇಳುವಂತಿದ್ದಿತು.

ಇಷ್ಟೆಲ್ಲವೂ—ಆಕೆಯನ್ನು ನೋಡುತ್ತಿದ್ದಂತೆಯೇ—ನನ್ನ ಮನಸ್ಸಿನಲ್ಲಿ ಹೊಳೆದುವು. ಅವಳು ಒಂದು ಸಾರಿ ತನ್ನ ನೋಟವನ್ನು ನನ್ನ ಕಡೆಗೆ ಬೀರಿದಳು. ನಾನು ತಲೆಯನ್ನು ತಗ್ಗಿಸಿ, ಮರ್ಯಾದಸ್ಥನಂತೆ ದಾರಿಯಲ್ಲಿ ನಡೆದೆ.

ಆಗ ನನ್ನ ಸ್ನೇಹಿತರೂ "ಏನು, ರಾಯರೇ ನೋಡಿದಿರಾ? Mesmerise ಆದಿರೇನು? ಸುಮ್ಮನೆ ಇರುವಿರಲ್ಲಾ" ಎಂದು ನನ್ನ ಯೋಚನಾತರಂಗವನ್ನು ಚದರಿಸಿದರು. ಆದರೂ ನಾನು ಉತ್ತರವನ್ನು ಕೊಡಲಿಲ್ಲ. ಆಗ ಅವರು "ಅಷ್ಟೊಂದು ಚಿಂತೆಯೇತಕ್ಕೆ? ನಾಳೆ ಮಾತಾಡಿಸಿದರೆ ಆಯಿತು!" ಎಂದು ಹೇಳಿದರು.

ಅವರ ವಾಕ್ಯಾರ್ಥವು ನನಗೆ ಯೋಗ್ಯವಾಗಿ ಗ್ರಹಿಕೆಯಾಗಲಿಲ್ಲ.. ಅನ್ಯಮನಸ್ಕನಾಗಿ ಅವರ ಹಿಂದೆಯೇ ಹೊರಟೆ. ಆದರೆ ಮನಸ್ಸಿನಲ್ಲಿ-ಮಲಿನವಸ್ತ್ರಧಾರಿಣಿಯಾದ-ರೂಪರಾಶಿಯಾದ-ಕೂಲಿಯುವಳ ಚಿತ್ರ ಹಾಗೂ ಯೋಚನ.

ನೀವು ನನ್ನನ್ನು ಕೆಟ್ಟವನೆಂದು ತಿಳಿಯಬಹುದು. ಏನೂ ಬಾಧಕವಿಲ್ಲ. ನನ್ನ ಪರಿಚಯದವರೆಲ್ಲರೂ ಹಾಗೆಯೇ ತಿಳಿಯುವರು. ಹೆಚ್ಚಿಗೆ ಹೇಳಿದರೆ ತಮಗೇಕೆಂದು ಸುಮ್ಮನಾಗುವರು; ಗೊಡವೆಯೇಕೆಂದು ಗೋಣುಮುರಿದು ತೆಪ್ಪಗಾಗುವದು.

ಮರುದಿನ ಮಿಲ್ಲು ಬಿಡುವ ಹೊತ್ತಿನಲ್ಲಿ ಮನೆಬಿಟ್ಟು ಹೊರಟು, ನಿಧಾನವಾಗಿ ದಾರಿಯನ್ನು ಕ್ರಮಿಸತೊಡಗಿದೆ. ಮನದಲ್ಲಿ ಆ ಕೂಲಿಯುವಳ ರೂಪರಾಶಿಯನ್ನೂ ವಿಚಿತ್ರಸೌಂದರ್ಯವನ್ನೂ ನೋಡ

ಅಂದು ನನ್ನ ಆಶೆಯು ವಿಫಲವಾಗಲಿಲ್ಲ; ಎಂದಿನಂತೆ—ನೀವು ಕಿರುನಗೆಯನ್ನು ತೋರಬಹುದು—ಬೆಡಗಿನಿಂದಲೆ ಬರುತ್ತಿದ್ದಳು. ಪೂರ್ಣ ನೋಟದಿಂದ, ಲಜ್ಜಾಹೀನನಾಗಿ ಅವಳನ್ನೇ ನೋಡಿದೆ; ಅವಳೂ ಹುಸಿನಗೆಯಿಂದ ನನ್ನನ್ನು ನೋಡಿ, ಅತಿ ಮಾನಸ್ಥಳಂತೆ ತಲೆಯ ಮೇಲಿನ ಸೆರಗನ್ನು ಸರಿಪಡಿಸಿಕೊಂಡು ಮುಂದೆ ನಡೆದಳು

ನಾನೂ ಅವಳನ್ನು ಹಿಂಬಾಲಿಸಿದೆ. ಅವರ ಗುಂಪು ಮುಂದೆ, ನಾನು ಹಿಂದೆ. ಆ ದಿನವೆ, ಬಹು ತೊಂದರೆಪಟ್ಟುಕೊಂಡು ಅವಳಿರುವ ಸ್ಥಳವನ್ನು ಗೊತ್ತು ಹಚ್ಚಿದೆ

ಮನಸ್ಸಿನಲ್ಲಿ ಅಂದು ಒಂದು ಬಗೆಯ ಆನಂದ; ಅದರೊಡನೆಯೆ ಸಮಾಜದ ವಿಷಯಕವಾದ ಅಂಜಿಕೆ. ಎರಡಕ್ಕೂ ಬಲವತ್ತರನಾದ ಬಡಿದಾಟ. ಅದು ಹೊರಗಿನವರಿಗೆ ಅರಿವಾಗದಂತಹ ಗೊಂದಲ. ಪೃಥ್ವಿಯ ಅನಂತವಾದ - ವ್ಯಷ್ಟಿಯ —ಹೃದಯದಲ್ಲಿಯೇ ನಡೆಯುವ ಯುದ್ಧ. ಯುದ್ಧದ ಫಲಿತಾಂಶವೇ ಸಮಾಜದ ಧರ್ಮಗಳು, ನಿಯಮಗಳು. ಈ ಬಡಿದಾಟದ ಮೂಲಕವೇ ನನ್ನ ಮುಖದಲ್ಲಿ ಒಂದು ಬಗೆಯ ಉದಾಸೀನತೆಯ ಭಾವವಿತ್ತು. ಶಾರದೆಯು ಅದನ್ನು ನೋಡಿ, ಹಂಗಿಸಿದಳು; ಅಪಹಾಸ್ಯಮಾಡಿದಳು. ಏನು ಮಾಡಿದರೂ ನನ್ನೊಳಗೆ ನಡೆದಿದ್ದ ಗೊಂದಲವು ಮುಗಿಯಲಿಲ್ಲ.

೪

ಅವಳು ಚರಿತ್ರಹೀನಳೆಂದು ಸ್ಪಷ್ಟವಾಗಿ ಹೇಳಿದರು ಅವಳ ಸೌಂದರ್ಯದ ಸಂಗಡಲೇ ಈ ಕೆಟ್ಟ ಹಾದಿಯೂ ಇದ್ದಿತೆಂದು ಸಾರಿದ್ದರು. ನನ್ನ ಕುತೂಹಲವನ್ನು ಕಂಡು ನಗುತ್ತಿದ್ದರು. ಅವರಿಗೆ ನನ್ನ ಮನಸ್ಸಿನಲ್ಲಿದ್ದ ಭಾವನೆಯು ಅರ್ಥವಾಗಿರಲಿಲ್ಲ.

ನನ್ನ ಆಶೆಯಾದರೂ ಇಷ್ಟೆ. ಕೆಲವು ದಿನ ಅವಳನ್ನು ನನ್ನ ಸಂಗಡ ಇಟ್ಟುಕೊಂಡು, ಅವಳನ್ನು ಒಂದು ಸಮಾಜದ ವ್ಯಕ್ತಿಯನ್ನಾಗಿ ಮಾಡಬೇಕೆಂಬ ಹಂಬಲು ಇತ್ತು. ಇದರ ಸಾಧನೆಯ ಮಾರ್ಗವು

ಅತಿ ಕಡಿದಾದುದು; ವ್ಯಕ್ತಿಯ ಕಲ್ಯಾಣಕ್ಕಾಗಿ ಕೈಹಾಕಿದರೂ ಜನರು ದೂಷಿಸುವರು.

ಮನೆಗೆ ಬಂದು ಶಾರದೆಗೆ ಹೇಳಿದೆ; ಕೊನೆಗೆ ಒಪ್ಪಿದಳು. ಅವಳನ್ನು ತಂದು ಮನೆಯಲ್ಲಿಟ್ಟುಕೊಂಡು, ದಾರಿಗೆ ತರಬೇಕೆಂದು ನಿರ್ಣಯವಾಯಿತು.

ಹೆಂಗಸರ ಹೃದಯಕ್ಕಿಂತಲೂ ಹಿರಿದಾದುದು ಯಾವುದೂ ಇಲ್ಲ; ಅದರಂತೆಯೆ ಕಿರಿದಾದುದೂ ಯಾವುದೂ ಇಲ್ಲವೆಂದು ನನ್ನ ಅನುಭವ.

೫

ಅದೇ ದಿನದ ರಾತ್ರಿ ನಾನು ಅವಳ ಮನೆಗೆ ಮೋಟಾರನ್ನು ತೆಗೆದುಕೊಂಡು ಹೋದೆ. ಆ ಬೀದಿಯಲ್ಲಿ ಮೋಟಾರು ಬಂದುದು ಅದೇ ಮೊದಲೆಂದು ಕಾಣುತ್ತದೆ. ಹುಡುಗರು, ಮಕ್ಕಳು, ಹೆಂಗಸರು, ಎಲ್ಲರೂ ನನ್ನ ಮೋಟಾರನ್ನು ನೋಡುತ್ತ ನಿಂತರು.. ನನಗೆ ಸ್ವಲ್ಪ ನಗುಬಂದಿತು. ಎಲ್ಲರೂ ಸಮಾಜವಾದಿಗಳು; ಕಾರ್ಯತಃ ಮಾತ್ರ ಬೇರೆ.

ಕಾರನ್ನೇನೋ ಮನೆಯ ಮುಂದೆ ನಿಲ್ಲಿಸಿದೆ; ಆದರೆ ಮುಂದೇನು ಮಾಡಬೇಕೆಂದು ಆಲೋಚಿಸುತ್ತ ಕುಳಿತೆ.

ಕಾರನ್ನು ನೋಡಿಯೋ ಏನೋ, ಯಾರೋ ಬಾಗಿಲನ್ನು ತೆಗೆದರು. ನಸುನಸುವಾಗಿದ್ದ ಬೆಳಕಿನಲ್ಲಿ ಮೊದಲು ಯಾರೆಂಬುದು ತಿಳಿಯಲಿಲ್ಲ. ಬಾಗಿಲನ್ನು ತೆಗೆದವಳು ಅವಳೇ. ನಾನು ಅವಾಕ್ಕಾದೆ.

"ಯಾರು ಬೇಕಾಗಿತ್ತು?" ಎಂದು ಸಣ್ಣ ದನಿಯಲ್ಲಿ ಆಕೆ ಕೇಳಿದಳು.

ನನಗೆ ಉತ್ತರಕೊಡಲು ತೋರಲಿಲ್ಲ.

"ಯಾರನ್ನು ನೋಡಬೇಕು?" ಎಂದು ಪುನಃ ಕೇಳಿದಳು.

ನಾನು ಮೆಲ್ಲಗೆ ಕಾರಿನಿಂದ ಇಳಿಯುತ್ತೊಡಗಿದೆ. ಅವಳೂ ಕಾರಿನ ಬಳಿ ಬಂದು ನಿಂತಳು.

ಇತರರಿಗೆ ಕೇಳದಂತೆ "ಬರುತ್ತೀಯಾ?" ಎಂದು ನಾನು ಅವಳನ್ನು ಕೇಳಿದೆ.

"ರಾಯರ ಚಿತ್ತ!"

"ಹೂಂ."

"ಒಂದು ನಿಮಿಷ, ಒಳಗೆ ಹೋಗಿ ದೀಪ ಆರಿಸಿ, ಬರುತ್ತೇನೆ!" ಎಂದು ಹೇಳಿದವಳು ಒಳಗೆ ಹೋದಳು. ನಾನು ಏನು ಮಾಡುತ್ತಿದ್ದೇನೆಂಬುದು ನನಗೆ ಸರಿಯಾಗಿ ತೋರಲಿಲ್ಲ. ಒಂದೆರಡು ನಿಮಿಷಗಳ ನಂತರ ಆಕೆ ಬಂದಳು. ಮೈಮೇಲೆ ಶುಭ್ರವಾದ ಸೀರೆ; ಅವಸರದಲ್ಲಿ ಬಾಚಿದ್ದ ಕೂದಲು; ಆದರೆ ಮುಖದಲ್ಲಿ ಅರ್ಥಹೀನವಾದ ಕಿರುನಗೆ ನಾನು ಮಾತನಾಡದೆ ಕಾರಿನಲ್ಲಿ—ಹಿಂಬದಿಯಲ್ಲಿ—ಅವಳನ್ನು ಕೂಡಿಸಿಕೊಂಡು ಹೊರಟುಬಿಟ್ಟೆ.

ಅವಳಿದ್ದ ಸ್ಥಳದಲ್ಲಿ ಇದು ಸೋಜಿಗವಾಗಿ ಕಾಣಬರಲಿಲ್ಲವೆಂದು ನನ್ನ ಭಾವನೆ. ಇಂತಹುದು ಅಲ್ಲಿ ನಿತ್ಯದ ವ್ಯವಹಾರವಾಗಿರಬಹುದು. ಹೊಟ್ಟೆಗಿಲ್ಲದಿರುವ ವೇಳೆಯಲ್ಲಿ, ಯಾವ ರೀತಿಯಲ್ಲಿಯಾದರೂ ಸಂಪಾದಿಸಿ, ಅದಕ್ಕೆ ಹಾಕಿದರೆ ತಪ್ಪಲ್ಲವೆಂದು ಅವರ ಅಭಿಪ್ರಾಯವೆಂದು ನನ್ನ ಬಲವಾದ ಊಹೆ.

ಮನೆಗೆ ಬಂದ ಮೇಲೆ ಶಾರದೆಯು ಅವಳನ್ನು ನೋಡಿದಳು. ಏನೂ ಮಾತನಾಡದೆ ಅವಳಿಗಾಗಿ ಒಂದು ಕೋಣೆಯನ್ನು ಸಿದ್ಧಮಾಡಿ ಕೊಟ್ಟಳು.

ಪುನಃ ನಾವಿಬ್ಬರೂ ಒಟ್ಟಿಗೆ ಇದ್ದಾಗ, ಶಾರದೆಯು "ಎಂತಹ ರೂಪವತಿ, ಆದರೆ ಪಾಪ..." ಎಂದಳು. "ಹೌದು" ಎಂದು ಅರ್ಥಹೀನವಾದ ಉತ್ತರವನ್ನು ನಾನು ಕೊಟ್ಟೆ.

ಶಾರದೆಗೆ ಇದರಿಂದ ತೃಪ್ತಿಯಾಗಲಿಲ್ಲ. ನನ್ನನ್ನು ರೇಗಿಸುವ ಉದ್ದೇಶದಿಂದ.

“ ಏನು, ಮನೆಯಲ್ಲಿರುವುದು ಚೆನ್ನಾಗಿಲ್ಲ; ಒಬ್ಬ ಉಪಪತ್ನಿ ಬೇಕು. ಇದೇ ಮನೆಯಲ್ಲಿ........ನಾಚಿಕೆಯಿಲ್ಲ.... ” ಎಂದು ನಗುತ್ತ ನುಡಿದಳು.

ನನಗೆ ಸ್ವಲ್ಪ ಸಿಟ್ಟು ಬಂದಿತು. ಅದನ್ನು ನುಂಗಿಕೊಂಡು “ ಆ ಹುಡುಗಿ ಬಹು ಚೆನ್ನಾಗಿದ್ದಾಳೆ ಸರಿ ! ನನ್ನ ಶಾರದೆ ಅವಳಿಗಿಂತ.... ”

ಆದರೆ ಶಾರದೆಯು ನನ್ನ ಮಾತನ್ನು ಮುಗಿಸಗೊಡಲಿಲ್ಲ. ಬಾಯನ್ನು ಭದ್ರವಾಗಿ ಹಿಡಿದುಕೊಂಡಳು.

ನನಗೆ ಬೇಕಾದ್ದುದೂ ಅದೆ....

೬

ಮರುದಿನ ಬೆಳಗಿನಲ್ಲಿ ನಾನು ಎದ್ದಾಗ ಬಿಸಿಲೇರಿತ್ತು. ನಿದ್ರೆ ಬಲವಾಗಿ ಬಂದಿರಬೇಕು. ಶಾರದೆಯು ಬಂದಳು. “ ಏನು ? ಬಂದವಳೊಡನೆ ಕನಸಿನಲ್ಲಿ, ಸರಸವಾಡುತ್ತಿರಬಹುದು; ಅದರಿಂದಲೇ ಏಳಲು ಇಷ್ಟು ತಡವಾಯಿತು ! ” ಎಂದು ನುಡಿದಳು. ಮುಖಮಾರ್ಜನಾದಿಗಳನ್ನು ಮುಗಿಸಿ, ಕಾಫಿ ಕುಡಿಯುತ್ತಿದ್ದಾಗ ಶಾರದೆಯು ಕೂಲಿಯವಳ ಪೂರ್ಣ ಇತಿಹಾಸವನ್ನು ವಿಸ್ತರಿಸಿದಳು. ಅದರಿಂದ ನನಗೆ ಇಷ್ಟು ತಿಳಿದುಬಂದಿತು.

“ ಅವಳ ಹೆಸರು ಪಾರ್ವತಿ; ಜನರು ಮಾತ್ರ ಅವಳನ್ನು ನೋಡಿ ‘ಚೆನ್ನಿ’ ಎಂದು ಕರೆಯುತ್ತಿದ್ದರು. ಸಣ್ಣ ವಯಸ್ಸಿನಲ್ಲಿಯೇ ಆಕೆಯ ತಂದೆತಾಯಿಗಳು ಕಾಲವಶರಾದರು. ಅವರಿವರಿಂದ ಪಾಲಿಸಲ್ಪಟ್ಟು ದೊಡ್ಡವಳಾದ ಮೇಲೆ ಗಿರಣಿಯಲ್ಲಿ ಕೆಲಸಕ್ಕೆ ನಿಂತಳು. ಅದರಿಂದ ಹೊಟ್ಟೆ ಹೊರೆಯಲು ಬಹಳ ಕಷ್ಟವಾಯಿತು. ಹೊಟ್ಟೆಗೆ ಸಾಲದಾದುದರಿಂದ, ಅಲ್ಲದೆ ಕೆಲಸವು ಕಳೆದುಹೋಗಬಹುದೆಂಬ ಅಂಜಿಕೆಯಿಂದ ಹಾಗು ಇನ್ನಿತರ ಕಾರಣಗಳಿಂದ, ಕೇವಲ ವಾತಾವರಣದ ಬಲದಿಂದ ಅವಳು ಪತಿತರ ಹಾದಿಗೆ ಬಿದ್ದಳು.

"ಒಂದು ಸಾರಿ ಎಡವಿದ ಮೇಲೆ ಹುಣ್ಣು ಮಾತ್ರ ಹಿಂಗದೆ, ಮೇಲಿಂದ ಮೇಲೆ ಹೆಚ್ಚಾಗುತ್ತಿದ್ದಿತು. ಅಂತೂ ಚೆನ್ನಿಯ ಜೀವನವು ಈಗ ಒಂದೇ ಒಂದು ಕಡಿವಾದ ಸಿಟ್ಟಿನಲ್ಲಿ ಹಾಯುಬೇಕಾಗಿದ್ದಿತು.

"ಎರಡು ಹೊತ್ತಿನ ಕೂಳಿನ ಸಲುವಾಗಿ ಅವಳು ಈಗ ತನ್ನ ದೇಹವನ್ನು ವಿಕ್ರಯಿಸುತ್ತಿದ್ದಳು. ಗಿರಣಿಯ ಕತೆಯು ಅಷ್ಟೇ; ಹೊರಗಿನ ಕತೆ ಅಷ್ಟೇ. ಅವಳಿಗೆ ಬೇರೆ ಮಾರ್ಗವೇ ಇರಲಿಲ್ಲ

"ತಂದೆ-ತಾಯಿಗಳನ್ನೂ, ನೆರೆಹೊರೆಯುವರನ್ನೂ ಸಂತಸ ಪಡಿಸಿದ ರೂಪು, ಈಗ ಅವಳಿಗೆ ಉದರಂಭರಣ ಮಾರ್ಗವಾಯಿತು. ಅದನ್ನು ಮಾರಿ, ಜೀವನವನ್ನು ಸಾಗಿಸುತ್ತಿದ್ದಳು.

"ಈ ರೀತಿಯಾದ ನಡೆವಳಿಕೆಯಿಂದ ಜಗತ್ತು ಅವಳನ್ನು ಚರಿತ್ರಹೀನಳೆಂದು ಕರೆಯುತ್ತಿತ್ತು. ಕಾರಣವನ್ನು ಮಾತ್ರ ಜಗತ್ತು ವಿಚಾರಮಾಡುತ್ತಿರಲಿಲ್ಲ. ಅದರ ಗೊಡವೆಗೆ ಅದು ಹೋಗುತ್ತಿರಲಿಲ್ಲ.

"ಉಪಭೋಗಕ್ಕೆ, ಚೆನ್ನಿಯು ಬೇಕು; ಆದರೆ ಇತರ ಉಪಭೋಗ ವಸ್ತುಗಳಂತೆ ಚೆನ್ನಿಗೆ ಮರ್ಯಾದೆಯ ಸ್ಥಾನವಿರಲಿಲ್ಲ. ಅವಳು ಕೂಲಿಯವಳು, ಹಾಗೂ ಕಲುಷಿತ ಜೀವನಳು."

ಈ ವೃತ್ತಾಂತವನ್ನೆಲ್ಲ ಶಾರದೆಯು ಅತ್ಯಂತ ದುಃಖದಿಂದ ನನಗೆ ಹೇಳಿದಳು. ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು. ಆದರೆ ಅಸಂಖ್ಯಾತ ಶಾರದೆಯರು-ನಿಷ್ಠುರ ಶಾರದೆಯರು ಚೆನ್ನಿಯರು-ಜಗತ್ತಿನಲ್ಲಿ ಹಿಂದೆ ಆಗಿ ಹೋದರು; ಇಂದೆಯೂ ಇರುವರು.

೭

ನನ್ನ ಮನಸ್ಸಿನಲ್ಲಿ ತುಮುಲಯುದ್ಧ. ಪರಸ್ಪರ ಸಂಬಂಧವು ಯಾವ ಬಗೆಯಿಂದಲೂ ಗೋಚರವಾಗುತ್ತಿರಲಿಲ್ಲ. ಆಗಾಗ ಶಾರದೆಯ ವರ್ತನೆಯ ಅರ್ಥವೂ ಆಗುತ್ತಿರಲಿಲ್ಲ. ಆಕೆ ಒಂದೊಂದು ಸಾರಿ ಹರ್ಷಿತಳಾಗಿರುವಳು; ಒಂದೊಂದು ಸಾರಿ ಖಿನ್ನ ಮನಸ್ಕಳಾಗಿರುವಳು.

ಹಲವು ವೇಳೆ ಅವಳು ಚೆನ್ನಿಯ ಪಕ್ಷವನ್ನು ಹಿಡಿಯುವಳು; ಇನ್ನಿತರ ವೇಳೆಗಳಲ್ಲಿ ಚೆನ್ನಿಯಂತಹರನ್ನು ದೂರುವಳು.

ಅಂತೂ ಏನೂ ತೋರಲಿಲ್ಲ ನನಗೆ. ಚೆನ್ನಿಯ ವಿಷಯದಲ್ಲಿ ಮುಂದೇನು ಮಾಡಬೇಕೆಂಬುದು ನನಗೆ ಬಗೆಹರಿಯದ ವಿಷಯ ವಾಯಿತು. ಏನನಾದರೂ ಮಾಡಿದರೂ ಕಷ್ಟ; ಮಾಡದಿದ್ದರೂ ಕಷ್ಟ. ಮಧ್ಯೆಮಧ್ಯೆ ಚೆನ್ನಿಯ ಪೂರ್ವಜೀವನ ಹಾಗೂ ರೂಪು ಎಲ್ಲವೂ ಸೇರಿ ನನ್ನನ್ನು ಬಾಧಿಸತೊಡಗಿದುವು.

ಇದರಲ್ಲಿ ಒಂದು ಮುಖ್ಯಾಂಶವು ನನ್ನ ಗಮನಕ್ಕೆ ಬರಲೇ ಇಲ್ಲ! ಚೆನ್ನಿಯ ಹೇಳಿಕೆಯು ಏನು ಇದ್ದಿತೆಂಬುದನ್ನು ನಾನು ದಿನವಾದರೂ ಯೋಚಿಸಲಿಲ್ಲ, ಅವಳನ್ನು ಕೇಳಲಿಲ್ಲ. ಅವಳ ವ್ಯಕ್ತಿತ್ವವನ್ನೇ ಮರೆತು ಬಿಟ್ಟೆ.

೮

ಚೆನ್ನಿಯೇ ಒಂದು ದಿನ ಬಂದು ನನ್ನ ಕೊಠಡಿಯ ಬಾಗಿಲಲ್ಲಿ ನಿಂತಿದ್ದಳು.

ಅವಳನ್ನು ನೋಡಿದೆ; "ಬಾ, ಚೆನ್ನೀ, ಏನು ಬೇಕು? ಕೂತುಕೊ!" ಎಂದೆ. ನಮ್ರಭಾವದಿಂದ ಕೊಠಡಿಯ ಮೂಲೆಯನ್ನು ಸೇರಿ, ಸೀರೆಯನ್ನು ಸರಿಪಡಿಸಿಕೊಂಡು ಆಕೆ ಕುಳಿತುಕೊಂಡಳು. ಒಂದೆರಡು ನಿಮಿಷ ಮಾತನಾಡದಿರಲು, ನಾನು ಎದ್ದು ಹೋಗಿ ಹತ್ತಿರಕ್ಕೆ ಸರಿದು "ಚೆನ್ನೀ, ಏನಾಗಿದೆ?" ಎಂದು ಕೇಳಿದೆ. ಏನೂ ಇಲ್ಲವೆಂದು ತಲೆಯಾಡಿಸಿದಳು.

"ಹಾಗಾದರೆ?"

"ನಿಮ್ಮ ಸಂಗಡ ಮಾತನಾಡಬೇಕೆಂದು ಬಂದೆ ರಾಯರೇ!"

"ಅಮ್ಮನವರನ್ನು ಕೇಳು, ಏನಾದರೂ ಬೇಕಾದರೆ!"

ಸ್ವಲ್ಪ ಸಂಕೋಚದಿಂದ ನುಡಿದಳು! "ಇಲ್ಲರಿ, ನಿಮ್ಮೊಂದಿಗೇ ಮಾತನಾಡಬೇಕು!"

ಏನೋ ಗೂಢಾರ್ಥವಿರಬಹುದೆಂದು "ಅಂತಹದೇನು ಚೆನ್ನಿ?" ಎಂದು ಕೇಳಿದೆ.

"ನಾನು ಸಂಜೆಗೆ ಮನೆಗೆ ಹೋಗುತ್ತೇನೆ" ಎಂದು ಸಣ್ಣ ದನಿಯಲ್ಲಿ ಹೇಳಿದಳು.

ನನಗೆ ತಲೆಯ ಮೇಲೆ ಆಕಾಶ ಕಳಚಿಕೊಂಡು ಬಿದ್ದಂತೆ ಆಯಿತು.

"ಯಾಕೆ?" ಎಂದು ಕೇಳಿದೆ.

"ನಾನು ಇಲ್ಲಿ ಇರುವುದು ಚೆನ್ನಾಗಿಲ್ಲ!"

"ಅಂದರೆ?"

"ಜನರು ನಿಮ್ಮನ್ನು ಬೈಯುತ್ತಾರೆ. ಅಪ್ಪನವರೂ ಬೈಯುತ್ತಾರೆ; ಅದರಿಂದ ನಾನು ಮನೆಗೆ ಹೋಗುತ್ತೇನೆ!"

ನನಗೆ ಬಹಳ ಸಂಕಟವಾಯಿತು.

"ನಿನಗೆ ಬುದ್ಧಿಯಿಲ್ಲ ಚೆನ್ನೀ! ಜನಕ್ಕೇನು! ಏನನ್ನಾದರೂ ಅನ್ನುತ್ತಾರೆ.! ನೀನು ಮನೆಗೆ ಹೋಗಬೇಡ!"

"ಇಲ್ಲ! ರಾಯರೇ, ನಾನು ಇಲ್ಲ ಇರುವುದಿಲ್ಲ! ನೀವೂ ತರುಣರು, ನಾನು-ಕೆಟ್ಟವಳು ತಮ್ಮ ಹೆಸರು ಕೆಡಬಾರದು."

ಅವಳ ಸೂಕ್ಷ್ಮದೃಷ್ಟಿಯನ್ನೂ, ಔದಾರ್ಯವನ್ನೂ, ಅಂತಃಕರಣವನ್ನೂ ಕಂಡು ಬೆರಗಾದೆ. ಹತ್ತಿರಕ್ಕೆ ಹೋಗಿ ಮೈಮೇಲೆ ಕೈಯಿಟ್ಟು "ಹೀಗೆಲ್ಲ ಆಡಬಾರದು; ನಿನಗೆ ಬುದ್ಧಿಯಿಲ್ಲ!" ಎಂದೆ.

"ರಾಯರಿಗೆ ತಿಳಿಯುವುದಿಲ್ಲ, ನಾನು ಸಂಜೆಗೆ ಮನೆಗೆ ಹೋಗುತ್ತೇನೆ. ಖಂಡಿತ!"

"ಹೋಗಿ ಏನು ಮಾಡುತ್ತೀಯೆ?"

"ಕೆಲಸ ಮಾಡುತ್ತೇನೆ" ಎಂದು ನುಡಿದು ತಲೆತಗ್ಗಿಸಿದಳು.

ನನಗೆ ಅರ್ಥವಾಯಿತು. ಪುನಃ ಅವಳೇ "ಮೇಸ್ತ್ರೀ ಬಂದಿದ್ದ!" ಎಂದು ಹೇಳಿದಳು.

ನನಗೆ ಎಲ್ಲವೂ ಹೊಳಿಯಿತು. ನನ್ನ ಯಶಸ್ಸಿಗಾಗಿ ಪುನಃ ಅವಳು ಜೀವನವು ಮಣ್ಣುಗೂಡುವುದೆಂದು. ಅವಳ ಪುಟ್ಟ ಹೃದಯದ ವಿಸ್ತಾರವು ಅಷ್ಟೆಂದು ನಾನು ಭಾವಿಸಿರಲಿಲ್ಲ. ನಾನು ಎಷ್ಟು ಹೇಳಿದರೂ ಕೇಳದೆ, ಶಾರದೆಯ ಮಾತನ್ನೂ ಕೇಳದೆ, ಚೆನ್ನಿಯು ಕೊನೆಗೆ ತನ್ನ ಮನೆಗೆ ಹೊರಟೇ ಹೋದಳು.

೬

ಚೆನ್ನಿಯು ಪುನಃ ಮಿಲ್ಲಿನ ಕೆಲಸಕ್ಕೆ ಸೇರಿದಳೆಂದು ನನಗೆ ಸುದ್ದಿ ಮುಟ್ಟಿತು. ಅದರಿಂದ ಅವಳ ಸ್ನೇಹಿತರಿಗೆ ಬಹಳ ಹರ್ಷವಾಯಿತೆಂದು ತಿಳಿಯಿತು.

ನನಗೆ ಮಾತ್ರ ಯಮಪುರಿಯ ಯಾತನೆಯುಂಟಾಯಿತು. ಅವಳನ್ನು ನೋಡಬೇಕೆಂದು ನನಗೆ ಆಶೆ. ಸಂಜೆ, ಗಿರಣಿಯು ಬಿಡುವ ವೇಳೆಯಲ್ಲಿ ರಸ್ತೆಯ ಬಳಿ ಇದ್ದೆ. ಅವಳು ಗುಂಪಿನೊಡನೆ ಬರುತ್ತಿದ್ದಳು. ಅಲ್ಲಲ್ಲಿ ಒಬ್ಬೊಬ್ಬ ಗಂಡಸರು ನಿಂತಿದ್ದರು. ನನ್ನನ್ನು ನೋಡಿ ಚೆನ್ನಿ ತಲೆಯನ್ನು ಬಾಗಿಸಿದಳು; ಒಡನೆಯೇ ಏನನ್ನೋ ನೋಡಿ ನಕ್ಕವಳಂತೆ ನಕ್ಕಳು.

ಪುನಃ ಅವಳು ಮುಂದೆ; ನಾನು ಹಿಂದೆ.

ನಾನು ಬಹುವಾಗಿ ಯತ್ನ ಮಾಡಿದೆ. ಅವಳು ಮನೆಗೆ ಬರಲು ಒಪ್ಪಲಿಲ್ಲ. ಒಂದೇ ಮನೆಯಲ್ಲಿ ಅವಳಿಗಾವುದೂ ಸ್ಥಳವಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟಳು.

ಆಗ ಒಂದೇ ಬಾರಿ, ಎಲ್ಲವನ್ನೂ ಮರೆತು, ಅವಳನ್ನು—ಒಂದು ಬಾರಿ—ಆಲಿಂಗಿಸಿ ಮುತ್ತಿಟ್ಟೆ. ಅವಳೂ ಬೇಡವೆನ್ನಲಿಲ್ಲ. ನನ್ನ ಭಾವನೆಯಲ್ಲಿ ಅದು ತಪ್ಪಲ್ಲ.

ಉಚ್ಚ—ನೀಚಗಳುಂಟೆಂದು ಹೇಳುವರು. ಉಚ್ಚವಾವುದು? ನೀಚವಾವುದು?

ಉಚ್ಚ— ನೀಚಗಳೆಂದು ವಿಂಗಡಿಸುವವರು ಯಾರು? ನೀವೇ, ಸಮಾಜವೇ, ಇಲ್ಲವೆ ನಾನೇ? ಆತ್ಮಗಳು ಸೇರಿರಲು ಬಾಹ್ಯದ ಗೊಡವೆ ಯೇಕೆ? ಅನಿಷ್ಟವಿದ್ದರೂ ಉಚ್ಚಗುಣಗಳಿದ್ದರೆ ಅದು ಪೂಜ್ಯವಾದುದು.

೧೦

ಒಂದು ದಿನ ಬೀದಿಯಲ್ಲಿ, ಗಿರಣಿಬಿಡುವ ವೇಳೆಯಲ್ಲಿ ಬರುತ್ತಿದ್ದಾಗ, ಎಲ್ಲಕ್ಕೂ ಕಾರಣರಾದ ನನ್ನ ಸ್ನೇಹಿತರು, ಚೆನ್ನಿ ಸಡಗರದಿಂದ ಬರುತ್ತಿದ್ದುದನ್ನು ನೋಡಿ ನುಡಿದರು.

"ಏನು ರಾಯರೆ, ಬೇಟೆ ಜೇಜಾರಾಯಿತೆ?" ಎಂದು ಪ್ರಶ್ನೆ ಮಾಡಿದರು.

ನಾನು ಅವರಿಗೆ ಉತ್ತರವನ್ನು ಕೊಡಲಿಲ್ಲ. ಮನಸ್ಸು ಚೆನ್ನಿಯ ಕಡೆಗೆ ಹೋಗಿತ್ತು. ವಿಚಾರಶೂನ್ಯನಾಗಿ ಗಗನವನ್ನು ನೋಡಿದೆ. ಪುಟ್ಟ ನಕ್ಷತ್ರವೊಂದು ಅನಂತಾಕಾಶದಲ್ಲಿ ಏಕಾಕಿಯಾಗಿ ಮಿನುಗುತ್ತಿದ್ದಿತು.

ಅದನ್ನು ಒಂದು ಬಾರಿ ನೋಡಿದೆ; ಚೆನ್ನಿಯನ್ನು ಒಂದುಬಾರಿ ನೋಡಿದೆ. ಒಡನೆಯೇ—ಕವಿಯ ಈ ಪಂಕ್ತಿಗಳು ನೆನಪಿಗೆ ಬಂದುವು;

"ಅನ್ನೋ ಜನರು ಏನು
ಅಂತಃನ ಇರತಾರ,
ಹೊರತಾದೆನೀ ಜಗಕ"

ಬರು-ಬರುತ್ತ ಪೂಜೆಯನ್ನು ಹೊಂದುತ್ತ ಪೂಜ್ಯ ವಸ್ತುವು ಶೂನ್ಯವಾಗಿ, ಮಲಿನ ಜಗತ್ತಿನಲ್ಲಿ ಕಣ್ಣಿಗೆ ಕಾಣದಂತಾಯಿತು.

# ಪಿತೃವಿಹೀನ + + +

೧

ಹೊರಗೆ ಯಾರೋ ಬಾಗಿಲು ತಟ್ಟಿದ ಶಬ್ದ.

ಆದರೆ ಏಳಲು ಮನಸ್ಸಿಲ್ಲ. ಓದುತ್ತಾ ಕುಳಿತಿದ್ದವನು ಹಾಗೆಯೇ ಮುಂದೆ ಓದತೊಡಗಿದೆ. ಸ್ವಾರಸ್ಯವಾದ ಪುಸ್ತಕ, ಗಹನವಾದ ವಿಚಾರ ತರಂಗಗಳು. ಬಿಟ್ಟು ಏಳಲು ಮನಸ್ಸಿಲ್ಲ.

ಇನ್ನೂ ಒಂದು ಆಶೆ. ಮನೆಯಲ್ಲಿ ಯಾರೂ ಇಲ್ಲವೆಂದು ಅರಿವಾಗಿ ಬಂದಿದ್ದವರು ಹಾಗೆಯೇ ಹಿಂದಿರುಗಬಹುದು. ಆದುದರಿಂದ ಎದ್ದು ಬಾಗಿಲು ತೆಗೆಯದೆ ಸುಮ್ಮನಿದ್ದೆ. ಹೂಂ, ಈ ಹಂಚಿಕೆಯಿಂದ ನನಗೆ ಪ್ರಯೋಜನವಾಗಲಿಲ್ಲ. ಬಾಗಿಲು ತಟ್ಟುತ್ತಿದ್ದವರು ನನಗಿಂತಲೂ ಮೊಂಡರು. ಬಾಗಿಲನ್ನು ತೆಗೆಸಿಯೇ ಬಿಡಬೇಕೆಂದು ಅವರ ಉದ್ದೇಶವಿದ್ದಂತೆ ನನಗೆ ತೋರಿತು. ಏಕೆಂದರೆ ಸ್ವಲ್ಪಸ್ವಲ್ಪ ಅವಕಾಶವಿತ್ತು, ಬಾಗಿಲನ್ನು ಕಟ್ಟುತ್ತಲೇ ಇದ್ದರು.

ಕೊನೆಗೆ ನಿರ್ವಾಹವಿಲ್ಲದೆ ಎದ್ದು ಗೊಗ್ಗರ ದನಿಯಿಂದ "ಯಾರದು" ಎಂದು ಕೂಗಿದೆ.

ಪ್ರಶ್ನೆಗೆ ಉತ್ತರ ಬಂದಿತು. "ನಾನು"

ಕಂಠವು ಪರಿಚಯದವರದು. ಅದರಲ್ಲಿ ಹೆಂಗಸರದು. ಇದರಿಂದ ಶಾರದೆಯ ಪರಿಚಯದವರಿರಬಹುದೆಂದು ತರ್ಕಿಸಿ, "ಹೆಂಗಸರು ಮನೆಯಲ್ಲಿ ಯಾರೂ ಇಲ್ಲ" ಎಂದು ಉತ್ತರಗೊಟ್ಟೆ. ಆದರೂ ಮನಸ್ಸಿನಲ್ಲಿ ಒಂದು ಸಣ್ಣ ಆಶೆ. ಬಂದಿದ್ದವರು ಇನ್ನೊಂದು ಸಾರಿ ಕೂಗಿದರೆ, ಹೋಗಿ ನೋಡಿ ಯಾರೆಂದು ತಿಳಿದುಕೊಳ್ಳಬಹುದೆಂದು. ಮರುಕ್ಷಣದಲ್ಲಿಯೇ "ಪರಸ್ತ್ರೀ ನೋಡಲು ಇಷ್ಟು ಏಕೆ ಕಾತರ" ವೆಂದು ನನ್ನಲ್ಲಿಯೇ ಆಕ್ಷೇಪಿಸಿ, ಪುನಃ "ಮನೆಯಲ್ಲಿ ಯಾರೂ ಇಲ್ಲ" ಎಂದು ಹೇಳಿದೆ.

ಹೊರಗಿನಿಂದ ಪುನಃ ಕೇಳಬಂದಿತು. “ಬಾಗಿಲು ರಾಯರೆ,” ಕಂಠದಿಂದ ಪರಿಚಯುವಾಯಿತು. ತಟ್ಟನೆ ಎದ್ದು ಹೋಗಿ ಬಾಗಿಲು ತೆಗೆದೆ. ಇಡೀ ಜಗತ್ತಿನಲ್ಲಿ ಆ ಸ್ವರದ ನೆನಪು ನನಗೆ ಮಾಸುವಂತೆ ಇಲ್ಲ.

ಬಂದಿದ್ದವಳು ಬೇರೆ ಯಾರೂ ಇಲ್ಲ. ನನ್ನ ಹಳೆಯ ಪರಿಚಯ ದವಳಾದ ಚೆನ್ನಿ. ಚೆನ್ನಿಯ ದನಿಯನ್ನು ಎಂದೂ ಮರೆಯಲಾರೆ.

ಬಾಗಿಲನ್ನು ತೆಗೆಯುತ್ತಿದ್ದಂತೆಯೇ “ಬಾ, ಚೆನ್ನಿ, ಮೊದಲೇ ಹೆಸರು ಹೇಳಲಿಲ್ಲವೇಕೆ?” ಎಂದು ಕೇಳಿದೆ.

ಚೆನ್ನಿಯು ಉತ್ತರಗೊಡಲಿಲ್ಲ. ತೆಗೆಯುತ್ತಿದ್ದ ಬಾಗಿಲನ್ನು ತಳ್ಳಿ ಒಳಕ್ಕೆ ಹೆಜ್ಜೆಯಿಟ್ಟಳು.

ಒಳಗೆ ಕಾಲಿಟ್ಟವಳು ಮೊದಲಿನ ಚೆನ್ನಿಯಲ್ಲ. ಅವಳು ಈಗ ಒಂದು ಮಗುವಿನ ತಾಯಿ. ಕೊಂಕುಳಲ್ಲ ಮಗುವಿದ್ದುದರಿಂದ ಅವಳು ಹೇಳದೆಯೇ ನನಗೆ ಮನದಟ್ಟಾಯಿತು.

“ಇದೇನು; ಚೆನ್ನಿ?” ಎಂದು ಮಗುವಿನ ಕಡೆ ನೋಡಿದೆ.

ಅವಳು ನನ್ನ ಪ್ರಶ್ನೆಯ ಅರ್ಥವನ್ನು ಗ್ರಹಿಸಿದಳು. ಹಾಗೆಯೇ ಸರಕ್ಕನೆ ಉತ್ತರಗೊಟ್ಟಳು.

“ಹೌದು, ರಾಯರೆ, ನನ್ನ ಮಗುವಿಗೆ ಆರು ತಿಂಗಳು.”

ಮನಸ್ಸಿನಲ್ಲಿ ವಿಷಯವು ಮೂಡಿದ್ದರೂ ಈ ಜವಾಬಿನಿಂದ ಅವಳನ್ನೂ, ಮಗುವನ್ನೂ, ನೋಡಿದೆ. ಅಪಾದ ಮಸ್ತಕವೂ ನೆಟ್ಟ ನೋಟದಿಂದ ನೋಡಿದೆ. ಅವಳೂ ನನ್ನ ನೋಟದಿಂದ ಅಲುಗಾಡಲಿಲ್ಲ. ಮಗು ಮಾತ್ರ ಒಂದು ಸಾರಿ ಇನ್ನೂ ಹಲ್ಲು ಹುಟ್ಟದ ಪುಟ್ಟಾದ ಬಾಯನ್ನು ಬಿಟ್ಟು ಕೇಕೆ ಹಾಕಿತು.

೨

ಚೆನ್ನಿಯನ್ನು ಕಾಲಿನಿಂದ ತಲೆಯ ವರೆಗೂ ನೋಡಿದೆನೆಂದು ಹೇಳಿರುತ್ತೇನೆ. ಆದರೆ ಚೆನ್ನಿಯು ಮೊದಲಿನ ಚೆನ್ನಿಯಲ್ಲ. ಮಾರ್ಪಾ

ಡಾಗಿತ್ತು. ನೋಡುವುದಕ್ಕೆ ಮೊದಲಿನ ಚೆನ್ನಿ. ರೂಪಿನಲ್ಲಿ ಅದೇ ರೂಪು. ಅದೇ ಮೈಬಣ್ಣ. ಅದೇ ಚಂಚಲವಾದ, ಚಿತ್ತಹಾರಕವಾದ ಗುಂಗುರುಗಳು. ಹೃದಯದಲ್ಲಿ ಒಂದು ಕ್ಷಣ ನಿಂತು ಮಾಯವಾಗುತ್ತಿದ್ದ ಕಿರುನಗೆ ಒಂದಲ್ಲ ಹಲವುಸಾರಿ ಮುತ್ತಿಟ್ಟು ತೃಪ್ತಿಪಡೆಯಬೇಕೆಂದು ಹುರಿದುಂಬಿಸುವ ಕೆಂದುಟಿಗಳು. ಅದೇ ಕೆಂಪಾದ, ಸ್ವಲ್ಪ ಬಾಡಿದ ಹೂ. ಯಾವ ವ್ಯತ್ಯಾಸವೂ ಇಲ್ಲ.

ಆದರೆ ಯಾವುದೋ ಒಂದು ಮಹತ್ತರವಾದ, ಗಂಭೀರವಾದ ಮನಮೋಹಕವಾದ ಬದಲಾವಣೆಯು ಅವಳಲ್ಲಿ ಆಗಿ ಹೋಗಿತ್ತು. ಅದನ್ನು ಇಂತಹದೆಂದು ನಿರ್ದಿಷ್ಟವಾಗಿ ಹೇಳಲು, ನಿರ್ಣಯಿಸಲು ನನ್ನಿಂದ ಆಗಲಿಲ್ಲ.

ಇಷ್ಟೆಲ್ಲವೂ ಮಿಂಚಿನಂತೆ ಮನಸ್ಸಿನಲ್ಲಿ ಮೂಡಿದವು. ಪುನಃ ಅವಳಿಂದ ನೋಟವನ್ನು ಹೊರಳಿಸಿ, ಸೊಂಟದಲ್ಲಿದ್ದ ಮಗುವನ್ನು ನೋಡಿದೆ. ಅದರಲ್ಲಿ ಯಾವ ಬಗೆಯ ವಿಶೇಷತೆಯನ್ನೂ ಕಾಣಲಿಲ್ಲ. ನಿತ್ಯವೂ ಅಂತಹ ಮಕ್ಕಳನ್ನು ಬಹುವಾಗಿ ನೋಡಿದ್ದೆ.

ಏನೇ ಆಗಲಿ, ತಾಯಿ, ಮಗುವನ್ನು ನೋಡಿ, ಆಗಿದ್ದ ಬದಲಾವಣೆಯು ಗೋಚರವಾಯಿತು. ಅದರ ಸಂಗಡಲೇ ಒಂದು ಭಾವನೆಯು ಜನಿಸಿತು ಚೆನ್ನಿಯು ಸುಂದರಳು; ಮೊದಲು ಅವಳು ಅಪೇಕ್ಷಿತ್ನ ವಸ್ತು. ಈಗ ಅದಕ್ಕೆ ನೂರ್ಮಡಿಯಾಗಿ ನನಗೆ ಬೇಕಾದ ವಸ್ತು.

ಈ ವಿಚಾರಗಳಲ್ಲಿ ನಾನು ಮುಳುಗಿ ಹೋದೆ. ಯಾವುದನ್ನೂ ಬಾಯಿಂದ ಹೇಳಲಿಲ್ಲ. ಕರ್ತವ್ಯಮೂಢನಂತೆ ಬಾಗಿಲನ್ನು ಹಾಕಿ, ಕೊಟ್ಟಿಯಲ್ಲಿ ಬಂದು ಕುಳಿತೆ. ಚೆನ್ನಿಯು ಮಾತನಾಡದೆ ಬಂದು ಅಲ್ಲಿಯೇ ಕುಳಿತುಕೊಂಡಳು.

ನಾನು ಬಾಗಿಲು ಹಾಕಿದುದನ್ನು ಕಂಡರೂ ನನ್ನನ್ನು ಪ್ರಶ್ನೆ ಮಾಡಲಿಲ್ಲ. ಶಾರದೆಯು ಎಲ್ಲಿಂದು ವಿಚಾರಿಸಲಿಲ್ಲ.

ಬಂದು ಕುಳಿತವರು ಸ್ವಲ್ಪ ಹೊತ್ತು ಸುಮ್ಮನಿದ್ದೆವು. ಬಳಿಕ ನಾನು "ಮನೆಯಲ್ಲಿ ಯಾರೂ ಇಲ್ಲ, ಚೆನ್ನಿ. ಮಗುವಿಗೆ ಹಾಲುಗೀಲು ಬೇಕಾದರೆ— ".

ಅವಳು ನನ್ನ ಮಾತನ್ನು ಪೂರ್ತಿಮಾಡಗೊಡಲಿಲ್ಲ. "ಬೇಕಿಲ್ಲ ರಾಯರೆ, ಮಗು ಹಾಲು ಕುಡಿದಿದೆ. ಬೇಕಾದರೆ ಹಾಲು ಇದೆ" ಎಂದು ತನ್ನ ಉಬ್ಬಿದ ಎದೆಯನ್ನು ಸೂಕ್ಷ್ಮವಾಗಿ ತೋರಿಸಿದಳು.

ಹಾಗೆ ತೋರಿದ ಸ್ಥಳವನ್ನು ಕಣ್ಣತುಂಬ ನೋಡಿದೆ, ನಾಚಿಕೆ ಇರಲಿಲ್ಲ. ಸ್ತನಗಳು ತಾಯ್ತನದ ಭಾರದಿಂದ ತುಂಬಿದ್ದವು.

ಶಾರದೆಯು ಮನೆಯಲ್ಲಿ ಇರಲಿಲ್ಲ. ಕೇವಲ ಮನೆಯಲ್ಲಿ ಇದ್ದವರು ನಾವಿಬ್ಬರು. ಅದರಲ್ಲಿ ಒಬ್ಬನು ಗಂಡಸು, ಇನ್ನೊಬ್ಬಳು ಹೆಂಗಸು. ಸಂಗಡ ಹಾಲುಕುಡಿಯುವ ಹಸುಳೆ.

ಇಂತಹ ಸಮಯಗಳಲ್ಲಿ ಸಮಾಜ ಕಟ್ಟುಗಳ ಅಂಜಿಕೆಯಿಂದ ಬರುವ ಹಾವಭಾವಗಳು ಇರುವುದಿಲ್ಲ ಎಂದು ನನ್ನ ನಂಬುಗೆ. ಅದರ ಕೃತ್ರಿಮದಿಂದ ಬಂಧನಗಳು ಹರಿದೊಗೆದು ಹೋಗುವವು. ಇರುವ ಭಾವನೆಗಳಾದರೂ ಇಷ್ಟೆ. ಮಗುವಿನ ಪೋಷಕಳಾದ ಸ್ತ್ರೀ ಸಂಸಾರದ ಸ್ತಂಭಗಳಲ್ಲಿ ಇಹುದೊಂದು. ಇನ್ನೊಂದು ಮಾತೃತ್ವಕ್ಕೆ ಸಂಸಾರಕ್ಕೆ ಬೇಕಿರುವ ಬೇರೊಂದು ಭುಜವಾದ ಪುರುಷ. ಈ ಸ್ತ್ರೀ- ಪುರುಷ ಭಾವನೆಗಳು ಅವರವರ ಸಂಬಂಧಕ್ಕೆ ಅನುಸರಿಸಿ ಬರುವುದು. ಆಗ ಬೇರೆ ಯಾವ ವಿಷಯ-ಕಾಮವಾಸನೆಯ ಭಾವನೆಯು ಬರುವುದಿಲ್ಲ. ಬಂದರೂ ಸಹ ತಾಯಿತನದ ಮಹತ್ವದಲ್ಲಿ ಅಡಗಿ ಹೋಗುವುದು. ಮನಸ್ಸು ಸುಮ್ಮನಿರಲಿಲ್ಲ. ಚೆನ್ನಿಯನ್ನು ಕೇಳಿದೆ. "ಮದುವೆ ಯಾವಾಗ ಆಯಿತು?"

ಚೆನ್ನಿಯು ಮೆಲ್ಲಗೆ ನಕ್ಕಳು. "ಬಹುದಿನ ಆಯಿತು. ರಾಯರೆ, ಮಗುಗೆ— "

ವಾಕ್ಯವನ್ನು ಅವಳು ಪೂರಯಿಸಲಿಲ್ಲ. ಅರ್ಧಕ್ಕೆ ನಿಲ್ಲಿಸಿಬಿಟ್ಟಳು. ನನಗೆ ತಿಳಿಯಲಿಲ್ಲ. ಪುನಃ ಪ್ರಶ್ನೆ ಮಾಡಿದೆ.

"ಅಂಗಸರೆ"

ಪ್ರಶ್ನೆಗೆ ಚೆನ್ನಿಯು ಉತ್ತರಗೊಟ್ಟಳು. ಆದರೆ ಅದು ಒಂದು ವಾಕ್ಯದಿಂದ ಆಗಲಿಲ್ಲ. ಸುಮಾರು ಅರ್ಧ ಗಂಟೆ ಹಿಡಿಯಿತು. ಕೇಳುತ್ತಾ ಕುಳಿತೆ. ಶಾರದೆಯು ಮನೆಯಲ್ಲಿ ಇಲ್ಲದೆ ಇದ್ದುದು ಬಹಳ ಒಳ್ಳೆಯದಾಯಿತು.

೩

"ರಾಯರೆ, ನಿಮ್ಮ ಮನೆಬಿಟ್ಟು ಹೋದವಳು ಪುನಃ ಮಿಲ್ಲನಲ್ಲಿ ಕೆಲಸಕ್ಕೆ ಸೇರಿದೆ. ಕೆಲಸಕ್ಕೆ ಸೇರಿದ ನಂತರ—" ದನಿಯು ಸ್ವಲ್ಪ ಗಡುಸಾಯಿತು—" ನನ್ನ ಜೀವನಕ್ರಮದಲ್ಲಿ ಕಾಲಿಟ್ಟೆ. ನಿಮಗೆ ತಿಳಿದೆ ಇದೆ. ನನ್ನಂತಹರ ಪಾಡು ಏನೆಂದು. ಹಗಲು ಕೆಲಸ, ಸಂಜೆಯು ಕೆಲಸ ರಾತ್ರಿಯೂ ಕೆಲಸ. ಅಂತೂ ಜೀವಕ್ಕೆ ಬೇಕಾದ ಪುರಸತ್ತಿಲ್ಲ.—ಹೀಗೆ ಮಾಡದಿದ್ದರೆ ಹೊಟ್ಟೆಗಿಲ್ಲದೆ ಹೋಗುತ್ತದೆ. ನೋಡಿ ಹೊಟ್ಟೆಗೋಸ್ಕರ ದುಡಿಯಬೇಕು. ಅಲ್ಲದೆ ಹೆಣ್ಣಾಗಿ ಹುಟ್ಟಿದ್ದಕ್ಕೆ, ಹೆಣ್ಣಾಗಿ, ಸಿಕ್ಕಿದವರ ಸಂಗಡ ಕೂಡಬೇಕು. ಹೆಣ್ಣಿನ ಜೀವನವೇ ಕಷ್ಟ ಅದರಲ್ಲಿಯೂ ನನ್ನಂತಹ ರೂಪುಳ್ಳ ಕೂಲಿ ಹೆಣ್ಣಿನ ಪಾಡು ಇನ್ನೂ ಕಷ್ಟ ಆದರೆ ಬೇರೆ ಉಪಾಯವಿರಲಿಲ್ಲ.

"ಕೆಲವು ತಿಂಗಳು ಹೀಗೆ ಕಳೆದು ಹೋದವು. ಒಂದು ದಿನ ಹಳ್ಳಿಗೆ ಹೋಗಿದ್ದೆ. ಅಲ್ಲಿ ಹಳ್ಳಿಯಲ್ಲಿ ಒಬ್ಬ ಗೌಡ ನೋಡಿ, ಮದುವೆ ವಿಚಾರ ತೆಗೆದ ನಾನೂ ಒಪ್ಪಿಕೊಂಡೆ."

"ಮನಸ್ಸಿನಲ್ಲಿ, ನಾನು ಬಹಳ ಕಷ್ಟಪಡುತ್ತಿದ್ದ ದಿನಗಳಿಂದಲೂ ನಿಮ್ಮ ಮನೆಯಲ್ಲಿ ಇದ್ದಾಗಲೂ, ಒಂದು ಆಶೆಯಿತ್ತು. ಆ ಆಶೆ ಎಲ್ಲರಿಗೂ ಇರುವುದು. ಅದರಲ್ಲಿ ಹೆಂಗಸರಿಗೆ ಆ ಆಶೆ ಇದ್ದೇ ಇರುತ್ತೆ. ನನ್ನದೇ ಒಂದು ಮಗು ಇದ್ದರೆ, ಎಷ್ಟೇ ಕಷ್ಟ ಇರಲಿ, ಸಹಿಸಬಹುದು. ದಿನ ದಬ್ಬಬಹುದು.

"ಮದುವೆಗೆ ನಾನು ಒಪ್ಪಿದುದು ಎರಡು ಕಾರಣಗಳಿಂದ.

ಒಂದು ಮಿಲ್ಲಿನ ಹಾಳು ಜೀವನ ತಪ್ಪುತ್ತಿತ್ತು. ಇನ್ನೊಂದು ನನ್ನದೂ ಒಂದು ಮನೆ, ಒಂದು ಬಾಗಿಲು, ಒಂದು ಮಗು ಮುಂತಾದುವು ಸಿಕ್ಕುತ್ತಿತ್ತು. ಆಗ, ನೋಡಿ ರಾಯರೆ ಜೀವಕ್ಕೆ ಒಂದು ಆಶ್ರಯ. ಒಂದು ಕಟ್ಟೆ ಹಾಕುವುದಕ್ಕೆ ಬೇಕಾದ ವಸ್ತು ಇರುತ್ತದೆ.

“ಅಂತೂ ಮದುವೆಗೆ ಒಪ್ಪಿದೆ. ಗೌಡನ ಸಂಗಡ ಮದುವೆ ಆಗಿ ಹೋಯಿತು”

“ಪಾಪ, ಅವನು ಹಳ್ಳಿಯವ, ಅವನಿಗೆ ಏನೂ ತಿಳಿಯದು. ನನ್ನನ್ನು ಬಹಳ ಒಳ್ಳೆಯವಳು ಎಂದು ತಿಳಿದುಕೊಂಡು ದಿನ ಸಾಗಿಸುತ್ತಿದ್ದ ನಮ್ಮ ಸಂಸಾರ ಚೆನ್ನಾಗಿ ಸಾಗಿತ್ತು. “ನಾನೂ ಹಿಂದಿನ ಕಷ್ಟಗಳನ್ನು ಮರೆಯುತ್ತ ಬಂದಿದ್ದೆ. ಸುಖಗಳನ್ನು ನೆನೆಯುತ್ತ ಇದ್ದೆ. ನಿಮ್ಮ ನೆನಪು ಮಾತ್ರ ಹಾಗೆ ಇತ್ತು. ಏನು ಮಾಡಿದರೂ ಹೋಗಲೊಲ್ಲದು.!”

“ಹೀಗೆ ನೋಡಿ, ರಾಯರೇ, ಆರು ತಿಂಗಳು ದಿನ ಕಳೆದು ಹೋದವು. ಒಂದು ದಿನ ಮೇಸ್ತ್ರಿ ಮನೆಗೆ ಬಂದ.”

ಅವಳು ಮೇಸ್ತ್ರಿ ಮನೆಗೆ ಬಂದು ದರ್ಶನವನ್ನು ಕೊಟ್ಟ ಎಂದು ಹೇಳಿದ ತಕ್ಷಣವೆ ಪುನಃ ಅವಳ ಪಥದಲ್ಲಿ ಸರ್ಪ ಸಂಚಾರವಾಯಿತೆಂದು ನಾನು ಯೋಚಿಸಿದೆ. ಆದರೂ ಸಹ “ಆ ಮೇಲೆ?” ಎಂದು ಪ್ರಶ್ನೆ ಹಾಕಿದೆ. ಅವಳು ತಿರುಗಿ ಹೇಳತೊಡಗಿದಳು.

“ರಾಯರೆ, ಅವನನ್ನು ನೋಡಿದ ಕೂಡಲೆ ನನ್ನ ಎದೆ ಒಡೆದು ಹೋಯಿತು. ಆದರೂ ಹೊರಗೆ ತೋರಿಸಲಿಲ್ಲ. ಹಾಗೆಯೇ ಮಾತನಾಡುತ್ತಾ ಕುಳಿತಿದ್ದೆವು. ಸ್ವಲ್ಪ ಹೊತ್ತಿನ ಮೇಲೆ ಗೌಡರು ಮನೆಗೆ ಬಂದರು. ಮಾನವುಳಿಸಿಕೊಳ್ಳುವುದಕ್ಕಾಗಿ ಮೇಸ್ತ್ರಿ ನನ್ನ ಬಹಳ ಹತ್ತಿರದ ನೆಂಟ ಎಂದು ಸುಳ್ಳು ಹೇಳಿದೆ. ಗೌಡರು ನಂಬಿದರು.

“ಇಲ್ಲ, ನಾನು ಸುಳ್ಳು ಹೇಳಲಿಲ್ಲ. ಮೇಸ್ತ್ರಿ ನನಗೆ ಬಹಳ ಸಮೀಪದ ಬಂಧು. ನನ್ನನ್ನು ದಾರಿಗೆ ತಂದವನು ಅವನೇ—ಅವನಿಗಿಂತಲೂ ನನಗೆ ಹತ್ತಿರದವರು ಯಾರು ಇದ್ದಾರೆ? ನೀವೆ ಹೇಳಿ?”

ಅವಳ ಪ್ರಶ್ನೆಗೆ ನಾನು ಉತ್ತರ ಕೊಡಲಾರೆ. ನಿಜವಾಗಿಯು ಮೇಸ್ತ್ರಿ ಬಹಳ ಸಮೀಪದ ನೆಂಟ. ಏನೂ ಅರಿಯದ ಬಡಹುಡು ಯನ್ನು ವೇಶ್ಯಾ ಜೀವನಕ್ಕೆ - ಇಲ್ಲ–ರೂಪಜೀವಿಯಾಗಿ ಮಾಡಿ ಪುಣ್ಯಾತ್ಮನು ಅವನು. ನಿಜ ಅಪನಿಗಿಂತಲೂ ಸಂಬಂಧಿಗಳು ಯಾರು ಚೆನ್ನಿಗೆ ಇಲ್ಲ.

ನಾನು ಉತ್ತರ ಕೊಡದೆ ಇರುವುದನ್ನು ನೋಡಿ ಚೆನ್ನಿಯ ಮುಂದೆ ಸಾಗಿದಳು.

" ಮೇಸ್ತ್ರಿ, ಒಂದೆರಡು ದಿನ ನಮ್ಮಲ್ಲಿಯೇ ಉಳಿದ. ನಮ ಗೌಡರ ವಿಶ್ವಾಸವಂತೂ ಅವನ ಮೇಲೆ ಬೆಳೆಯಿತು. ನೋಡಿ ಮೇಸ್ತ್ರಿ ಬಹಳ ಬುದ್ಧಿವಂತ. "

" ಗೌಡರು ಮನೆಯಲ್ಲಿ ಇಲ್ಲದೆ ವೇಳೆಯಲ್ಲಿ ನನಗೆ ಏನೇನೊ ಹೇಳಿದ. ಮಿಲ್ಲಿಗೆ ಕೆಲಸಕ್ಕೆ ಬಾರೆಂದು ಉಪದೇಶ ಮಾಡಿದ. ನಾನು ಒಪ್ಪಲಿಲ್ಲ.

" ಕಾರಣ ಬಾಯಿ ಬಿಟ್ಟು ಹೇಳಿದ. ನನ್ನ ರೂಪಿನ ದೇಹ ಅವಶ್ಯಕತೆಯು ಅವನಿಗೆ ಇತ್ತೆಂದು "

" ನನಗೆ ಏನೂ ತೋರಲಿಲ್ಲ. ಬುದ್ಧಿ ಇಲ್ಲದವಳಂತೆ ಮೂಕ ಗಿದ್ದೆ.

" ಕಡೆಗೆ ಅವನೇ ಹಂಚಿಗೆಯನ್ನು ತೆಗೆದ. —ಗೌಡರಿಗೆ ಕಾ ದಂತೆ ಅವನ ಉಪಪತ್ನಿಯಾಗಿರಬೇಕೆಂದು ಸ್ಪಷ್ಟವಾಗಿ ಹೇಳಿಬಿಟ್ಟ. "

" ಮೊದಮೊದಲು ನಾನು ಸಪ್ಪೆ ಹಾಕಲಿಲ್ಲ. ಅಂಜಿಕೆ ಹಾಕಿದ ಆಗ ಹೆದರಿದೆ. ಅವನ ಉಪಾಯವನ್ನು ಬೇರೆ ಗತಿಯಿಲ್ಲದೆ ನನ್ನ ಜೀವನದಲ್ಲಿ ನಡೆಸತೊಡಗಿದೆ.

ಆಗಿನಿಂದ ಮೇಸ್ತ್ರಿ ನಮ್ಮ ಮನೆಗೆ ಬಂದು ಹೋಗುತ್ತಿದ್ದನು ನಮ್ಮ ಗೌಡರ ಸಂಗಡಲೂ ಅವನ ಸ್ನೇಹ ಬಹಳ

" ನಾನು ಮೊದಲೇ ಹೇಳಿದಂತೆ ಗೌಡರು ಹಳ್ಳಿಯವರು "

ಇಷ್ಟು ಹೇಳಿ ಚೆನ್ನಿಯು ಸುಮ್ಮನಾದಳು. ಸ್ವಲ್ಪ ಹೊತ್ತು ಯೋಚಿಸಲಾರಂಭಿಸಿದೆ.

ಹೂಂ. ಪುನಃ ಕಾರ್ಯಭಾರದಿಂದ– ಜೀವನದ ಪ್ರತಿಫಲವಾಗಿ ಚೆನ್ನಿಯ ಜೀವನವು ಬೇರೆ ಕಡೆಗೆ ಹಾಯಲು ಮಾರ್ಗವಿರಲಿಲ್ಲ. ಮೊದಲೆ ಗೊತ್ತು ಮಾಡಿದ್ದ ನಿರ್ಣಯದಂತೆ ಅದು ದುರ್ಗಮವಾದ ನಿಟ್ಟಿನಲ್ಲಿ ಹಾದು ಹೋಗಬೇಕಾಗಿತ್ತು.

ಅವಳ ಜೀವನದಲ್ಲಿ ಬೇಕಾಗಿದ್ದುದು ಒಬ್ಬರು, ಸೇರಿದ್ದವರು ಬಹುಮಂದಿ, ಮದುವೆಯಾಗಿದ್ದವರು ಒಬ್ಬರು, ಬಲವಂತ ಮಾಡಿ ಸೇರಿದ್ದವರು ಒಬ್ಬರು.

ಅಂತೂ ಒಬ್ಬ ಸ್ತ್ರೀಯಳ ಜೀವನ ಪಟದಲ್ಲಿ ಅನೇಕ ಮಂದಿ ಪುರುಷರ ಚಿತ್ರ. ಅವಶ್ಯವಿರಲಿ, ಇಲ್ಲದಿರಲಿ, ಜನಸಂದಣಿಯ ಗುಂಪು ಮಾತ್ರ ಗತ್ಯಂತರವಿಲ್ಲದೆ ಸೇರಿ ಹೋಗಿತ್ತು.

ಹೀಗೆ ನಾನು ಹೇಳಿದರೆ ನಾನು ಸಮಾಜಕ್ಕೆ ಕೆಟ್ಟವನು. ಸಮಾಜದ ಕಟ್ಟು ಮುರಿಯಲು ಹೊರಟವನು. ಆದುದರಿಂದ ನಾನು ಸಮಾಜದಿಂದ ಹೊರಗಿರಬೇಕು.

ಆದರೆ ಚೆನ್ನಿಯಂತಹವರು ನಮ್ಮ ರೀತಿಬದ್ಧ, ನ್ಯಾಯಬದ್ಧ ಸಮಾಜಕ್ಕೆ ಬೇಕು. ಅದು ಅವಳನ್ನು ಬಿಡಲಾರದು. ಆದರೆ ಅಂತಹಳ ಪ್ರಶ್ನೆಯನ್ನು ಬಾಯಿಯಿಂದ ಹೇಳಬಾರದು.

ನೀವು ಹಾಗೆ ಮಾಡಿದರೆ ಒಳ್ಳೆಯವರು. ಸಮಾಜದ, ಅವರ ಬುದ್ಧಿಯಲ್ಲಿ ಅಣಕಿಗಳ ಆಧಾರಸ್ತಂಭರು.

ಯೋಚನೆಗೆ ಭಂಗವಾಯಿತು. ಅವಳ ಪುಟ್ಟ ಜೀವನ ನೋವಿಗಾಗಿ "ಅಯ್ಯೋ ಪಾಪ" ವೆಂದು ಸಮಾಧಾನ ಮಾಡಬೇಕೆಂದು ಬಯಸಿದೆ. ಮರುಕ್ಷಣದಲ್ಲಿಯೇ ಹಾಗೆ ಮಾಡಬಾರದೆಂದು ನಿಶ್ಚಯ ಮಾಡಿಕೊಂಡೆ.

"ಅಯ್ಯೋ, ಪಾಪ" ದಿಂದ ಏನೂ ಉಪಯೋಗವಿಲ್ಲ. ನೊಂದವರು ನೋಯಲೇ ಬೇಕು. ದುಡಿಯುವವರು ದುಡಿಯಲೇ ಬೇಕು.

ಸುಖಪಡುವವರು ಸುಖಪಡೆಯಲೇ ಬೇಕು. ಆದರ ವಿಷಯದಲ್ಲಿ ಒಂದು ಉದ್ಗಾರ ತೆಗೆಯುವುದು ವಿಚಾರಹೀನರ ಕೆಲಸ. ಚಿತ್ರಕ್ಕೆ ಮಂಕುಬೂದಿಯನ್ನು ಚೆಲ್ಲುವ ಕೆಲಸ. ನಮ್ಮನ್ನು ನಾವೇ ಮೋಸಗೊಳಿಸಲು ಮಾಡುವ ಪ್ರಯತ್ನ.

ನಮ್ಮ ಉದ್ಗಾರದಿಂದ ಯಾರಿಗೂ—ಅದರಲ್ಲಿಯೂ ಅನುಭವದ ರುಚಿಯನ್ನು ಪಡೆಯುತ್ತಿರುವವರಿಗೆ—ಏನೂ ಪ್ರಯೋಜನವಿಲ್ಲ. ಸಹಾನುಭೂತಿಯ ಉದ್ಗಾರವು ಕೇವಲ ಸ್ವಾರ್ಥದ್ದು. ಬೇರೊಬ್ಬರಿಗಾಗಿ ಅಲ್ಲ.

ಈ ಭಾವನೆಯಿಂದ ನಾನು "ಅಯ್ಯೋ ಪಾಪ" ವೆಂದು ಸಂತೈಸಲಿಲ್ಲ. ಸುಮ್ಮನೆ ಅವಳನ್ನು ನೋಡುತ್ತ ಕುಳಿತೆ. ಅವಳೂ ನನ್ನ ಮನೋಭಾವನೆಯನ್ನು ತಿಳಿದುಕೊಂಡಳು. ಇಬ್ಬರೂ ಒಂದುಸಾರಿ ದೊಡ್ಡದಾಗಿ ನಿಟ್ಟುಸುರನ್ನು ತೆಗೆದುಕೊಂಡು ಸುಮ್ಮನಿದ್ದೆವು.

ಈ ವೇಳೆಯಲ್ಲಿ ಚಿತ್ತದಲ್ಲ ಒಂದು ವಿಪರೀತವಾದ ಯೋಜನೆ. ಯೋಜನೆಗಾಗಿ ನಾನೆ ನನ್ನಲ್ಲಿಯೇ ಅಂಜಿದೆ: ಒಂದು ಸಾರಿ ಅವಳನ್ನು ಬರಸೆಳೆದು ಮನಸ್ಸಿಗೆ ಬೇಕಾದಷ್ಟು ರಮಿಸಿ, ಸಂತೈಸಬೇಕೆಂದು.

ಇಂತಹ ವೇಳೆಯಲ್ಲಿ ಜೀವಿಗಳು ಈ ವರ್ತನೆಯನ್ನು ಬೇಡವೆನ್ನುವುದಿಲ್ಲ, ನಿರಾಕರಿಸುವುದಿಲ್ಲ.

ಆದರೆ ಒಂದು ಹಿರಿದಾದ ಹೆದರಿಕೆ. ಜೀವನದ ಸರಳವಾದ ದ್ವಂದ್ವವಾದ ಮಾರ್ಗವು ಬಹು ಕಡಿದಾಗಿ ಹೋಗುವುದು.

ಅಂತೂ, ಈ ವಿಲಕ್ಷಣವಾದ ಕಾರಣಗಳಿಂದ ನಾನು ಏಳಲಿಲ್ಲ. ಅವಳೂ ಸುಮ್ಮನಿದ್ದಳು.

೩

ಸ್ವಲ್ಪ ಹೊತ್ತಿನ ನಂತರ ಚೆನ್ನಿಯು ತನ್ನ ಕತೆಯನ್ನು ಮುಂದೆ ಸಾಗಿಸಿದಳು.

“ನನ್ನ ಕತೆಯು ಅಷ್ಟಕ್ಕೆ ಮುಗಿಯಲಿಲ್ಲ. ರಾಯರೇ, ಮೇಸ್ತ್ರಿಯು ತನ್ನ ಹಳೆಯ ಸ್ನೇಹಿತರನ್ನು—ನನ್ನ ಗುರುತಿನವರನ್ನು—ಬೇರೆ ಯಾವಾಗಲಾದರೂ ಸಂಗಡ ಕರೆದುಕೊಂಡು ಬರುತ್ತಿದ್ದ. ಇದರಿಂದ ನನಗೆ ಬಹಳ ತೊಂದರೆಗಿಟ್ಟಿತು. ಅವರನ್ನು ಬೇಡವೆನ್ನುವುದಕ್ಕೂ ಇಲ್ಲ, ಹತ್ತಿರ ಸೇರಿಸುವುದಕ್ಕೂ ಇಲ್ಲ, ಗೊಂದಲದಲ್ಲಿ ಸಿಕ್ಕಿ, ಬೇರೆ ವಿಧಿಯಿಲ್ಲದೆ ಅವರ ಕೈಯಲ್ಲಿ ನಾನು ಸಿಕ್ಕಿಹೋದೆ.

“ಆಗಿನ ನನ್ನ ಅವಸ್ಥೆಯನ್ನು ಹೇಳಲು ಸಾಧ್ಯವಿರಲಿಲ್ಲ- ಈಗಲೂ ಆಗದು. ಆ ಹಾಳು ಗಂಡಸರಿಗೆ ಬೇಕಾದುದು ನನ್ನಿಂದ ದೊರೆಯುತ್ತಿದ್ದ ದೊರೆಯಬಹುದಾದ ಕಾಮತೃಪ್ತಿ.”

“ನನ್ನ ಹಿಂದಿನ ಜೀವನವು ಹೊರಬಿದ್ದೀತೆಂಬ ಭೀತಿಯಿಂದ ಅವರು ಹೇಳುತ್ತಿದ್ದುದೆಲ್ಲವನ್ನೂ ವಿರುದ್ಧ ನುಡಿಯದೆ ಕೇಳುತ್ತಿದ್ದೆ. ನನ್ನ ಪುಣ್ಯದಿಂದ, ಅವರ ದಯೆಯಿಂದ ಇದೊಂದೂ ಗೌಡರಿಗೆ ತಿಳಿಯ ಬರಲಿಲ್ಲ.

“ಆದರೂ ನನಗೆ ಜೀವನದಲ್ಲಿ ಸೌಖ್ಯವಿರಲಿಲ್ಲ. ದಿನಕಳೆಯುವುದು ಬಹುಕಷ್ಟವಾಗಿತ್ತು. ಯಾವ ಹೊತ್ತಿಗೆ ಏನು ಒದಗುವುದೋ ಎಂಬ ಹೆದರಿಕೆಯು ಪೀಡಿಸುತ್ತಿತ್ತು.”

“ಕೆಲವು ತಿಂಗಳುಗಳು ಹೀಗೆಯೇ ಕಳೆದವು.”

“ಒಂದು ದಿನ ಒಂದು ಸಂಗತಿಯು ನನಗೆ ಮನಸ್ಸಿನಲ್ಲಿ ಗೋಚರವಾಯಿತು.”

“ನಾನು ಬಸುರಿ”

“ಇದು ಮನಸ್ಸಿಗೆ ತಿಳಿದೊಡನೆಯೇ ನನಗೆ ಒಂದು ರೀತಿಯಾದ ಸಂತೋಷ; ಸಂಗಡಲೇ ವಿಪರೀತವಾದ ಕೋಪದಿಂದೊಡಗೂಡಿದ ದುಃಖ. ಮನಸ್ಸಿನಲ್ಲಿ ಏನೋ ಒಂದು ಬಗೆಯ ನಡತೆ. ಅದು ಏನೆಂದು ನಾನು ಹೇಳಲಾರೆ. ದಿನಗಳು ಕಳೆದಂತೆ ನನಗೆ ಸಂತೋಷವಾಯಿತು.”

“ಪುನಃ ಚೆನ್ನಿಯು ಮಗುವನ್ನು ಮುದ್ದಿಸುತ್ತಾ ಸುಮ್ಮನೆ

ಕುಳಿತಳು. ಅವಳನ್ನು ನೋಡಿದೊಡನೆಯೇ, ಅವಳ ನಡವಳಿಕೆಯನ್ನು ಕಂಡೊಡನೆಯೇ ಅವಳ ಮನಸ್ಸಿನಲ್ಲಿದ್ದ ಭಾವನೆಗಳ ಪರಿಚಯ ವಾಯಿತು. ”

ಅಂದಿನವರೆಗೂ ಅವಳ ಜೀವನದಲ್ಲಿ ಕೇವಲ ಸಮೀಪವಾದ ವಸ್ತುವು ಇರಲಿಲ್ಲ. ಅವಳಿಗೆ ಸಂಸಾರವಿತ್ತು, ಗಂಡನಿದ್ದ ಆದರೆ ಆತ ನೊಡನೆ ಮನಬಿಚ್ಚಿ ಮುಚ್ಚುಮರೆಯಿಲ್ಲದೆ ನಡೆಯಲು ಸಾಧ್ಯವಿರಲಿಲ್ಲ. ಸಮಾಜಕ್ಕೆ ಅಂಜಿದ ಅವಳಿಂದ ಆ ನಡವಳಿಕೆಯು ಅಸಾಧ್ಯವಾಗಿತ್ತು. ಈಗ ಅವಳದೆ ಆದ, ಯಾವ ಕಳಂಕವಿದ್ದರೂ ದೂರದಂತಹ ವಸ್ತುವು ಅವಳಿಗೆ ದೊರೆಯುವ ಸಮಯವು ದೈವವಶದಿಂದ ಕೈಸೇರಿತ್ತು. ತನ್ನದೆ ಆದ ಮಗುವಿದ್ದರೆ, ಅದರ ಜೀವನದಲ್ಲಿ ತನ್ನ ಜೀವನವನ್ನು ಅಡಗಿಸಿ, ಚೆನ್ನಿಯು ಜೀವನವನ್ನು ಸಾಗಿಸಬಹುದಿತ್ತು. ಬಾಹ್ಯ ಜಗತ್ತಿನಿಂದ ಹೊರಬಿದ್ದು, ಅವಳು ಅಂತರ್ಲೋಕವನ್ನು ಸೇರಿ, ಮಗುವಿನ ಸುಖ-ದುಃಖಗಳಲ್ಲಿ, ಅಳುವು-ನಗುವಿನಲ್ಲಿ, ಹುದುಗಿಹೋಗಿ, ತನ್ನ ಎಲ್ಲಾ ಆಶೆಗಳನ್ನು ಬಯಕೆಗಳನ್ನು ಕೈಗೂಡಿಸಿಕೊಳ್ಳಬಹುದಿತ್ತು.

ಈ ವಿಧವಾದ ಕಾರಣಗಳಿಂದ ಅವಳಿಗೆ ಒಂದು ವಿಧವಾದ ಶಾಂತಿ, ಸಮಾಧಾನ, ಸುಖವು ದೊರೆತಿತ್ತು.

ಆದರೆ ಉತ್ತರ ಕ್ಷಣದಲ್ಲಿಯೇ ದುಗುಡವು ಬಲಿತು ಪೀಡಿಸುತ್ತಿತ್ತು. ಮಗುವಿನ ತಂದೆ ಯಾರೆಂದು ಹೇಳಲು ಅವಳಿಂದ ಹೊರತಾದ ಕಾರ್ಯ. ಮಗುವಿಗೆ ತಂದೆಯಿದ್ದರೂ ತಂದೆಯೆಂದು ನಿಶ್ಚಯವಾಗಿ ಹೇಳಬಹುದಾದವರು ಇರಲಿಲ್ಲ. ಮಗುವು ಪಿತೃವಿಹೀನ.

ಹೊರಗಿನವರಿಗೆ ಇದು ಅರ್ಥವಾಗದ, ತಿಳಿಯದ ಅವಸ್ಥೆ. ಅವಳಿಗೆ, ಅವಳ ಪ್ರಣಯಿಗಳಿಗೆ ಅರ್ಥವಾಗದ, ತಿಳಿಯದ ಪರಿಸ್ಥಿತಿ. ಅಂತೂ ಎಲ್ಲಾ ಬಗೆಯಿಂದಲೂ ಮಗುವು ಪಿತೃವಿಹೀನ.

ಈ ವಿಪರೀತ ಪರಿಸ್ಥಿತಿಯಿಂದ ಚೆನ್ನಿಗೆ ಕೋಪದಿಂದೊಡಗೂಡಿದ ದುಃಖ.

ಪರಿಸ್ಥಿತಿಯು ಇಷ್ಟು ವಿಷಮಯುವಿದ್ದರೂ ಚೆನ್ನಿಗೆ ಸಂತೋಷ ವಾಗಲು ಬಲವಾದ ಕಾರಣವಿತ್ತು, ಮಗುವು ಪಿತೃತಿವಿಹೀನವಾದರೂ ಚೆನ್ನಿಯು ಅದರ ತಾಯಿ. ಹುಟ್ಟುವ ಮಗುವಿನ ಪ್ರತಿಯೊಂದು ಕಾರ್ಯಕ್ರಮವೂ ಅವಳನ್ನೇ ಅವಲಂಬಿಸಿತ್ತು. —ಮಗು ಅವಳದು

" ದಿನ ತುಂಬಿದವು, ರಾಯರೇ "- ಚೆನ್ನಿಯು ನನ್ನ ಯೋಚನಾ ತರಂಗಗಳನ್ನು ಭಂಗಪಡಿಸಿ ಹೇಳುತ್ತಿದ್ದಳು.- ಕ್ರಮವಾಗಿ ನಾನು ಮಗು ವನ್ನು ಹೆತ್ತೆ. ಮಗು ಗಂಡು. ಇದರಿಂದ ನಮ್ಮ ಗೌಡರಿಗೆ ಬಹಳ ಆನಂದ—ನಮ್ಮ ಸ್ನೇಹಿತರೆಲ್ಲರಿಗೂ ಬಹು ಸಂತೋಷ.

" ಎಲ್ಲರೂ ತಮ್ಮ ತಮ್ಮ ಕೈಯಲ್ಲಿ ಆದ ಉಡುಗೊರೆಯನ್ನು ಕೊಟ್ಟರು.

" ಮಗುವೂ ದೊಡ್ಡದಾಯಿತು. ನಿಮಗೆ ಅದನ್ನು ತೋರಿಸ ಬೇಕೆಂದು ಬಂದೆ. ರಾಯರೇ.— ನೋಡಿ, ಮಗುವು ಹೇಗಿದೆ, ಹೇಳಿ?"

ನಾನು ತಟ್ಟನೆ ಉತ್ತರಗೊಡಲಿಲ್ಲ. ಪ್ರಸಂಗವು ನನ್ನ ಬುದ್ಧಿಗೆ ಸ್ವಲ್ಪ ಹೊರಗಾಗಿತ್ತು.

ಪುನಃ ಅವಳು— " ನೋಡಿ, ರಾಯರೆ, ನಾನು ನಿಮ್ಮ ಮನೆ ಯಲ್ಲಿಯೇ ಇದ್ದು, ಈ ಮಗುವು ಹುಟ್ಟಿದ್ದರೆ—ಚೆನ್ನಾಗಿರುತ್ತಿರಲಿಲ್ಲವೇ, ಹೇಳಿ ನೋಡೋಣ ? " ಎಂದು ಪ್ರಶ್ನೆ ಹಾಕಿದಳು.

ನನ್ನ ಪುಣ್ಯವಶದಿಂದ ಶಾರದೆಯು ಮನೆಯಲ್ಲಿರಲಿಲ್ಲ. ಚೆನ್ನಿಯು ಪ್ರಶ್ನೆಗಳೆರಡೂ ವಿಲಕ್ಷಣವಾದುವು; ಸಂಗಡವೇ ಸಹಜವಾದುವುಗಳು.

ಹೊತ್ತು, ಹೆತ್ತ ತಾಯಿಗೆ ಮಗುವು ಹೇಗೆ ಇರಲಿ ಅದು ಸುಂದರ ವಾದುದು. ಅದರಲ್ಲಿಯೂ ಚೆನ್ನಿಯಂತಹ ಜೀವಿಗಳಿಗೆ ತಮ್ಮ ಮಕ್ಕ ಳಂತಹ ವಸ್ತುವು ಜಗತ್ತಿನಲ್ಲಿಯೇ ಇರುವುದಿಲ್ಲ. ಮಗು ಅವಳದು. ಅದು ಕಾರಣ, ಅದು ಸುಂದರವಾದ, ಬಹುಸತಕ್ಕ ಅವಶ್ಯವಾದ ವಸ್ತು

ಎರಡನೆಯ ಪ್ರಶ್ನೆಯಿಂದ ಮನದಲ್ಲಿದ್ದ ಬಯಕೆಯು ಪ್ರಕಟವಾಯಿತು. ಆಶೆಯು ಕೇವಲ ಬಯಕೆಯಾಗಿಯೇ ನಿಂತು ಬಯಲಲ್ಲಿ ಬಯಲಾಗಿ ಹೋಯಿತು. ಮಗುವು ಅವಳದೂ, ನನ್ನದೂ ಇದ್ದಿದ್ದರೆ—

ಊಹೆಗಳಿಗೆ ಮಿತಿಯಿಲ್ಲ, ರೀತಿಯಿಲ್ಲ. ಅವರಂತೆಯೇ ಮನದ ಬಯಕೆಗಳಿಗೆ ಯಾವ ಮೇರೆಯೂ ಇಲ್ಲ. ವಿಸ್ತಾರವಾದ, ವಿಶಾಲವಾದ ಗಗನದಂತೆ ಅವು ಹರಡುವುವು.

ಸದ್ಯಕ್ಕೆ ನನ್ನ ಮನಸ್ಸಿನಲ್ಲಿ ಇಷ್ಟು ಮಾತ್ರ ನಿಂತಿತು. ಯಾರ ಕೃಪಾಛತ್ರದಿಂದ ಮಗುವಿನ ಜನನವಾಗಿದ್ದರೂ ನನಗೆ ಅವರ ಸಂಬಂಧವಿಲ್ಲ. ನನ್ನ ಸಂಬಂಧ ಇಷ್ಟೆ. ನಾನು ಚೆನ್ನಿಗೆ ಬೇಕಾದವನು. ಚೆನ್ನಿಯು ನನಗೆ ಬೇಕಾದವಳು. ಮಗುವು ಚೆನ್ನಿಗೆ ಅತ್ಯಂತ ಬೇಕಾದ ವಸ್ತು.

ಆದುದರಿಂದ ಮಗುವಿನ ಮೇಲೆ, ಚೆನ್ನಿಯ ಇಷ್ಟದಂತೆ ನನ್ನ ಒಡೆತನವೂ ಉಂಟು.

ಇಷ್ಟು ಅರ್ಥವಾದ ಕೂಡಲೆ "ತಾ, ಚೆನ್ನಿ, ಮಗುವನ್ನು ಕೊಡು" ಎಂದು ಕೈ ನೀಡಿದೆ.

ಅವಳು ಮಾತನಾಡಲಿಲ್ಲ. ಮಗುವಿಗೆ ಒಂದು ಸಾರಿ ಮುದ್ದಿಟ್ಟು ನನಗೆ ಅದನ್ನು ಕೊಟ್ಟಳು. ನಾನು ಅದನ್ನು ಕೈಯಲ್ಲಿ ಹಿಡಿದು ಚೇಷ್ಟೆ ಮಾಡತೊಡಗಿದೆ.

ಎಲ್ಲಕ್ಕೂ ಮೂಲಕಾರಣವಿಷ್ಟೇ. ಮಗುವು ಚೆನ್ನಿಯದು.

೪

ನನ್ನ ಹೆಸರೇ ಚೆನ್ನಿಯ ಮಗುವಿನ ಹೆಸರು. ನಾನು ಬೇಡವೆನ್ನಲಿಲ್ಲ. ಗೌಡರು ಈಗ ನಮ್ಮ ಮನೆಗೆ ಆಗಾಗ ಬರುವರು. ಇವೆಲ್ಲವೂ ಸರಿ; ಚೆನ್ನಿಯ ಹಿಂದಿನ ಸ್ನೇಹಿತರು ಸ್ವಲ್ಪ ದೂರವಾದರು. ಬಂಗಾರದ

ಬಳಿಯು ನನ್ನ ಪುಟ್ಟ ಉಡುಗೊರೆ. ಚೆನ್ನಿಗೆ ಒಂದು ಉಡುಗೊರೆಯನ್ನು ಕೊಟ್ಟೆ. ಅದನ್ನು ನಿಮಗೆ ಹೇಳುವುದಿಲ್ಲ.

ಎಲ್ಲವನ್ನೂ ಮನಸ್ಸಿನಲ್ಲಿ ವಿಚಾರ ಮಾಡಿಕೊಂಡರೆ ನನಗೆ ಯಾವುದೂ ಸರಿಯಾಗಿ, ಯೋಗ್ಯ ರೀತಿಯಲ್ಲಿ ತಿಳಿಯಲೊಲ್ಲದು.

ಚೆನ್ನಿ, ಅವಳ ಮಗು, ಅವಳ ಗಂಡ, ಅವಳ ಸ್ನೇಹಿತರು, ಹಾಗೂ ನಾನು,—ನಾನು ಅವಳ ಸಮೀಪದ ಬಂಧು. ಈ ಅನ್ಯೋನ್ಯ ಸಂಬಂಧಗಳು ಅರ್ಥವಾಗುವುದಿಲ್ಲ.

ಆದರೂ ನೀವೇ ವಿಚಾರಮಾಡಿ. ಈ ಸಂಬಂಧಗಳ ಮೂಲವೆಂದರೆ ಅವಳು. ಪ್ರತಿಯೊಂದು ವಿಷಯಕ್ಕೂ, ಅವಳು ಮೊದಲು, ಉಳಿದವು ಬಳಿಕ. ಅಂತೆಯೇ ಮಗುವು ಸಹಾ ಅವಳದು.

ಒಂದುಕ್ಷಣ ಚಿತ್ತದಲ್ಲಿ ಕಠೋರತೆಯು ಬಂದು ನಿಂತಿತು. "ಎಲ್ಲವೂ ತಪ್ಪು, ಹೀಗೆ ಮಾಡಿದರೆ ವಿನಾಶವು ಖಂಡಿತ" ವೆಂದು ಯೋಚನೆಯಾಗುವುದು. ಮರು ಕ್ಷಣದಲ್ಲಿಯೇ "ತಪ್ಪು ಯಾವುದೂ ಇಲ್ಲ. ಜೀವನದಲ್ಲಿ ಬೇಕಾದ ವಸ್ತುವಿದ್ದರೆ ಮಾತ್ರ ಸಾಕು. ಉಳಿದವು, ಅವುಗಳ ಸಂಬಂಧಗಳು ಕೇವಲ ಸಮಾಜದ ಕಾಲ್ಪನಿಕವಾದ ನಿಯಮಗಳು. ಅವಕ್ಕೂ ವಾಸ್ತವವಾದ ಜೀವನಕ್ಕೂ ಸಂಪರ್ಕವಿರುವುದಿಲ್ಲ. ಕೇವಲ ಗೊಂದಲವೇಕೆ?" ಎಂಬ ಆಕ್ಷೇಪಣೆಯು ಬಂದು ಮುಂದೆ ನಿಲ್ಲುವುದು.

ಈ ಎರಡು ಮಾರ್ಗಗಳ ನಡುವೆ ನನಗೆ ದಾರಿ ತೋರದು. ನನ್ನ ಚಿತ್ರದಲ್ಲಿ ಮಾತ್ರ ಕಡೆದಷ್ಟೂ ಇಷ್ಟು ಸ್ಪಷ್ಟವಾಗಿ ನಿಲ್ಲುವುದು. "ಜೀವನಕ್ಕೆ ಅತ್ಯಂತ ಅವಶ್ಯಕವಾದ ವಸ್ತುವು ಇದ್ದರೆ, ಅದರ ಸಂಬಂಧವನ್ನು ಬೇರೆಯವರು ನಿರ್ಣಯಿಸಲು ಆಗುವುದಿಲ್ಲ. ಅನುಭವಿಗಳಿಗೆ ಮಾತ್ರ ಅದರ ಹಕ್ಕುಂಟು"

ಇದರ ನಿಶ್ಚಯದಂತೆ ಮಗು ಚೆನ್ನಿಯದು.

ಅದೇ ಮುಖ್ಯವಾದ ಕಾರಣ, ಮುಖ್ಯವಾದ ಪರಿಣಾಮ. ಮುಖ್ಯವಾದ ಕಾರ್ಯಕ್ರಮ.

ಚೆನ್ನಿಯದು ಮಗು. ಅದು ಅವಳಿಗೆ ಬೇಕೇಬೇಕು. ಚೆನ್ನಿಯದಾದುದರಿಂದ ನನಗೂ ಬೇಕು.

ತಪ್ಪು-ಸರಿಗಳನ್ನು ತೂಕಮಾಡುವುದಕ್ಕೆ ಕೂಡ ಸಮಾಜಕ್ಕೆ ಹಕ್ಕಿಲ್ಲ. ಕಾರಣವು ಬಹು ಬಿಗಿಯಾದುದು. ಈಗಿನ ಸಮಾಜದಿಂದಲೇ ಇಷ್ಟು ಅನರ್ಥವಾಗಿದೆ.

ಯೋಜನೆಮಾಡುತ್ತ, ಮಾಡುತ್ತ, ಆಕಾಶದ ಕಡೆಗೆ ನೋಡಿದೆ. ಮೋಡದಿಂದ ಹೊರಬಿದ್ದು, ಕಿಟಕಿಯೊಳಗಿನಿಂದ ದೂರಿಬರುತ್ತಿದ್ದ ಸೂರ್ಯಕಿರಣಗಳನ್ನು ನೋಡಿದೆ. ಹುಡುಗನಾಗಿದ್ದಾಗ ಉಪಾಧ್ಯಾಯರು ಹೇಳುತ್ತಿದ್ದುದು ಜ್ಞಾಪಕಕ್ಕೆ ಬಂದಿತು. ಬಹುದೂರದಿಂದ, ದಾರಿತಪ್ಪದೆ, ಆ ಕಿರಣಗಳು ಬರುವುದೆಂದು ಕೆಲವರು ವಿನಃ ಬೇರೆ ಯಾರೂ ಇದನ್ನು ಗಮನಿಸುವುದಿಲ್ಲ.

ನಾನು ಅಸಂಖ್ಯಾಕ ಮೈಲಿಗಳ ದೂರದಿಂದ ಬರುವ ಅನಂತ ರೂಪಿಯಾದ ಕಿರಣಗಳನ್ನು ನೋಡುತ್ತಾ ಕುಳಿತೆ.

ಅವೂ ರೂಪಜೀವಿಗಳು.

ಮಾನವರಾದ ನಾವೂ ರೂಪಜೀವಿಗಳು.

# ಒಂದು ವೇಳೆ

## ೧

" ಏನು ತಲೆಯ ಮೇಲೆ ಪ್ರಪಂಚ ಕಳಚಿಬಿದ್ದ ಹಾಗೆ ಕಾಣು ತ್ತದಲ್ಲಾ ? "

ಪ್ರಶ್ನೆ ಮಾಡಿದವಳು ನನ್ನ ನಿರಂತರ ಸಹವಾಸಿಯಾದ ಶಾರದೆ. ಅವಳ ಪ್ರಶ್ನೆಗೆ ನಾನು ಮರುಮಾತುಗೊಡಲಿಲ್ಲ. ಹಾಗೆ ನಿಟ್ಟುಸುರಿಟ್ಟು ತೆಪ್ಪಗೆ ಕುಳಿತೆ. ಸುಮ್ಮನೆ ಕುಳಿತೆನೆಂದರೆ ಸರಿಯಾಗಿ ಹೇಳಿದ ಹಾಗೆ ಆಗುವುದಿಲ್ಲ. ಅವಳ ಮುಖವನ್ನು ನೋಡುತ್ತಾ ಕುಳಿತೆ.

ಅವಳನ್ನು ನೋಡುತ್ತಿದ್ದ ಹಾಗೆಯೇ ಹತ್ತುವರ್ಷಗಳ ಹಿಂದೆ ನಡೆದ ಒಂದು ಸಂಗತಿಯೊಂದು ಜ್ಞಾಪಕಕ್ಕೆ ಬಂದಿತು. ಶಾರದೆಯು ಈಗ ಕುಳಿತಿದ್ದ ಸ್ಥಾನದಲ್ಲಿ ಆಗ ಬೇರೊಬ್ಬ ವ್ಯಕ್ತಿಯು ಕುಳಿತಿತ್ತು. ಆ ವ್ಯಕ್ತಿಯ ರೂಪು ಬೇರೆ. ಸ್ವಭಾವ ಬೇರೆ. ಗುಣ ಬೇರೆ.

ಒಟ್ಟನಲ್ಲಿ ಆ ವ್ಯಕ್ತಿಗೂ ಈಗಿದ್ದ ಅಲ್ಲಿಯೇ ಇದ್ದ ಶಾರದೆಗೂ ಯಾವ ಬಗೆಯ ಸಂಬಂಧವೂ ಇರಲಿಲ್ಲ. ಎರಡಕ್ಕೂ ಸಂಬಂಧವೆಂದರೆ ನಾನು—ನನ್ನ ಸಹ ಹರಿದುಬರುತ್ತಿರುವ ಜೀವನ ಪ್ರವಾಹ. ಅದರಲ್ಲಿ ಅನೇಕ ಏರಿಳಿತಗಳಿದ್ದವು.

ನನ್ನ ನಿಟ್ಟುಸಿರನ್ನು ಕೇಳಿದ ಶಾರದೆಯು ನಕ್ಕು " ಅಂತಹ ಚಿಂತೆಯೇನು ? " ಎಂದು ಪುನಃ ಕೇಳಿದಳು.

ನಾನು ಉತ್ತರಕೊಡಬೇಕಾಗಿ ಬಂದಿತು. ಸುಮ್ಮನಿರಲು ಸಾಧ್ಯ ವಿರಲಿಲ್ಲ. " ಸೀತೆಯನ್ನು ಜ್ಞಾಪಿಸಿಕೊಂಡೆ. ಶಾರದೆ, ನೀನು ವಿಕ್ಟರ ಹ್ಯೂಗೋವಿನ ಪುಸ್ತಕಗಳನ್ನು ಓದಿರುವೆಯಾ ? "

" ಏನು ಸೀತೆಯನ್ನೇ ! " ಒಂದು ಸಾರಿ ಕಿರುನಗೆಯನ್ನು ತೋರಿ ದಳು. " ಹುಡುಗಿ ಬಹುಮುದ್ದಾಗಿತ್ತು. ಈಗ ಹೇಗಿದ್ದಾಳೆ ? ನೋಡಿ

ದ್ದೀರಾ. ಸರಿ, ಸೀತೆಗೂ ವಿಕ್ಟರ ಹ್ಯೂಗೋವಿಗೂ ಏನು ಬಾದರಾಯಣ ಸಂಬಂಧ? ಓದಿದ್ದೇನೆ. ಅವನ ಗದ್ಯಕಾವ್ಯಗಳನ್ನು ಮಾತ್ರ. ಅದರಲ್ಲಿಯೂ ನನಗೆ ಅವನ 'Toilers of the sea.' ಕಂಡರೆ ಬಹಳ ಇಷ್ಟ."

ನಾನು ಅವಳ ಪ್ರವಚನವನ್ನು ನಿಲ್ಲಿಸಬೇಕೆಂದು ಆಶಿಸಿ "ಅದಲ್ಲ, ನಾನು ಯೋಚಿಸುತ್ತಿರುವುದು 'Toilers of the sea' ಅಲ್ಲ 'Ninety-three' ಯನ್ನು. ಅದರಲ್ಲಿ ಒಂದು ಕತೆ ಇದೆ. ನಿನಗೆ ನೆನಪಿದೆಯೋ?"

"ಯಾವುದು?"

"ಹೂಂ - ನೋಡು ಈ ವಾಕ್ಯ There are moments when whatever may be the attitude of the body, the soul is on its knees"— ನೋಡು ಇದು ಬಹಳ ಸಾರಿ ನಿಜ. ಅದರಲ್ಲಿಯೂ ಈಗ ಸೀತೆಯ ಜ್ಞಾಪಕ ಬಂದಕೂಡಲೆ ಇದೂ ಜ್ಞಾಪಕಕ್ಕೆ ಬಂದಿತು.

"ಜ್ಞಾಪಕ ಇದೆ; ಆದರೆ ನಿಮಗೆ, ಸೀತೆಗೆ ಮತ್ತು ಇದಕ್ಕೆ ಏನು ಸಂಬಂಧ?"

ಪುನಃ ನಾನು ನಿರುತ್ತರನು. ಒಂದೆರಡು ನಿಮಿಷಗಳು ಸ್ತಬ್ಧನಾಗಿದ್ದು ನಂತರ.

"ಶಾರದೆ, ಟೀ ಮಾಡಿದೆಯೋನೋ ನೋಡು ಹೋಗು" ಎಂದು ಹೇಳಿದೆ. ಶಾರದೆಯು ಎಂದೂ ನನ್ನ ಈ ದನಿಯನ್ನು ಕೇಳಿರಲಿಲ್ಲ. ನನ್ನ ನಿರುತ್ತರದ ಸ್ಥಿತಿಯನ್ನು ಕಂಡಿರಲಿಲ್ಲ. ಸೀತೆಗೆ ಏನೋ ಅಪಘಾತವಾಗಿರಬಹುದೆಂದು ತರ್ಕಿಸಿ, ಒಂದು ಸಲ ನನ್ನ ಮುಖವನ್ನು ನೋಡಿ ಒಳಕ್ಕೆ ಹೊರಟು ಹೋದಳು.

೨

ಹ್ಯೂಗೋ ಮಹಾಶಯನು ಉದಾತ್ತಕವಿ, ಅಷ್ಟೇ ಅಲ್ಲ. ಅವನ ಜೀವನವು ಬಹಳ ಅನುಭವವುಳ್ಳದ್ದು.

ನಿಜ. ಅವನು ಹೇಳಿರುವುದು ಬಹು ನಿಜವಾದ ಸಂಗತಿ. ಅದರ ಬಗ್ಗೆ ನಾನು ನನ್ನ ಜೀವನದಲ್ಲಿಯೇ ಸಾಕ್ಷಿ ಕೊಡಬಲ್ಲೆ.

ಸೊಂಟವನ್ನು ಹಿಡಿದು, ಕುತ್ತಿಗೆಯನ್ನು ನೇರವಾಗಿ ನಿಲ್ಲಿಸಿಕೊಂಡು ಗಂಭೀರವಾಗಿ ಉಡುಪನ್ನು ಧರಿಸಿ, ಓಡಾಡುತ್ತಿರಬಹುದು; ಇಲ್ಲವೇ ಅಂಗಿಯನ್ನು ಕಳಚಿ, ಕೆಲಸದಲ್ಲಿ ತೊಡಗಿರಬಹುದು; ಇಲ್ಲದಿದ್ದರೆ ಬಿದ್ದುಕೊಂಡು ಓದುತ್ತಿರಬಹುದು. ಏನೇ ಮಾಡುತ್ತಿರಲಿ ಮನದಲ್ಲಿ ಮಾತ್ರ ಗೊಂದಲವಿದ್ದರೆ, ಚಿತ್ತದಲ್ಲಿ ಶಾಂತಿಯಿಲ್ಲದಿದ್ದರೆ, ನಡೆದು ಹೋದ ವಿಷಯದಲ್ಲಿ ನಿಶ್ಚಿತವಾದ ವಿಶ್ವಾಸವಿಲ್ಲದಿದ್ದರೆ, ಹ್ಯೂಗೋವಿನ ಹೇಳಿಕೆಯಂತೆ ಮನಸ್ಸು ಮೊಣಕಾಲೂರಿ ಭಿಕ್ಷೆ ಬೇಡುತ್ತಿರುವುದು ನಿಜ.

ಇದನ್ನು ಅಡಗಿಸಿ, ನಮ್ಮನ್ನೇ ಮೋಸಮಾಡಲು, ಯತ್ನಿಸಿದರೆ, ಆ ಪ್ರಯತ್ನವೆಲ್ಲವೂ ವಿಫಲ. ವೃಥಾಶ್ರಮ. ಅಡಗುವುದು ಹೋಗಿ ಸಹಸ್ರ ಶಿರನಾದ ಶೇಷನಂತೆ ತಲೆಯೆತ್ತುವುದು. ಮಹಿರಾವಣನ ರಕ್ತ ಬಿಂದುವಿನಂತೆ ಪುಟವರಿಸಿ, ಜೀವಕಳೆತುಂಬಿ ಕುಣಿಯಲಾರಂಭಿಸುವುದು.

ಈ ಸ್ಥಿತಿಯಿಂದ ಪಾರಾಗುವುದು ದುಸ್ಸಾಧ್ಯವಾದ ಕೆಲಸ.

ಹ್ಯೂಗೋವೇ ಹೇಳುವಂತೆ ದೇಹದಮೇಲೆ ಆದ ಗಾಯಗಳು ಮಾಗಿ, ಕಾಣದಾಗಬಹುದು. ಆದರೆ ಆತ್ಮದ ಮೇಲೆ ಆದ ಗಾಯಗಳು ಮಾತ್ರ ಸತತವಾಗಿ, ಅಜಸ್ರವಾಗಿ ರಕ್ತವನ್ನು ಸುರಿಸುವುವು; ಆ ಹುಣ್ಣುಗಳು ಮಾತ್ರ ಎಂದಿಗೂ ಮಾಗವು.

ಹಿಮಶ್ರೇಣಿಯಿಂದ ಹೊರಬಿದ್ದು, ಜೀವನದಿಗಳಾಗಿ, ಮೈದಾನಗಳಲ್ಲಿ ತೀವ್ರವಾಗಿ ಪ್ರವಹಿಸುವ ನದಿಗಳಂತೆ ಅವು ಸದಾ ತೊಂದರೆ ಕೊಡುತ್ತಿರುವುವು.

ಅವುಗಳಿಂದ ಮನಸ್ಸುನೊಂದು ಬೇಗುದಿಕೊಂಡು, ಸದಾ ಮಿಡುಕುತ್ತಿರುವುದು. ಈ ಕಾವಿನಿಂದ ಹೊರಗಾಗಲು ಮಾನವನಿಗೆ ಮೀರಿದ ಕೆಲಸ.

ಒಂದು ಸಾರಿ ನಾನು ಕೆಲಸವನ್ನು ಮಾಡಿಬಿಟ್ಟೆ. ಅದು ತಪ್ಪೋ ಸರಿಯೋ ನಾನು ಆಗ ಹೇಳಲಾರದವನಾಗಿದ್ದೆ. ಈಗಲೂ ಸಾಧ್ಯವಿಲ್ಲ, ಅದರ ಬಗ್ಗೆ ನಿರ್ಣಯವಾದರೆ ನನ್ನ ಮನಸ್ಸಿನಲ್ಲಿ ಆಗಾಗ ಬರುವ ಭಯಂಕರವಾದ ನೋವು ಮಾಯವಾಗಬಹುದು. ಅದು ಸಾಧ್ಯವಾದರೆ ಪ್ರಾಯಶಃ ದಮನವಾಗಬಹುದು.

ನಾನು ಮಾಡಿದುದು ಸರಿಯೆಂದು ಯಾರಾದರೂ ಹೇಳಿದರೆ ನನಗೆ ಈ ಯೋಜನೆಯು ದೂರವಾಗುವುದು. ಈ ದುಗುಡವು ಬಗೆ ಹರಿಯುವುದು.

ನನ್ನ ಮನಸ್ಸಿನಲ್ಲಿಯೇ ಎಷ್ಟೋ ಸಾರಿ, ಬಹುಸಾರಿ ನಾನು ಮಾಡಿದುದು ಸರಿಯೆಂದು ತೋರುವುದು. ಮರುಕ್ಷಣದಲ್ಲಿಯೇ ಸರಿಯಲ್ಲ ವೆಂದು ಅರಿವಾಗಿ ಪುನಃ ಮೊದಲಿನ ಗೊಂದಲದ ಸ್ಥಿತಿಯಲ್ಲಿ ಬೀಳುವೆ.

ಹಾಳುಮನಸ್ಸು ಕೋರ್ಟಿನ ಲಾಯರಿಯಂತೆ, ನ್ಯಾಯಾಧಿಪತಿ ಯಂತೆ ಇದ್ದರೆ ಬಹು ಚೆನ್ನಾಗಿರುತ್ತಿತ್ತು. ಒಂದಲ್ಲ ಒಂದು ಕಾನೂ ನನ್ನು ಹೊರಸೆಳದು, ಅದರ ತೀರ್ಪನ್ನು ನನ್ನ ಕಡೆಗೆಳೆಯಬಹು ದಾಗಿತ್ತು. ಆದರೆ ಮನಸ್ಸಿನಲ್ಲಿ ಈ ಬಗೆಯ ಕಾರ್ಯಪರಂಪರೆಗಳು ನಡೆಯುವುದಿಲ್ಲ.

ಹೋಗಲಿ, ಅದು ಪುರೋಹಿತನಂತೆ ಇದ್ದರೂ ನನಗೆ ಚಿತ್ತಶಾಂತಿಯು ಲಭಿಸುತ್ತಿತ್ತು. ಕೋಪಗೊಂಡಿರುವ ಸರಿಯಾಗಿಲ್ಲದ ಗ್ರಹಕ್ಕೆ ಶಾಂತಿ ಯನ್ನು ಮಾಡಿಸಿ, ಪುರೋಹಿತನು, ದಕ್ಷಿಣೆಯನ್ನು ಸಂಪಾದಿಸಿ, ನಮಗೆ ಪ್ರಾಯಶ್ಚಿತ್ತವನ್ನು ಮಾಡಿಸುವನು. ಆದರೆ ನನಗೆ ಇದು ಸಾಧ್ಯವಿಲ್ಲ. ಇಲ್ಲಿ ಗ್ರಹವೂ ನಾನೆ, ಶಾಂತಿಯಜ್ಞದ ಇಂಧನವು ನಾನೇ. ಪುರೋ ಹಿತನೂ ನಾನೆ ಪೌರೋಹಿತ್ಯದ ಕಾರ್ಮಿಕ ಫಲವೂ ದುಸ್ಸಾಧ್ಯ.

ಒಂದೊಂದು ಸಾರಿ ಭಾಸವಾಗುವುದು. ನೆನಪು, ಮನಸ್ಸು, ಚಿಕಿತ್ಸಕ ನಂತೆ ಇದ್ದದ್ದಾದರೆ ಬಹಳ ಅನುಕೂಲವಾಗುತ್ತಿತ್ತು. ಕೆಟ್ಟ ಭಾಗವು ಇರಬಹುದಾಗಿದ್ದಿತು. ಆದರೆ ಕ್ಲೋರೋಫಾರಂ ಕೊಟ್ಟು ಅದನ್ನು

ಕಿತ್ತೊಗೆದು, ಹುಣ್ಣು ಆರಲು ಔಷಧ ಹಾಕಬಹುದಿತ್ತು. ಇಲ್ಲ, ಇಲ್ಲ. ಇದು ನನ್ನಿಂದ ಆಗದ ಕೆಲಸ.

ರೋಗವೂ ನನ್ನ ಮನಸ್ಸಿನಲ್ಲಿರುವುದು. ಚಿಕಿತ್ಸೆಯ ಸಾಧನದ ಸಂಗ್ರಹವೂ ಅಲ್ಲಿಯೇ ಚಿಕಿತ್ಸಕನ ಕೌಶಲ್ಯವೂ ಅಲ್ಲಿಯೇ.

ಎಲ್ಲದರ ಮೂಲವೂ ಅಲ್ಲಿಯೇ ಇರುವುದು. ಮೂಲಕಾರಣವನ್ನು ಕಿತ್ತೊಗೆಯುವುದು. ಮಾನವರ ಸಾಹಸಕ್ಕೆ ಈಡಾಗದ ಮಹಾಕಾರ್ಯ.

ಅದರಲ್ಲಿಯೂ ನಾನು ಒಬ್ಬ ಕ್ಷುದ್ರ, ಕ್ಷುಲ್ಲಕಮನುಷ್ಯ.

ಇದೆಲ್ಲವನ್ನೂ ಜ್ಞಾಪಕಕ್ಕೆ ತಂದುಕೊಂಡರೆ ಮೈನಡುಗಿ, ಬಹು ಭೀತಿಯಾಗುವುದು. ಮಾಡಿದ ಕೆಲಸವಾದರೂ ಯಾರೂ ಮಾಡದಿರುವುದಿಲ್ಲ. ಅನೇಕ ಸಾರಿ, ಅನೇಕರು, ಬುದ್ಧಿಯು ಮಂದವಾಗಿ ನನ್ನ ಹಾಗೆಯೇ ಮಾಡಿರುತ್ತಾರೆ. ಆದರೆ ಸೂಕ್ಷ್ಮ ಸ್ವಭಾವವಿದ್ದು-ಕೋಪ ಕ್ಷುಬ್ಧವಾದ, ಮೃದುವಾದ ಹೃದಯವಿದ್ದರೆ ಆವರಪಾಡು ಯಾರಿಗೂ ಬೇಡ. ಹತ್ಯಾಪಾತಕನು ಅವರಿಗಿಂತಲೂ ಮಹಾತ್ಮ. ಪುಣ್ಯಾತ್ಮ.

ಕಾರಣವಿಷ್ಟೆ. ಅವನ ಮನಸ್ಸಿನಲ್ಲಿ ಅಶಾಂತಿಯಿರುವುದಿಲ್ಲ. ತನ್ನ ಕೆಲಸದಲ್ಲಿಯೇ ಸಂದೇಹವಿರುವುದಿಲ್ಲ. ಆಗಿಹೋದುದರ ವಿಷಯದಲ್ಲಿ ಪಶ್ಚಾತ್ತಾಪವಿರುವುದಿಲ್ಲ. ಪ್ರಾಯಶ್ಚಿತ್ತದ ಭಾವನೆಯಿರುವುದಿಲ್ಲ.

ಆದರೆ ನನ್ನ ಮನಸ್ಸಿನಲ್ಲಿ, ಅದರಲ್ಲ ನಾನು ಒಂಟಿಯಿರುವಾಗ ನನ್ನ ಕಾರ್ಯವು ಕಣ್ಣಿಗೆ ಕಟ್ಟಿದಂತೆ ಆಗುವುದು. ಆದರ ಪರಿಣಾಮದ ಯೋಗ್ಯತೆಯ ಬಗ್ಗೆ ವಿಪರೀತವಾದ ಶಂಕೆಯು ಉತ್ಪನ್ನವಾಗಿ, ನನ್ನ ಕೆಲಸಗಳನ್ನು ಹಾಳುಮಾಡುವುದು, ಜೀವನವನ್ನು ನರಕದಲ್ಲ ದೂಡ್ಸುವುದು.

ಗರುಡಪುರಾಣದ ಶಿಕ್ಷೆಗಳು ನನಗಾದರೂ ಚಿಂತೆಯಿಲ್ಲ. ವೈತರಣಿಯ ನರಕದ ದರ್ಶನವಾದರೂ ಅಂಜಿಕೆಯಿಲ್ಲ ನಾನು ಮಾಡಿದುದು ತಪ್ಪು ಎಂಬ ಭಾವನೆಯು ಅಡಗಿ, ಹುಟ್ಟಿಲ್ಲದೆ ಹೋದರೆ ನಾನು ಅತಿಶಯ ಭಾಗ್ಯಶಾಲಿ. ಆದರೆ — — — — —

ನಾನೂ ಸೀತೆಯೂ ಆಡಿ ಕೂಡಿದವರು. ಆವಳಿಗೂ ನನಗೂ ನಾಲ್ಕೈದು ವರ್ಷ ವ್ಯತ್ಯಾಸ. ನಾನೂ ವಯಸ್ಸಿಗೆ ಬರುತ್ತಿದ್ದ ಹುಡುಗ. ಆವಳೂ ಸ್ತ್ರೀಯಾಗಲು ಹವಣಿಸುತ್ತಿದ್ದ ಪ್ರಮದೆ.

ನಮ್ಮಲ್ಲಿ ಬಹಳ ಅನ್ಯೋನ್ಯವಾದ, ಅಗಾಧವಾದ ಪ್ರೇಮ ವಿಶ್ವಾಸಗಳಿದ್ದವು. ನಾವು ಇಬ್ಬರೂ ಯಾವಾಗಲೂ ಕೂಡಿಯೇ ಇರುತ್ತಿದ್ದೆವು.

ನೆರೆಹೊರೆಯವರು ನಮ್ಮ ಈ ಸ್ನೇಹವನ್ನು ನೋಡಿ "ಜತೆ ಸರಿಯಾಗಿ ಕೂಡಿದೆ. ಇಬ್ಬರನ್ನೂ ಒಟ್ಟುಗೂಡಿಸಿ ಕಂಕಣ ಕಟ್ಟಿದರೆ ಬಹಳ ಚೆನ್ನಾಗಿರುತ್ತದೆ." ಎಂದು ಹೇಳುತ್ತಿದ್ದರು.

ಇದರಿಂದ ನಮ್ಮಿಬ್ಬರಿಗೂ ನಾಚಿಕೆಯಾಗುತ್ತಿತ್ತು. ಸಂಗಡಲೇ ಹೇಳಲಾರದ, ಹಿಡಿಸಲಾರದ ಸಂತಾಪ. ಅವರಿಗೆ ಉತ್ತರ ಕೊಡಬೇಕೆಂದು ಯೋಚಿಸುತ್ತಿದ್ದೆವು. ಆದರೆ ಹಾಗೆಯೇ ಅಂಜಿಕೊಂಡು ತೆಪ್ಪಗಿರುತ್ತಿದ್ದೆವು.

ನಾನು, ಸೀತೆ ಜತೆಯಲ್ಲಿದ್ದರೆ, ಮದುವೆ ಮಾಡಿಕೊಂಡರೆ, ಬಿಟ್ಟರೆ ಏನು ಮಾಡಿದರೆ ತಾನೆ ಇದರಗೊಡವೆ ಬೇರೆಯವರಿಗೆ ಯಾಕೆ? ಎಂದು ನಮ್ಮ ಭಾವನೆ.

ಆದರೆ ಮಾತ್ರ ನಮ್ಮಲ್ಲಿ ಆರೀತಿಯ ಪ್ರೇಮವಿರಲಿಲ್ಲ. ನಮಗೆ ತಿಳಿದಿದ್ದು ಇಷ್ಟೇ. ನಾವು ಒಟ್ಟಿಗೆ ಬೆಳೆದವರು. ಇಬ್ಬರೂ ಸ್ನೇಹಿತರು.

ಗಂಡು ಹೆಣ್ಣಿನ ಭಾವನೆಯಿರಲಿಲ್ಲ; ಪ್ರಣಯದ ಸೋಂಕು ಇರಲಿಲ್ಲ.

ನಾವು ಸ್ನೇಹಿತರು ಅಷ್ಟೆ. ಸಮೀಪ ಬಂಧುಗಳು. ಅದರಿಂದ ಹೊರಗಿರುವ ಪ್ರಪಂಚದ ಕಡೆ ನಮ್ಮ ಮನವೇ ಇರುತ್ತಿರಲಿಲ್ಲ.

ಆದರೆ ಈಗ ಮನವು ನಿಸರ್ಗಕ್ಕೆ ಇದ್ದಿತ್ತು. ನಮ್ಮ ಪ್ರಕೃತಿಯ ಜೀವನಕ್ಕೆ ಗೋಚರವಾಗಿತ್ತು. ನಮ್ಮ ಬುದ್ಧಿ ಜೀವನಕ್ಕೆ ಮಾತ್ರ ತಿಳಿದಿರಲಿಲ್ಲ.

ಬಲೆಯಲ್ಲಿ ಬಿದ್ದಿದ್ದರೂ ಅದರ ಅರಿವಿಲ್ಲದ ಮೀನುಗಳಂತೆ ನಾವು ಜೀವನಸಾಗರದಲ್ಲಿ, ನಲಿದು ಹಾರಾಡುತ್ತಿದ್ದೆವು.

ಒಂದು ದಿನ ಸಂಜೆ ನನಗೆ ಟೀ ಕುಡಿಯಬೇಕೆಂದು ಮನಸ್ಸು ಬಂದಿತು. ಅಲ್ಲಿ ಇಲ್ಲಿ ಅಲೆದಾಡಿ ಬಂದುದ್ದರಿಂದ ಈ ಆಶೆಯು ಹುಟ್ಟಿರಬಹುದು.

ಸೀತೆಯಲ್ಲಿಗೆ ಹೋಗಿ ಟೀ ಬೇಕೆಂದು ಕೇಳಿದೆ. ಅದಕ್ಕೆ ಅವಳು ಮಾತಿಲ್ಲದೆ ಒಳಗೆ ಹೋಗಿ ಒಂದು 'ಕೆಟಲ್' ನಲ್ಲಿ ಟೀ ಹಾಕಿಕೊಂಡು ಒಂದೆರಡು ಲೋಟಗಳನ್ನು ಹಿಡಿದುಕೊಂಡು ತೋಟದೊಳಗೆ ಬಂದಳು.

ನಾವು ಅನೇಕ ಸಾರಿ ಹೀಗೆ ತೋಟದಲ್ಲಿ ಕುಳಿತು ಟೀ ಕುಡಿದಿದ್ದೆವು.

ಆಗ ಸಂಜೆಯವೇಳೆ. ಮುಳುಗುತ್ತಿದ್ದ ಸೂರ್ಯರಶ್ಮಿಗಳು ಮರದ ಕೊಂಬೆಯ ಮೇಲೆ ಬಿದ್ದು ಒಂದು ಅಪೂರ್ವ ಕಳೆಯನ್ನು ಕೊಡುತ್ತಿದ್ದವು. ಆ ಕಿರಣಗಳು ಸೀತೆಯ ಮೇಲೆ ಬಿದ್ದವು.

ಆಗ ನಾನು ಸೀತೆಯನ್ನು— ನಿಜವಾದ ಸೀತೆಯನ್ನು ಕಂಡೆ. ಅವಳು ಎಂದೂ ಹಾಗೆ ನನ್ನ ಮನಸ್ಸಿಗೆ ಕಾಣಬಂದಿರಲಿಲ್ಲ.

ಸೀತೆಯು ಬಹುಮುದ್ದಾದ ಹೆಣ್ಣು. ಉದ್ದವಾದ ಕೈಕಾಲುಗಳು. ಬಳುಕುತ್ತಿರುವ ಮೈಕಟ್ಟು. ಅವಳ ಮುಖದ ಸೌಂದರ್ಯವೇ ಒಂದು ಬಗೆಯ ವರ್ಣನಾತೀತವಾದದು. ಅವಳ ಮೈ ಬಣ್ಣ. ಅಂತಹ ಮೈಬಣ್ಣವನ್ನು ನಾನು ಎಲ್ಲಿಯೂ ನೋಡಿಲ್ಲ, ನೋಡುವುದೂ ಇಲ್ಲ.

ಆದರೆ ಸೂರ್ಯಕಿರಣಗಳಿಂದ ಕಳೆಯೇರಿ ಶೋಭಿಸುತ್ತಿದ್ದ ಸೀತೆಯು ನನ್ನ ಪರಿಚಯ ನಿತ್ಯದ ಸೀತೆಯಾಗಿರಲಿಲ್ಲ. ಅವಳು ಬೇರೆಯ ಸೀತೆ.

ಅವಳೀಗ ಜ್ಯೋತ್ಸ್ನಾಮಯಿಯಾದ ಸ್ನಿಗ್ಧಮೂರ್ತಿಯಾದ ಸೀತೆ. ನನ್ನ ಮನಸ್ಸಿನಲ್ಲಿ ಸೌಂದರ್ಯದ ಗಣಿಯಾಗಿ, ಮರೆಯಾಗಿ ಈಗ ಮೈಗೊಂಡು ನನ್ನ ಕಣ್ಣಮುಂದೆ ನಲಿಯುತ್ತಿದ್ದ ಸ್ತ್ರೀರತ್ನ.

ಅವಳ ಆ ಅಪೂರ್ವ ಸೌಂದರ್ಯವನ್ನು ಹೇಳಿದರೆ ಹೊರಗಿನ ವರಿಗೆ ತಿಳಿಯುವುದಿಲ್ಲ ಸೌಂದರ್ಯದ ಅರಿವು ಕೇವಲ ವ್ಯಕ್ತಿಗತ ವಾದುದು. ಅದರಲ್ಲಿಯೂ ಭೌತಿಕವಾದ, ದೈಹಿಕವಾದ ಸೌಂದರ್ಯದ ಭಾವನೆಯು ಹಠಾತ್ತಾಗಿ ಮನಸ್ಸಿನಲ್ಲಿ ಪ್ರವೇಶಮಾಡಿ, ಕಾಲದ ವಿಳಂಬ ವಿಲ್ಲದೆ ಪೂರ್ಣವಾಗಿ ಚಿತ್ತವನ್ನು ಅಪಹರಿಸುತ್ತದೆ. ಒಂದೇ ಒಂದು ಕ್ಷಣದಲ್ಲಿ ಈ ಮಾರ್ಪಾಡು ಆಗಿ ಹೋಗುತ್ತದೆ.

ಹಿಂದೆ ಇದ್ದ ಪ್ರಪಂಚದ ಧ್ಯಾನಕ್ಕೂ ಪ್ರಸ್ತುತದಲ್ಲಿ ಬರುವ ಪ್ರಪಂಚದ ಧ್ಯಾನಕ್ಕೂ ಇರುವ ವ್ಯತ್ಯಾಸವೆಂದರೆ ಅಮಾವಾಸ್ಯೆ ಪೌರ್ಣಿಮೆಗಳಂತೆ.

ಈ ಜ್ಞಾನದ ಸಂಗಡಲೇ ಇತರ ಭಾವನೆಗಳು ಬದಿಗೊತ್ತಿ ಹೋಗುವುವು. ಅವುಗಳು ಮೋಹಿನಿಯ ಕೈಯಲ್ಲಿ ಸಿಕ್ಕಿಬಿದ್ದ ಭಸ್ಮಾ ಸುರನಂತೆ ಆಗಿಹೋಗುವುವು.

ಹಿಂದಿನ ಭಾವನೆಗಳು ವಿನಾಶವಾಗಿ ಒಂದೇ ಒಂದು ಭಾವನೆಯು ಬಲವಾಗಿ ನನ್ನ ಹೃದಯದಲ್ಲಿ ಮೂಡಿತು.

ಸೀತೆಯನ್ನು ಒಂದು ಸಾರಿ ತಲೆಯೆತ್ತಿ ಪೂರ್ತಿಯಾಗಿ ಆಪಾದ ಮಸ್ತಕವೂ ನೋಡಿದೆ. ನೋಡಿ, ಅವಳ ಕಣ್ಣುಗಳನ್ನು ನೋಡತೊಡ ಗಿದೆ.

ನನ್ನ ಮನಸ್ಸಿನಲ್ಲಿದ್ದ ಭಾವನೆಯು ಬಾಹ್ಯದಲ್ಲಿ ಹೊರಬಿದ್ದಿತು.

ಸೀತೆಯನ್ನು ಬಾರಿ ಸೆಳೆದು ಒಂದು ಸಾರಿ ಅವಳ ಕೆಂದುಟಿ ಗಳನ್ನು ಮುತ್ತಿಟ್ಟೆ.

ಆ ಚುಂಬನದ ಸವಿ, ಮಾಧುರ್ಯವು ನನ್ನ ಜೀವನದ ಒಂದು ಹಿರಿದಾದ ಅನುಭವ.

ಸೀತೆಗೆ ಈ ವರ್ತನೆಯು ಅರ್ಥವಾಗಲಿಲ್ಲ. ನಾನು ಹೀಗೆ ಮಾಡು ವೆನೆಂದು ಅವಳು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಆದುದರಿಂದ ನನ್ನ ಚುಂಬನವನ್ನು ಬೇಕೆನ್ನಲೂ, ಬೇಡವೆನ್ನಲೂ ಅವಳಿಗೆ ಅವಕಾಶ ವಿರಲಿಲ್ಲ.

ಹಿಡಿದಿದ್ದವಳನ್ನು ಇನ್ನೊಂದುಸಾರಿ ಮುತ್ತಿಡಬೇಕೆಂದು ಹಂಬಲಿಸಿದೆ. ಆದರೆ ಅಷ್ಟರಲ್ಲಿಯೇ ಸ್ವಾಭಾವಿಕವಾಗಿ ಕಣ್ಣುಗಳು ಅವಳ ಕಣ್ಣುಗಳ ಕಡೆಗೆ ಹೋದವು.

ಇದೇನು ಅನರ್ಥ! ನನ್ನ ಕೈಯಲ್ಲಿ ಬಂಧಿಸಿದ್ದವಳು ನನ್ನ ಪರಿಚಯದ ಸೀತೆಯಲ್ಲ. ನನ್ನ ಮನಸ್ಸಿನಲ್ಲಿ ಮಿಂಚಿನಂತೆ ಹೊಳೆದ ಸುವರ್ಣಪ್ರತಿಮೆಯಾದ ಸೀತೆಯಲ್ಲ.

ಈ ಸೀತೆಯ ಪರಿಚಯವು ನನಗಿರಲಿಲ್ಲ.

ಅದೇ ರೂಪು, ಅದೇ ಮೈಬಣ್ಣ, ಅದೇ ಬಳುಕುತ್ತಿದ್ದ ಲತೆಯಂತಿದ್ದ ದೇಹ. ಆದರೆ ಇವಳು ಭೌತಿಕಮೂರ್ತಿ

ಅವಳ ಕಣ್ಣುಗಳಲ್ಲಿದ್ದ ನೋಟವನ್ನು ನಾನು ಎಂದೂ ನೋಡಿರಲಿಲ್ಲ.

ಎಂದಿಗೂ ನೋಡಬಯಸುವುದಿಲ್ಲ.

ಆಡುತ್ತಿರುವ ಪಾರಿವಾಳದ ಮರಿಗಳ ಗುಂಪಿನಲ್ಲಿ ಬೆಕ್ಕಿನ ಪ್ರವೇಶವಾದರೆ ಅಲ್ಲಿ ಆಗುವ ಚೆಲ್ಲಾಪಿಲ್ಲಿಯ ಪರಿಸ್ಥಿತಿಯನ್ನು ನೀವು ನೋಡಿರಬಹುದು.

ಆನಂದದಿಂದ ಹಾಡುತ್ತ ಹೊರಟಿರುವ ಪಥಿಕನ ದಾರಿಯಲ್ಲಿ ಕಾಳಸರ್ಪವು ಇದ್ದದು ಅವನಿಗೆ ತಿಳಿದುಬಂದರೆ ಅವನ ಮುಖದಲ್ಲಿ ಬರುವ ಭಾವನೆಯು ನಿಮಗೆ ತಿಳಿದಿರಬಹುದು.

ಕಾರಿರುಳ ರಾತ್ರಿಯಲ್ಲಿ ಕಾರ್ಮುಗಿಲ ಪಡೆಯಲ್ಲಿ ಮಿಂಚೊಂದು ಸುಳಿದು ತಟ್ಟನೆ ಮಾಯವಾದರೆ ಪಾಂಥನ ಚಿತ್ತಭ್ರಮೆಯ ನೋಟದ ಪರಿಚಯವು ನಿಮಗಿರಬಹುದು.

ಆದರೆ ಈ ಎಲ್ಲ ನೋಟಗಳಿಗಿಂತಲೂ ಅಧಿಕವಾದ, ಭೀತಿಪೂರ್ಣವಾದ, ತಿಳಿಗೇಡಿಯಾದ ನೋಟವು ಸೀತೆಯ ನಯನಗಳಲ್ಲಿ ಅಡಗಿ ನನ್ನನ್ನು ಒಂದೇ ದೃಷ್ಟಿಯಿಂದ ನೋಡುತ್ತಿತ್ತು.

ಅವಳಲ್ಲಿ ಹಿಂದಿನ ಕ್ಷಣದಲ್ಲಿ ಕಂಡುಬಂದಿದ್ದ ಜ್ಯೋತ್ಸ್ನೆಯು ಇರುವದಿಲ್ಲ; ಸ್ನಿಗ್ಧತೆಯೂ ತೋರಲಿಲ್ಲ. ಸ್ಫುರದ್ರೂಪು ಕಾಣಬರಲಿಲ್ಲ.

ನಾನು ಅವಳನ್ನು ಇನ್ನೊಂದು ಸಾರಿ ಮುತ್ತಿಡಲಿಲ್ಲ.

ಹಾಗೆಯೇ ಹಿಡಿದಿದ್ದ ಕೈಯನ್ನು ಬಿಟ್ಟು ಬಿಟ್ಟೆ.

ಅವಳೂ ನನ್ನನ್ನು ಪ್ರಶ್ನೆಮಾಡಲಿಲ್ಲ. ದೂರಲಿಲ್ಲ. ಸೀತೆಯು ಪುನಃ ಆ ವೇಳೆಯಲ್ಲಿ ನನ್ನ ಬಳಿಗೆ ಬರಲಿಲ್ಲ.

'ಕೆಟಿಲ್'ನ್ನು ಅಲ್ಲಿಯೇ ಬಿಟ್ಟು ನಿಧಾನವಾಗಿ ಉಟ್ಟಿದ್ದ ಬಟ್ಟೆಯನ್ನು ಸರಿಮಾಡಿಕೊಳ್ಳುತ್ತಾ ಹೊರಟು ಹೋದಳು.

ಹೋಗುತ್ತ ಹೋಗುತ್ತ ತನ್ನ ತುಟಿಗಳನ್ನು ಬಲವಾಗಿ ಜೋರಾಗಿ ಒರಸಿಕೊಂಡಳು.

ಅವಳ ಮೈ ನಡುಗುತ್ತಿದ್ದುದು ನನ್ನ ಹೃದಯಕ್ಕೆ ಗೋಚರಾಯಿತು.

ನಾನು ಟೀಯನ್ನು ಕುಡಿಯಲಿಲ್ಲ. ಅಲ್ಲಿಂದ ಎದ್ದು ಎಲ್ಲಿಗೋ ಹೊರಟುಹೋದೆ.

× × × × ×

ಸೀತೆಯು ಒಂದುವೇಳೆ ನಕ್ಕಿದ್ದರೆ ನನಗೆ ತೊಂದರೆಗೀಡಾಗುತ್ತಿರಲಿಲ್ಲ.

ಸೀತೆಯು ಒಂದುವೇಳೆ ಒಂದು ಏಟನ್ನು ಹೊಡೆದಿದ್ದರೆ ನನಗೆ ತೊಂದರೆಗೀಡಾತ್ತಿರಲಿಲ್ಲ. ಆದರೆ ಅವಳ ಅರ್ಥವಿಹೀನವಾದ, ಭಯಪೂರ್ವಕವಾದ ನೊಂದ ನೋಟವನ್ನು ಮರೆಯಲು ನನ್ನಿಂದ ಸಾಧ್ಯವಾಗದು.

ಆ ನೋವನ್ನು ಹೊರದೂಡಲು ಯಾವುದಾದರೂ ಒಂದು ಯಜ್ಞವಿದ್ದರೆ, ಒಂದು ಹಂಚಿಕೆಯಿದ್ದರೆ, ಅದರ ಬೆಲೆಯು, ಪ್ರಯಾಸವು ಏನೇ ಇರಲಿ ನಾನು ಕೊಡಲು, ಹೊರಲು ಸದಾ ಸನ್ನದ್ಧನು.

ಆದರೆ ಆ ಉಪಾಯವು ಕೈಮಿಂಚಿದ ಯೋಚನೆ.

ಈ ಜಗತ್ತಿನಲ್ಲಿ ಆ ನೊಂದ ನೋಟವನ್ನು ಹೋಗಿಸಲು, ಅದನ್ನು ಸ್ಮೃತಿಪಥದಿಂದ ದೂಡಿ ಮರೆಯಲು ಜೀವವಿರುವವರೆಗೂ ಸಾಧ್ಯವಿಲ್ಲದ ಕಾರ್ಯಭಾರ.

೩

ಪುನಃ ಹತ್ತು ವರ್ಷಗಳು ಕಾಲನ ಗರ್ಭದಲ್ಲಿ ಹುದುಗಿ ಹೋದ ಮೇಲೆ ಅದೇ ತೋಟ, ಅದೇ ಸ್ಥಳ ಆದರೆ ಆ ಸೀತೆಯಿಲ್ಲ; ಆ ಕ್ಷಣಿಕ ವಾದ, ಎಂದೂ ಮರೆಯಲಾಗದ ಆ ಗಂಧವಿಲ್ಲ; ಆ ನೋವಿಲ್ಲ.

ಆಗಿ ಹೋದ ಕಾರ್ಯದ ಭೀಕರವಾದ ನೆನಪು ಮಾತ್ರ ಸ್ಥಿರವಾಗಿ ಉಂಟು.

ಶಾರದೆಯು ಒಳಕ್ಕೆ ಹೋಗಿದ್ದವಳು ಟೀಯನ್ನು ನಮ್ಮಿಬ್ಬರಿಗೂ ತಂದಿದ್ದಳು.

ಅವಳ ಮುಖದಲ್ಲಿ ಅದೇ ಪ್ರಶ್ನೆ. ಟೀ ಬಗ್ಗಿಸುತ್ತಾ ಮೊದಲು ಕೇಳಿದಂತೆ ಪುನಃ ಕೇಳಿದಳು.

“ ಇದೇನು ಈದಿನ ಸೀತೆ, ಹ್ಯಾಗೋ ಮತ್ತು ನಿಮ್ಮ ಯೋಚನೆ ? ”

ಶಾರದೆಯು ಸೀತೆಯನ್ನು ನೋಡಿದ್ದಳು. ಅವಳ ಅನುಪಮ ರೂಪನಿಧಿಯನ್ನು ನೋಡಿ ಆಚ್ಚರಿಗೊಂಡಿದ್ದಳು.

ಅನೇಕಸಾರಿ ಸೀತೆಯನ್ನು ಬಿಟ್ಟು ತನ್ನ ಸಹವಾಸವನ್ನೂ, ಸ್ನೇಹ ವನ್ನು ಏಕೆ ತೋರಿದೆನೆಂದು ನನ್ನ ಮಂದ ಬುದ್ಧಿಯನ್ನು ನಾಚಿಸುತ್ತಿ ದ್ದಳು, ಸೀತೆಗೆ ಇನ್ನೂ ವಿವಾಹವಿಲ್ಲ. ಅದರಿಂದಲೇ ಈ ಹಂಗಿಸುವುದು.

ಅವಳಿಗೆ ಒಳಗೆ ಹುದುಗಿದ್ದ ವಿಚಾರ ಗೊತ್ತಿರಲಿಲ್ಲ. ಎಷ್ಟು ಸ್ವಲ್ಪ ದುದರಲ್ಲಿ ಸ್ಥಾನಪಲ್ಲಟವಾಗಿ ನಿಯತವಾದುದು ಅಳಿದುಹೋಗಿ ಸಂಪ್ರ ದಾಯಬದ್ಧನಲ್ಲದ ನಾನು ಶಾರದೆಯ ಸಹವಾಸವನ್ನು ಒಲಿಸಿದ್ದೆ ನೆಂಬುದು ಅವಳಿಗೆ ಅರಿಯದ ವಿಷಯ.

ಶಾರದೆಗೆ ನಿಜವಾದ ಸಂಗತಿಯನ್ನು ಹೇಳಿ ಮನದಲ್ಲಿದ್ದ ದುಗುಡ ವನ್ನು ಪರಿಹಾರ ಮಾಡಿಕೊಳ್ಳಬೇಕೆಂದು ಹಲವು ಸಾರಿ ಯೋಚಿಸಿದ್ದೆ. ಯೋಚನೆಯ ಸಂಗಡ ಮತ್ತೊಂದು ಭಾವನೆಯು ಬಂದು ಅವಳು

ಹೆಂಗುಸು, ಹೇಳಬಾರದೆಂದೂ, ಅದರಲ್ಲಿಯೂ ಸೀತೆಯ ವಿಷಯವನ್ನು ಅವಳಿಗೆ ತಿಳಿಸಬಾರದೆಂದೂ ನಿರ್ಧರಮಾಡಿಕೊಂಡೆ.

ಆದರೆ ಶಾರದೆಯ ಪ್ರಶ್ನೆಗೆ ಸರಿಯಾದ ಮಾತು ನುಡಿದೆ.

“ ಸೀತೆ ಇನ್ನೇನು ಬರುವ ಹೊತ್ತಾಯಿತು. ಆದುದರಿಂದ ಈ ಎಲ್ಲಾ ಯೋಚನೆ.”

ಒಂದು ಹೆಣ್ಣಿನ ಸಲುವಾಗಿ ಇನ್ನೊಂದು ಹೆಣ್ಣಿಗೆ ಸುಳ್ಳು ಹೇಳುವುದು ಇದು ಪುರುಷರ ಜೀವನದಲ್ಲಿ ಒಂದು ಮುಖ್ಯವಾದ ಪ್ರಕರಣ.

ಶಾರದೆಯೂ ಹೆಣ್ಣು, ಸೀತೆಯೂ ಹೆಣ್ಣು-ನಾನು ಸುಳ್ಳಿನ ಬೊಂತೆ.

ಆದರೆ ವಿಧಿಯಿಲ್ಲ.

ಶಾರದೆಯೂ ಉತ್ಸುಕತೆಯಿಂದ “ ಸೀತೆ ಹಾಗಾದರೆ ಬರುತ್ತಾಳೆ” ಎಂದು ನುಡಿದಳು.

ದೂರದಲ್ಲಿ ಸೀತೆಯೂ ನಿಜವಾಗಿಯೂ ಬರುತ್ತಿದ್ದಳು. ಅವಳನ್ನು ನೋಡಿದೆ ಹತ್ತು ವರ್ಷಗಳ ನಂತರ.

ಅದೇ ರೂಪಲಾವಣ್ಯಮಯಿಯಾಗಿದ್ದ ಸೀತೆ ಮೈ ಬಣ್ಣ ಇನ್ನೂ ಇಂಬುಗೂಡಿತ್ತು. ಆವಳು ಈಗ ಸಂಪೂರ್ಣವಾಗಿ ವಿಕಸಿಸಿದ್ದ ಹೂ. ಪ್ರಾತಃಕಾಲದ ಶುಕ್ಲ ನಕ್ಷತ್ರದಂತೆ ಕಾಣಬರುತ್ತಿದ್ದಳು.

ಹತ್ತಿರಕ್ಕೆ ಬಂದವಳು ನನ್ನ ಮುಖವನ್ನು ನೋಡಿದಳು. ಕಿರುನಗೆಯೊಂದು ಮಿಂಚಿನಂತೆ, ಚಿಗುರಿಯಂತೆ ಹಾರಿ ಹೋಯಿತು.

ನನ್ನ ಎದುರಿಗೆ ಇರುವವರು ಸೀತೆ ಮತ್ತು ಶಾರದೆ.

ಅಲ್ಲಿರಲು ನನ್ನಿಂದ ಸಾಧ್ಯವಾಗಲಿಲ್ಲ.

“ ಬಾ ಸೀತೆ, ಕೂತುಕೋ-ನಾನು ಈಗ ಬರುತ್ತೇನೆ ” ಎಂದು ಪಲಾಯನ ಮಾಡಿದೆ.

ಆ ನೋಟ ನೆನಪಿಗೆ ಬಂದು ಅರಚಿಕೊಳ್ಳಬೇಕೆಂಬ ಉತ್ಕಟವಾದ ಇಚ್ಛೆ.

ಆದರೆ ಸಮಾಜ ಜೀವಿಯಾದ ನಾನು ಹಾಗೆ ಮಾಡುವಂತಿಲ್ಲ. ಒಂದು ವೇಳೆ ಹಾಗೆ ಮಾಡುವಂತಿದ್ದರೆ—

# ಸಮಸ್ಯೆ

## ೧

ರೋಗಿಯ ಕಡೆ ದಿಟ್ಟಿಸಿ ನೋಡಿದೆ. ಸ್ವಲ್ಪ ಸಂದೇಹವಾಯಿತು. ಕೈಯನ್ನು ಮೆಲ್ಲಗೆ ತೆಗೆದುಕೊಂಡು ನಾಡಿಯನ್ನು ಹಿಡಿದು ನೋಡಿದೆ. ಸಾವಧಾನವಾಗಿ ಹೊಡೆಯುತ್ತಿತ್ತು. ಆದರೂ ಬಹಳ ಹೊತ್ತಿನ ವರೆಗೆ ಬದುಕಿರುವ ಸಂಭವವಿರಲಿಲ್ಲ. ಕೈಯನ್ನು ಹಾಗೆಯೇ ಹೊದಿಕೆಯೊಳಗೆ ಸೇರಿಸಿ, ಮಂಚವನ್ನು ಬಿಟ್ಟು ಕಿಟಕಿಯ ಬಳಿ ಬಂದು ನಿಂತೆ.

ಮುಂದೆ ನೋಡಿದರೆ ಕೈದಿಗಳ ಕೊಠಡಿಗಳು ಹಾಗೂ ಅದಕ್ಕೆ ಮುಂದೆ ತುರಂಗದ ಹೆಬ್ಬಾಗಿಲು. ಒಳಗೆ ಎಲ್ಲೆಡೆಯಲ್ಲೂ ಅಡಗಿದ, ಗುಜುಗುಜು ಶಬ್ದ. ದುಡಿದು ದುಡಿದು ಆಯಾಸಗೊಂಡಿದ್ದ ಕೈದಿಗಳು; ನಿದ್ರಿಸಲು ಯತ್ನಿಸುತ್ತಿದ್ದಂತೆ, ಭಾಸವಾಗುತ್ತಿತ್ತು. ಎಲ್ಲಾ ಕಡೆಗಳಲ್ಲನ್ನೂ ಆವರಿಸಿರುವ ಗೋಡೆಗಳು ನಾಲ್ಕು ಕಡೆಗಳಲ್ಲಿಯೂ ಎತ್ತರವಾಗಿ ಎದ್ದಿದ್ದವು. ಹೊರಗೆ ಬಹು ಸ್ವಲ್ಪ ದೂರದಲ್ಲಿ ವಿಸ್ತಾರವಾದ ಅನಂತವಾದ ಗಂಭೀರ ಸಾಗರ ಎಲ್ಲೆಯಿಲ್ಲದ ನೀಲಜಲರಾಶಿ ವಾಯುವಿನೊಡನೆ ವಿಹರಿಸುತ್ತಿರುವ, ಶೃಂಖಲಾಬದ್ಧವಲ್ಲದ ಜಲಧಿ.

ಒಳಗೆ ಸಮಾಜ ಬಾಹಿರರಾದ, ಬಂದಿಗಳಾದ ನಾವು.

ಪುನಃ ಮಂಚದ ಬಳಿ ಬಂದು ಕುಳಿತೆ. ಬೆಳಿಗ್ಗೆ ಜೈಲಿನ ಡಾಕ್ಟರು ಹೇಳಿದ್ದುದು ಜ್ಞಾಪಕಕ್ಕೆ ಬಂತು. ಅವರು ಹೇಳಿದ್ದರು— ರೋಗಿಯು ರಾತ್ರಿಯ ವರಿವಿಗೂ ಉಳಿಯುವುದಿಲ್ಲವೆಂದು. ಆತನ ಸದೃಢವಾದ ದೇಹದಲ್ಲಿ ಶಕ್ತಿಯಿದ್ದರೂ ರೋಗದಿಂದ ಹೊರಬಿದ್ದು ಆರೋಗ್ಯದಿಂದಿರಬೇಕೆಂಬ ಆಶಯು ಇರಲಿಲ್ಲವೆಂದು ಅವರ ಅಭಿಪ್ರಾಯ.

ಆದರೂ ಅವರ ಶಕ್ತಿಮೀರಿ ಯತ್ನಮಾಡಿದ್ದರು ಆದರೆ ಮನುಷ್ಯನು ಮನುಷ್ಯನಿಗೆ ತೋರುವ ಕಠೋರ ಭಾವವನ್ನು ಹೊರದೂಡಲು ಅವರ ವೈದ್ಯಕಕ್ಕೆ ಹೊರಗಾದುದು. ಅದರ ಪರಿಚಯವು ಅವರಿಗಿರಲಿಲ್ಲ.

ರೋಗಿಯ ಬಳಿ ಕುಳಿತಿದ್ದಂತೆ ಆತನು ಒಂದೆರಡು ದಿನಗಳ ಹಿಂದೆ ಹೇಳಿದ್ದುದು ನೆನಪಿಗೆ ಬಂದಿತು. ಆತನ ಜೀವಿತದ ಕಥಾನಕವು ನನ್ನ ಚಿತ್ತದ ಮುಂದೆ ಮೆರವಣಿಗೆಯಂತೆ ಹಾಯತೊಡಗಿತು. ಆತನ ಮಾತು ಕತೆಗಳು, ಒಂದೊಂದಾಗಿ ನೆನಪಿಗೆ ಬಂದವು.

" – ರಾಯರೆ, ಅನೇಕ ಜನರು ಜೀವನ ಸಮಸ್ಯೆಗೆ ಅರ್ಥವಿದೆ ಯೆಂದು, ವೃತ್ತಿಯುಂಟೆಂದು ಹೇಳುತ್ತಾರೆ; ಸರಿ, ಅವರ ದೃಷ್ಟಿಯಲ್ಲಿ, ಸಂಕುಚಿತ ನೋಟದಲ್ಲಿ ಇದು ಯೋಗ್ಯವಾದುದು. ನೀವು ರಾಜಕೀಯ ಕೈದಿಗಳು. ಆದರೆ ನಾನು ಸಮಾಜದಿಂದ ಶಿಕ್ಷೆಗೆ ಗುರಿಮಾಡಲ್ಪಟ್ಟ ವನು. ನಾನು ಹೊರಗಿದ್ದರೆ ಸಮಾಜಕ್ಕೆ ಕೇಡಾಗಬಹ ದೆಂದು ಅದರ ಭಾವನೆ; ನಂಬುಗೆ.

ಪಿಯರ್ಸನು ಒಂದೆಡೆಯಲ್ಲಿ ಹೀಗೆ ಹೇಳುತ್ತಾನೆ—

'An idea which is not a guide to some action, which does not make a difference to the ultimate behaviour of things or persons is, strictly speaking, meaningless, (ಕ್ರಿಯೆಗೆ ದಾರಿ ತೋರದೆಯೂ ಜನರ ಅಥವಾ ವಸ್ತುಗಳ ಅಂತಿಮ ನಡತೆಗೆ ವಿಭೇದವನ್ನು ತೋರದೆಯೂ ಇರುವ ಭಾವವು ಅರ್ಥರಹಿತವಾದುದು. ಇದನ್ನು ಅವಲಂಬಿಸಿಯೇ ಡಿವೆ, ಜೇಮ್ಸ್, ರಾಯಿಸ್ ಮೊದಲಾದ ವಿದ್ವಾಂಸರು ತಮ್ಮ ಉದ್ಗ್ರಂಥಗಳನ್ನು ಬರೆದಿರುವರು; ಆದರೆ ಅದೇ ಪಿಯರ್ಸನು ಹೇಳುತ್ತಿದ್ದನು— The chance aspects of life, its haphazardness and unpredictability are what we must accept as brute ultimate fact: the orderly and necessary aspects are what we must explain. ಜೀವನದ ಅನಿರೀಕ್ಷಿತ ಸಂಘಟನೆಗಳನ್ನು ಅವುಗಳ ಅವ್ಯವಸ್ಥೆಗಳನ್ನು ಅಂತಿಮ ವಿಷಯ ಗಳೆಂದು ನಾವು ಒಪ್ಪಲೇಬೇಕಾಗುತ್ತದೆ. ಆದರೆ ವ್ಯವಸ್ಥಿತ ಮತ್ತು ಅವಶ್ಯಕ ಸಂಘಟನೆಗಳನ್ನು ನಾವು ವಿಚಾರ ದೃಷ್ಟಿಯಿಂದ ವಿವರಿಸ ಬೇಕಾಗುತ್ತದೆ. )

ಇದರಲ್ಲಿ ಅವನು ಎರಡನೆಯದನ್ನು ಒಪ್ಪಿಕೊಂಡು ಮೊದಲನೆ

ಯದು ಅವನಿಗೆ ಸರಿಯಾಗಿ ಅರ್ಥವಾಗಲಿಲ್ಲ. ಸರಣಿಯಂತೆ ಜೋಡಣೆಯಲ್ಲಿ ಬರುವ ಸಂಘಟನೆಗಳು, ಹಠಾತ್ತಾಗಿ ಆಗಿ ಹೋಗುವ ಕಾರ್ಯಗಳು, ಅರ್ಥವನ್ನು ಊಹಿಸಲಾಗದ ಕೆಲಸಗಳು. ಇವುಗಳಲ್ಲದವು ಮಾನವನ ಜೀವಿತದ ದಿನಗಳು. ಇದನ್ನು ಮರೆಯಲಾಗುವುದಿಲ್ಲ. ನಿಮ್ಮ ಜೀವಿತವನ್ನು ಪರೀಕ್ಷಿಸಿ ನೋಡಿ, ನನ್ನ ಜೀವಿತವನ್ನೂ ನೋಡಿ, ಇದರ ಪರಿಚಯವಾಗುವುದು. ಸಂಗಡಲೇ ಜೇಮ್ಸನ "ಇನ್ನೂ ಪರಿಪಕ್ವವಾಗುತ್ತಿರುವ ಜಗತ್ತೆ" ಎಂಬ ತತ್ವದ ಅರ್ಥವಾಗುವುದು. ಬಹುಮಟ್ಟಿಗೆ ಭೂತಕಾಲವು ವರ್ತಮಾನದಲ್ಲಿ ಏನು ಆಗಬಹುದೆಂದು ಊಹಿಸುತ್ತದೆ. ಹೀಗೆಯೇ ಆಗುವುದೆಂದು ನಿಶ್ಚಿತಮಾಡಿ ಹೇಳಲಾಗುವುದಿಲ್ಲ. ಆದುದರಿಂದಲೇ ದಾರ್ಶನಿಕರು ಮಾನವನಿಗೆ ಕರ್ತವ್ಯದ, ಕರ್ಮದ ಸ್ವಾತಂತ್ರ್ಯವುಂಟೆಂದು ಹೇಳುವರು.

ಆದರೆ ಇಷ್ಟೆಲ್ಲ ನಮ್ಮ ಸಮಾಜಕ್ಕೆ ತಿಳಿಯದು. ಅದರ ಕಟ್ಟಳೆಗಳನ್ನು ಬರೆಯುವವರಿಗೆ ಮೊದಲೇ ತಿಳಿಯದು. ಜೀವಿತದ ಉತ್ಕಂಠಿತವಾದ ದಾಹದ ಅನುಭವವು ಅವರಿಗಿಲ್ಲ. ಇವುಗಳಿಲ್ಲದರ ಪರಿಣಾಮವೇ ನಮ್ಮ ಕುಸಿದುಬಿದ್ದಿರುವ ಇಂದಿನ ಜೀವನ.

ನೀವು ಅಚ್ಚರಿಪಡಬಹುದು — ಕೈದಿಗೆ ಇಷ್ಟೊಂದು ತತ್ವಗಳ ಶಾಸ್ತ್ರಗಳ ಅರ್ಥವು, ದರ್ಶನಗಳ ತಳಹದಿಯು ಹೇಗೆ ತಿಳಿದಿದೆ ಎಂದು. ನಾನು ಹಾರ್ವರ್ಡ್ ವಿಶ್ವವಿದ್ಯಾಲಯದ 'ಡಾಕ್ಟರೇಟ' (Doctorete) ಪಡೆದವನು.

ನಮ್ಮ ತಂದೆ ತಾಯಿಗಳು ಊರು ಬಿಟ್ಟು ನನ್ನ ವಿದ್ಯಾಭ್ಯಾಸಕ್ಕೆಂದು ಧಾರವಾಡಕ್ಕೆ ಬಂದು ನೆಲೆಸಿದರು. ನಮ್ಮಮನೆ .... ಕಡೆಯಲ್ಲಿ. ಆಗ ನನಗೆ ಸುಮಾರು ಹನ್ನೆರಡು ವರುಷ ವಯಸ್ಸು.

ನಮ್ಮ ಮಗ್ಗುಲ ಮನೆಯಲ್ಲಿ ಯಾರೋ ಒಬ್ಬರು ಸಾರಸ್ವತರಿದ್ದರು. ಅವರಿಗೆ ಒಬ್ಬ ಮಗಳಿದ್ದಳು; ಅವಳ ಹೆಸರು ಶಾರದೆ ಎಂದು.

ಶಾರದೆಯೂ ನಾನೂ ಕೂಡಿ ಆಡಿ ಬೆಳೆದೆವು. ಆಗ ನಮಗೆ ಪ್ರಪಂಚ ಜ್ಞಾನವಿರಲಿಲ್ಲ. ಜೀವನದ ಉದ್ದೇಶಗಳಾದರೂ ಎರಡೇ— ಶಾಲೆಗೆ ಹೋಗುವುದು; ಮನೆಗೆ ಬಂದು ಆಡುವುದು.

ದಿನಗಳು ಕಳೆದು ನನಗೆ ಹದಿನೆಂಟು ಇಪ್ಪತ್ತು ವರ್ಷಗಳು ತುಂಬಿದ್ದವು. ಶಾರದೆಗೆ ಸುಮಾರು ಹನ್ನೆರಡು-ಹದಿಮೂರು ಆಗಿರಬಹುದು. ಸ್ವಭಾವಕ್ಕೆ ಅನುಸರಿಸಿ ನಮ್ಮ ಜೀವನದಲ್ಲಿ ಬದಲಾವಣೆ ಆಗುತ್ತಾ ಬಂದಿತು. ಮೊದಲಿನ ವರ್ತನೆಯಲ್ಲಿ ರುಚಿ ಬಾರದೆ ನಮ್ಮ ನಡೆವಳಿಕೆಯು ಬರಬರುತ್ತಾ ಬದಲಾವಣೆಯಾಗುತ್ತಾ ಬಂದಿತು. ಈ ವ್ಯತ್ಯಾಸವು ಸಹಜವಾಗಿ ನಮ್ಮಿಬ್ಬರಿಗೂ ಗೋಚರವಾಯಿತು. ಮೊದ ಮೊದಲು ನಮ್ಮ ಮನೆಯವರುಗಳಿಗೆ ತಿಳಿಯಬರಲಿಲ್ಲ.

ಇದೇ ರೀತಿಯಲ್ಲಿ ಇನ್ನೂ ನಾಲ್ಕು ವರ್ಷಗಳು ಕಳೆದುಹೋದವು. ಆಗ ನಾನು ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ನನ್ನ ಮುಂದಿನ ಮಾರ್ಗವನ್ನು ಆರಿಸಬೇಕಾಗಿತ್ತು. ಆಗ ಶಾರದೆಗೆ ಏರಿಕೆಯ ವಯಸ್ಸು.

ನನ್ನ ಮುಂದಿನ ಮಾರ್ಗವು ತಂದೆಯವರಿಂದ ನಿಶ್ಚಿತವಾಯಿತು. ಅಮೇರಿಕಾಕ್ಕೆ ಹೋಗಿ ದರ್ಶನ ಶಾಸ್ತ್ರಗಳನ್ನು ವ್ಯಾಸಂಗಮಾಡಬೇಕೆಂದು ಗೊತ್ತಾಯಿತು.

ಆಗ ನನ್ನ ಮನಸ್ಸಿನಲ್ಲಿ ಎರಡು ವಿಧವಾದ ಆಶೆಗಳು—ಹೊರಗೆ ಹೋಗಿ ವಿದ್ಯೆಯನ್ನು ಕಲಿತುಬಂದು ಗಣ್ಯನಾಗಬೇಕು; ಶಾರದೆಯಲ್ಲಿ ಬಲವಾದ ಅನುರಾಗ

ಇವೆರಡನ್ನೂ ಹೇಗೆ ಒಟ್ಟಗೂಡಿಸಬೇಕೆಂದು ತಿಳಿಯದೆಯೇ ಶಾರದೆಯನ್ನು ಕೇಳಿದೆ. ಅವಳು ಹೋಗಿಬಾರೆಂದು ಸಲಹೆ ಕೊಟ್ಟಳು. ನನಗಾಗಿ ಅವಿವಾಹಿತಳಾಗಿ ಕಾದಿರುವೆನೆಂದು ವಚನ ಕೊಟ್ಟಳು. ಈ ವಾಗ್ದಾನದಲ್ಲಿ ನಾನು ಭರವಸೆಯನ್ನಿಟ್ಟೆ. ಅವರಲ್ಲ ಕೆಲವು ವೇಳೆಗಳಲ್ಲಿ ಪ್ರೌಢವಿವಾಹವಾಗುತ್ತಿದ್ದುದು ನನಗೆ ತಿಳಿದಿತ್ತು. ನಾನು ಎಲ್ಲರ ಅಪ್ಪಣೆಯನ್ನು ಪಡೆದು, ಅವಳ ಅನುಮತಿಯನ್ನು ಹೊಂದಿ ಪ್ರಯಾಣ ಬೆಳೆಸಿದೆ.

× × × × ×

ಮೂರು ವರ್ಷಗಳನ್ನು ಅಮೇರಿಕಾದಲ್ಲಿ ಕಳೆದು ಪುನಃ ಸ್ವದೇಶಕ್ಕೆ ಮರಳಿ ಬಂದೆ. ಆಗ ನನಗೆ ಹಿಡಿಸಲಾರದಷ್ಟು ಆನಂದ. ಎರಡು ವಿಶ್ವವಿದ್ಯಾಲಯದವರು ನನ್ನ ಪಾಂಡಿತ್ಯಕ್ಕೆ ಮೆಚ್ಚಿ ಪದವಿಗಳನ್ನು ಪಾಲಿಸಿದ್ದರು. ಸರಕಾರದವರು ಕೆಲಸವನ್ನು ಕೊಡುತ್ತೇವೆಂದು ಬರೆದಿದ್ದರು. ಜೀವನವು ಕವಿಯ ಕನಸಿನಂತೆ ಮೃದು ಮಧುರ ಸ್ವಪ್ನವಾಗಿತ್ತು. ಯಾವುದಕ್ಕೂ ನನಗೆ ಕೊರತೆಯಿರಲಿಲ್ಲ. ನನ್ನ ಬಯಕೆಗಳೆಲ್ಲವೂ ನನ್ನ ಕೈಗೂಡಿದವೆಂದು ನನ್ನ ಬಲವತ್ತರವಾದ ಆಶೆ.

ಊರಿಗೆ ಬಂದವನು ಎಲ್ಲರನ್ನೂ ಹೋಗಿ ನೋಡಿದೆ. ಕೊನೆಗೆ ಶಾರದೆಯನ್ನು ನೋಡಬೇಕೆಂದು ಅವರ ಮನೆಗೆ ಹೋದೆ. ಮನೆಯಲ್ಲಿ ಅವಳ ತಾಯಿ ಇದ್ದಳು. ಕುಶಲವಾರ್ತೆಯನ್ನು ಕೇಳಿದಳು. ಸ್ವಲ್ಪ ಕಾಲಕಳೆಯಿತು. ಶಾರದೆಯ ತಂದೆಯೂ ಮನೆಗೆ ಬಂದರು. ಆದರೆ ಶಾರದೆಯ ಸುಳಿವಿಲ್ಲ. ಕೊನೆಗೆ ಬಾಯಿಬಿಟ್ಟು ಕೇಳಿದೆ. ಬಂದ ಉತ್ತರದಿಂದ ತಲೆಯ ಮೇಲೆ ಸಿಡಿಲು ಬಿದ್ದಂತೆ ಆಯಿತು.

ಶಾರದೆಗೆ ನಮ್ಮ ನೆರೆಯವನಾದ ಮಾಧವನೊಂದಿಗೆ ಮದುವೆಯಾಯಿತೆಂದೂ, ಈಗವಳು ಕಾ.... ದಲ್ಲಿ ಗಂಡನೊಂದಿಗೆ ಇದ್ದಾಳೆಂದು ತಿಳಿದುಬಂದಿತು.

ಆ ಮೇಲೆ ಸ್ವಲ್ಪಹೊತ್ತು ಅಲ್ಲಿಯೇ ಇದ್ದೆ. ಏನು ಮಾತನಾಡಿದೆನೋ ನನಗೆ ನೆನಪಿಲ್ಲ. ಮನೆಗೆ ಬಂದು ಯೋಚನೆ ಮಾಡತೊಡಗಿದೆ. ರಾತ್ರಿ ಸುಮಾರು ಹತ್ತು ಘಂಟೆಗೆ ನಮ್ಮ ತಾಯಿಯವರು ನನ್ನ ಕೊಠಡಿಯೊಳಕ್ಕೆ ಬಂದರು.

ಅವರಿಂದ ಎಲ್ಲವೂ ತಿಳಿಯಿತು. ಅವರಿಗೆ ನಮ್ಮ ಪ್ರೇಮಕತೆಯ ಪರಿಚಯವಿತ್ತೆಂದು ಅರಿವಾಯಿತು. ಜಾತಿಯ ವ್ಯತ್ಯಾಸದಿಂದ ಮದುವೆಯ ಪ್ರಸ್ತಾಪವು ಸಾಧ್ಯವಾಗಲಿಲ್ಲವೆಂದು ಹೇಳಿದರು. ನಾವು ಬ್ರಾಹ್ಮಣರು, ಅದರಲ್ಲಿಯೂ ವೀರವೈಷ್ಣವರು.

ನಾನು ಏನೂ ಮಾತನಾಡಲಿಲ್ಲ. ಸುಮ್ಮನೆ ಎಲ್ಲವನ್ನೂ ಕೇಳಿದೆ. ಆದರೆ ಹೃದಯದಲ್ಲಿ ದಾರುಣವಾದ, ಸಹಿಸಲಾರದ ನೋವು.

ರಾತ್ರಿ ನಿದ್ರೆ ಬರಲಿಲ್ಲ. ಮನಸ್ಸಿನಲ್ಲಿ ಗೊಂದಲ. ನಾನು, ಸಮಾಜ ಮತ್ತು ಶಾರದೆ-ಈ ಮೂವರ ಪರಸ್ಪರ ಸಂಬಂಧದ ಬಗ್ಗೆ ವಿಚಾರಮಾಡಿದೆ. ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಜೀವನ ಸಮಸ್ಯೆಯ ಕೋನದಿಂದ ವಿಚಾರಮಾಡಿದೆ. ಸರಿಯಾದ ಮಾರ್ಗವು ಗೋಚರವಾಗಲಿಲ್ಲ. ದಾರ್ಶನಿಕರು ಹೇಳುವಂತೆ ವ್ಯಕ್ತಿಸ್ವಾತಂತ್ರ್ಯವು ಇದ್ದರೆ, ಸಮಾಜವು ನಮ್ಮಿಬ್ಬರ ನಡುವೆ ಏಕೆ ತಲೆಹಾಕಬೇಕು ? ಅದಕ್ಕೆ ಹಕ್ಕು ಇರಲಿಲ್ಲ. ಆದರೂ ನಡುವೆ ಬಂದು ನಮ್ಮ ಜೀವನವನ್ನು ಹಾಳುಮಾಡಿತ್ತು. ಭಾವನೆಯ ಅರ್ಥವು ಸಮಾಜದ ತಳಹದಿಯೆಂದು ನಂಬುವರು ! ಎಲ್ಲವೂ ಸುಳ್ಳು ಮಾನವನ ಮೂರ್ಖ ಪದ್ಧತಿಯ ಸರಳರೇಖೆಯು ನಮ್ಮೆಲ್ಲರ ಮೈಮೇಲೆ ಹಾದು ನಮ್ಮನ್ನು ಕರ್ಮಠರನ್ನಾಗಿ ಮಾಡುವುದು.

ಒಂದು ವಾರವನ್ನು ಹಾಗೂ ಹೀಗೂ ಕಳೆದೆ. ಶಾರದೆಯನ್ನು ಒಂದು ಬಾರಿ ಕಂಡು, ಎಲ್ಲವನ್ನು ವಿಚಾರಿಸಬೇಕೆಂದು ಮನಸುಮಾಡಿದೆ. ಆದರೆ ಈಗ ಅವಳು ಪರಸ್ತ್ರೀ. ನನ್ನವಳೆಂದು, ಸತತ ನನ್ನವಳೆಂದು ವಚನ ಕೊಟ್ಟಿದ್ದವಳು ಇಂದು ಸಮಾಜದ ಸುಧಾರಿಸಿದ ನೀತಿಯಂತೆ ನನಗೇ ಪರಸ್ತ್ರೀ.

ನನ್ನ ಉದ್ದೇಶವನ್ನು ದಮನಮಾಡಿಕೊಂಡು ಏಳು ದಿನಗಳನ್ನು ಕಳೆದೆ. ಕೊನೆಗೆ ಅದು ದುರ್ದಮನೀಯವಾಯಿತು.

ಮನೆಯಲ್ಲಿ ಹೇಳದೆ ಕಾ........ಕ್ಕೆ ಹೋಗಿ ಸೇರಿದೆ. ಅಲ್ಲಿ ವಿಚಾರಿಸಿಕೊಂಡು ಶಾರದೆಯ ಮನೆಯನ್ನು ಪತ್ತೆಮಾಡಿದೆ. ಸಂಜೆ ಸುಮಾರು ನಾಲ್ಕರ ಸಮಯ. ಬಾಗಿಲನ್ನು ತಟ್ಟಿದೆ. ಶಾರದೆಯೇ ಬಂದು ಬಾಗಿಲನ್ನು ತೆರೆದಳು. ನನ್ನನ್ನು ನೋಡಿ ಅಪ್ರತಿಭಳಾಗಿ ಅವಾಕ್ಕಾದಳು.

ನಾನೇ ಅವಳನ್ನು ಮೆಲ್ಲಗೆ ಒಳಕ್ಕೆ ಕರೆದುಕೊಂಡು ಹೋದೆ. ಕುಳಿತುಕೊಂಡು ಎಲ್ಲವನ್ನೂ ಮಾತನಾಡಿದೆವು.

ಅವಳ ತಂದೆ ತಾಯಿಗಳೂ, ನನ್ನ ತಂದೆ ತಾಯಿಗಳೂ ಇಬ್ಬರೂ ಸೇರಿ ಅವಳನ್ನು ನನ್ನಿಂದ ದೂರವಿಡಬೇಕೆಂಬ ಉದ್ದೇಶದಿಂದ ಮಾಧವನಿಗೆ ಮದುವೆ ಮಾಡಿದ ಸಂಗತಿಯನ್ನು ಹೇಳಿದಳು. ಅವಳ ಗಂಡನ ವೃತ್ತಾಂತ

ವನ್ನು ಬಿನ್ನವಿಸಿದಳು. ಆಗ ನಾನು ಅವಳನ್ನು ಕರೆದುಕೊಂಡು 'ಎಲ್ಲಿ
ಯಾದರೂ ಹೋಗಿ ವಾಸಮಾಡಬೇಕೆಂದು ಗೊತ್ತುಮಾಡಿಕೊಂಡೆ. ಮಾತಿ
ನಲ್ಲಿ ಮಗ್ನರಾಗಿದ್ದ ನಮಗೆ ಕಾಲವು ಕಳೆದುಹೋದುದು ತಿಳಿಯುಬರಲಿಲ್ಲ
ಮಾಧವನು ಆಫೀಸಿನಿಂದ ಬಂದವನು ನಮ್ಮಿಬ್ಬರನ್ನೂ ನೋಡಿದನು
ಸಂತಾಪಗೊಂಡು ಕೆರಳಿ ಕೆಂಪಾದನು.

ಸಿಟ್ಟಿನಲ್ಲಿ ನಮ್ಮಿಬ್ಬರನ್ನೂ ಬಾಯಿಗೆ ಬಂದಂತೆ ಬೈದನು. ನಾನು
ಉತ್ತರಗೊಡಲಿಲ್ಲ; ಶಾರದೆಯೂ ಉತ್ತರಗೊಡಲಿಲ್ಲ. ಕೊನೆಗೆ ಶಾರದೆ
ಯನ್ನು ಅಮಂಗಳವಾದ, ಅವಾಚ್ಯವಾದ ಶಬ್ದಗಳಿಂದ ನಿಂದಿಸಲಾರಂಭಿಸಿ
ದನು. ಆಗ ನನಗೆ ಸಿಟ್ಟು ಬಂದು ಒಂದೆರಡು ಶಬ್ದಗಳನ್ನಾಡಿದೆ. ಕೊನೆಗೆ
ಇಬ್ಬರಿಗೂ ಹೊಡೆದಾಟವಾಯಿತು. ಅವನು ಪೆಟ್ಟು ತಿಂದು ನೆಲಕ್ಕುರುಳಿದ.
ನಾನು ಶಾರದೆಯನ್ನು ಕರೆದುಕೊಂಡು ಬಂದು ಬಿಟ್ಟೆ.

ಆ ದಿನದ ಘಟನೆಗಳನ್ನು ಕುರಿತು ವಿಚಾರಮಾಡಿದರೆ, ಇಂದೂ ಸಹ
ಸಮರ್ಪಕವಾದ ಉತ್ತರವು ದೊರೆಯುವುದಿಲ್ಲ. ಮನೋವೃತ್ತಿಗಳನ್ನು,
ಕಾರ್ಯ ಪರಂಪರೆಗಳನ್ನು ವಿಭಜಿಸಿ ಅರ್ಥಮಾಡುವುದರಲ್ಲಿ ನಾನು ನಿಷ್ಣಾತ
ನೆಂದು ಹೆಸರು. ಆದರೆ ಅಂದಿನ ಕಾರ್ಯಕ್ರಮದ ಅರ್ಥವು ನನಗೆ
ಇಂದಿಗೂ ಆಗಿಲ್ಲ. ಸಿಡ್ನಿ ಹುಕ್‌-ನ ವಾಕ್ಯವು ನಿಶ್ಚಯವೆಂದು ನನಗೆ
ತೋರುತ್ತದೆ. ನೀವೇ ನೋಡಿ— " Natural experience is
a mixture of necessary and chance elements"
(ನಿಸರ್ಗಾನುಭವವು ಆವಶ್ಯಕವಾದ ಮತ್ತು ಅನಿರೀಕ್ಷಿತವಾದ ವಿಷಯಗಳ
ಸಂಯೋಗವಾಗಿದೆ) ಈ ವಾಕ್ಯದಲ್ಲಿ ಬರುವ " ಅನುಭವ "ದ ಸುಯೋಗ್ಯ
ವಾದ ಅನುಭವವು ಅವನಿಗೂ ಆಗಿಲ್ಲ. ನನ್ನ ಜ್ಞಾನದ ವಿಸ್ತಾರವಂತೂ
ಅಲ್ಲಿಂದ ಮುಂದೆ ಹಾಯಲಿಲ್ಲ.

*   *   *   *

ಕ್ರಮವಾಗಿ ನನ್ನ ಮೇಲೆ 'ಕೇಸು' ಆಯಿತು. ಯಾವ ಕಾರಣ
ದಿಂದಲೋ ನಾನರಿಯೆ—ಆದರಲ್ಲಿ ಶಾರದೆಯ ಹೆಸರು ಬರಲಿಲ್ಲ. ನನ್ನ ಮೇಲೆ
ಎರಡು ಮೂರು ತಪ್ಪುಗಳನ್ನು ಹೊರಿಸಿದರು. ಪ್ರಾಸಿಕ್ಯೂಷನ್ ಕಡೆ

ಯವರು ದೊಡ್ಡ ಭಾಷಣವನ್ನು ಮಾಡಿ ನನ್ನನ್ನು ನೀತಿಬಾಹಿರನೆಂದೂ ಸಮಾಜದ, ಸರಕಾರದ ಕಟ್ಟಳೆಗಳನ್ನು ಅತಿಕ್ರಮಿಸಿದವನೆಂದೂ ತೋರಿಸಿ ಕೊಟ್ಟರು. ನಾನು ನನ್ನ ಕೆಲಸ ಕಾರ್ಯಗಳನ್ನು ವಿಶದಮಾಡಿ ಹೇಳಿ, ಶಾರದೆಯನ್ನೂ ಸಾಕ್ಷಿ ಕರೆಯಬೇಕೆಂದು ಕೇಳಿದೆ. ಕೋರ್ಟಿನವರು ಒಪ್ಪಲಿಲ್ಲ. ಕೊನೆಗೆ ನನ್ನನ್ನು ತಪ್ಪಿತಸ್ಥನೆಂದು ತೀರ್ಮಾನಿಸಿ ಮೂರು ವರ್ಷ ಶಿಕ್ಷೆ ವಿಧಿಸಿದರು.

ನೀವು ನ್ಯಾಯಾಧೀಶನ ಮೂರ್ಖತನದ ಪರಮಾವಧಿಯ ರೂಪವಾದ ತೀರ್ಪನ್ನು ಕೇಳಬೇಕಾಗಿತ್ತು. ಹಾಗಿಲ್ಲದಿದ್ದರೆ ಸಮಾಜದಲ್ಲಿ ಅವನ ಉದರಂಭರಣೆ ಹೇಗೆ ನಡೆಯಬೇಕು? ಸಮಾಜ ಮತ್ತು ಸಮಾಜದ ನೀತಿ, ವರ್ತನೆ. ಪರಮಾಣುಗಳಾದ ಜೀವಿಗಳಾದ ನಾವು, ನೀವು.

*　　*　　*　　*

ಜೇಲಿನಲ್ಲಿ ಒಂದು ವರ್ಷ ಕಳೆಯಿತು. ತುರಂಗದ ಅನುಭವವು ಅದರ ನ್ಯಾಯಪರತೆಯ ಪರಿಚಯವು ನಿಮಗೂ ಇದೆ. ಇಲ್ಲಿಯೇ ನನಗೆ ಒಂದು ಸಮಾಚಾರವು ಮುಟ್ಟಿತು. ಶಾರದೆಯು ಗಂಡನ ಕೈಯಲ್ಲಿ ಬದುಕ ಲಾರದೆ ಆತ್ಮಹತ್ಯೆಯನ್ನು ಮಾಡಿಕೊಂಡಳೆಂದು ಸುದ್ದಿಯು ಮುಟ್ಟಿತು.

ಅಂದು ನನ್ನ ಜೀವಿತದ ಬಂಧನಗಳು ಹರಿದು ಚದರಿ ಹೋದವು. ನಾನು ಸಮಾಜಕ್ಕೆ ಹೊರಗಾದವನು. ಮಾಧವನು ಸಮಾಜದಲ್ಲಿ ಗಣ್ಯ ನಾದ ಸದ್ಗೃಹಸ್ಥನು. ನನ್ನ ತಂದೆತಾಯಿಗಳೂ ಗಣ್ಯರು. ಸಮಾಜವು ನೀತಿಯುಕ್ತವಾದ ನ್ಯಾಯಬದ್ಧವಾದ ಸಂಘ. ಅಲ್ಲಿ....ನಾವು.

ಅಲ್ಲಿ ನಾವು ಯಾರು? ಸಮಾಜವು ಹಿರಿಯದು. ನಾವು ಜೇಡನ ಬಲೆಯಲ್ಲಿ ಸಿಕ್ಕಿದ ಎರಡು ಸಣ್ಣ ಪ್ರಾಣಿಗಳು. ಪ್ರಚಂಡ ಸಾಗರದಲ್ಲಿ ಪ್ರವಾಹಕ್ಕೆ ಸಿಕ್ಕಿ ಹೋದ ದೋಣಿಗಳು. ಬಲೆಗಾರನ ಬಲೆಯಲ್ಲಿ ಸೇರಿ ಹೋದ ಮೀನುಗಳು. ಸಮಾಜದ ಸ್ತಂಭಗಳು—ಮಾನವ ಸಮಾಜದ ಆಧಾರಗಳು.

ರೋಗಿಯು ನನಗೆ ಹೇಳಿದ್ದ ಇತಿಹಾಸದಲ್ಲಿ, ಕಥಾನಕದಲ್ಲಿ ಉತ್ಪ್ರೇಕ್ಷೆ ಯಿರಲಿಲ್ಲ. ಸೊಬಗಿರಲಿಲ್ಲ. ಸ್ಥಿರಪ್ರಜ್ಞನಂತೆ, ಆತನಿಗೆ ತನ್ನ ಜೀವಿತದ

ವೃತ್ತಾಂತವೇ ಬಾಹ್ಯದ ವಿಚಾರವಾಗಿತ್ತು. ಶಾಸ್ತ್ರದಲ್ಲಿ ನಿಷ್ಕಾಮ ರೀತಿಯಲ್ಲಿ ವಿಚಾರ ಮಾಡುವವನಂತೆ ಎಲ್ಲವನ್ನೂ ಹೇಳಿದ್ದನು.

ಅಹುದು, ನಿಜ. ಎಲ್ಲವೂ ಒಂದು ಮಾರ್ಗವನ್ನು ಹಿಡಿದು ನಡೆಯಬೇಕು. ನಾನು ರೋಗಿ. ಶಾರದೆ— ಮಾಧವ— ಸಮಾಜ— ಸರಕಾರ— ಪರಸ್ಪರ ಸಂಬಂಧವುಂಟೇ? ಅಥವಾ ಇಲ್ಲವೆ? ಸಂಬಂಧವುಂಟು. ಆದರೆ ನಮ್ಮ ಉಪಯೋಗಕ್ಕಲ್ಲ. ಆದರಿಂದಲೇ ಜೇಮ್ಸನು "A world still in the making" ಎಂದು ಹೇಳಿದುದು. ಇದನ್ನು ಕುರಿತು ವಿಚಾರಮಾಡತೊಡಗಿದೆ. ಇದ್ದಕ್ಕಿದ್ದ ಹಾಗೆ ಶಬ್ದವಾಯಿತು. ಯಾವನೋ ಒಬ್ಬ ರೋಗಿಯು ಮಲಗುತ್ತಿದ್ದ.

ಸ್ವಾಭಾವಿಕವಾಗಿ ಕೈಯು ನನ್ನ ರೋಗಿಯ ಕೈ ಕಡೆಗೆ ಹೊರಳಿತು. ಹಿಡಿದು ನಾಡಿಯನ್ನು ನೋಡಿದೆ. ನಿಂತುಹೋಗಿತ್ತು. ಹೃದಯದ ಮೇಲೆ ಕೈಯಿಟ್ಟು ನೋಡಿದೆ; ಹೊಡೆಯುತ್ತಿರಲಿಲ್ಲ. ಕೊನೆಗೆ ಕಣ್ಣಾಲೆಯನ್ನು ಮುಟ್ಟಿ ನೋಡಿದೆ; ಚಲನವಾಗಲಿಲ್ಲ. ಮೆಲ್ಲನೆ ದುಪ್ಪಟಿಯನ್ನು ಎಳೆದು ಶವವನ್ನು ಮುಚ್ಚಿದೆ. ಪಹರೆಯವನನ್ನು ಕೂಗಲು ಮುಂದೆ ಬಂದೆ. ರೋಗಿಯು ಜೀವಿಸಿರಲು ಕಾರಣವಿರಲಿಲ್ಲ. ಸಮಸ್ಯೆಗೆ ಉತ್ತರವು ದೊರೆತಿತ್ತು.

"ನನ್ನ ಬಿಡುಗಡೆಗೆ ಇನ್ನೂ ಆರುತಿಂಗಳು ಇಪ್ಪತ್ತುದಿನ ಬಾಕಿ. ಸ್ವಲ್ಪ ತಾಳಿ. ಮೆಹತಾಬ್ ಬೇಗಮ್ ಚೆನ್ನಾಗಿ ಪಾತ್ರವಹಿಸುತ್ತಾಳಂತೆ. ನೀವು ನೋಡಿರುವಿರಾ?

## ಸಂಭಾವಿತ ★ ★ ★

ನೀವು ಒಂದು ಕೆಲಸವನ್ನು ಸ್ವಲ್ಪ ಎಚ್ಚರದಿಂದ ಮಾಡಿದರೆ ಒಳ ಗುಟ್ಟು ಅರ್ಥವಾಗುವುದು. ಕೆಲಸವಾದರೂ ಬಹಳ ಕಷ್ಟವಾದುದಲ್ಲ. ನೀವು ಮಾತ್ರ ಅವರ ಬೆನ್ನುಹತ್ತಿ ಹೋಗಿ ಅವರನ್ನು ಪರೀಕ್ಷಿಸಿ ನೋಡಿ. ಅವರು ಸಿನೀಮಾದಲ್ಲಿರುವಾಗ ಪರಿಶೀಲಿಸಿರಿ. ಅವರು ಯಾವ ಯಾವ ಸಂದರ್ಭಗಳಲ್ಲಿ ಬಹಳ ಆನಂದ ಪಡುವರೆಂದು; ಎಂತಹ ಪ್ರಸಂಗಗಳಲ್ಲಿ ಮನದಲ್ಲಿಯೇ ನಲಿದು ನರ್ತಿಸುವರೆಂದು, ಸಮಯ ದೊರೆತಾಗ ಅವರ ಕಿರು ಮನೆಯನ್ನು ಪ್ರವೇಶಿಸಿ, ಒಂದು ಕಡೆಯಿಂದ ಅಲ್ಲಿರುವ ವಸ್ತುಗಳನ್ನು, ಪುಸ್ತಕಗಳನ್ನು ನೋಡಿ. ಆಗ ಮರ್ಯಾದೆಯ ಮೇರೆಯು ಮನವರಿಕೆ ಯಾಗುವುದು.

ಇಂತಹ ಸಂಭಾವಿತರಿಂದಲೇ ಅನೇಕ ವೇಳೆ ಹಲವು ತೆರನಾದ ವ್ಯಾಪಾರ ವ್ಯವಸಾಯಗಳು ಬೆಳೆಯುತ್ತಿರುವುದು.

ಆದರೆ ನೀವು ಮಾತ್ರ ಅವರನ್ನು ಈ ವಿಚಾರದಲ್ಲಿ ಪ್ರಶ್ನೆಮಾಡ ಬಾರದು. ಒಂದು ವೇಳೆ ನೀವು ಕೇಳಿದರೆ ಅವರಿಂದ ಬರುವ ಗಂಭೀರವಾದ ಉತ್ತರದಿಂದ ನಿಮ್ಮ ಸಾಕ್ಷಿಗಳ ಕಸುವು ಕಡಿದುಬೀಳಬಹುದು.

ಇದೇ ಕಸಿಮಾಡಿದ, ಬೆಳಸಿದ ಅಭ್ಯಾಸಗಳ ಅಂತ್ಯ, ಪರಿಣಾಮ. ಸಾಕಷ್ಟು ಬಲವಿಲ್ಲದೆ ಅವು ನಶಿಸಿ ಹೋಗುವುವು. ಆದರೆ ಹೊರಗಿನ ಆವರಣವಾದ ಶೀಲವು ಮಾತ್ರ ಹಾಗೆಯೇ ಹೊದ್ದಿಕೊಂಡು ನೋಡುವು ದಕ್ಕೆ ಸುಂದರವಾಗಿರುವುದು.

ಈ ಎಲ್ಲ ವಿಚಾರಗಳ, ವ್ಯವಹಾರಗಳ, ತತ್ವಗಳ, ಬಡಿದಾಟಗಳ ವೈವೆತ್ತ ಜೀವಿಯೆಂದರೆ ಶಾರದೆಯು ಹೇಳಿದ ಸಂಬಂಧಂ ಮಹಾಶಯರು.

### II

ರುದ್ರಪುರವು ಒಂದು "ಕಾಲೋನಿ". ಅಲ್ಲಿ ವಾಸಮಾಡುವವರೆಲ್ಲರೂ ಬಹುಶಃ ನಿವೃತ್ತರಾದ ಅಧಿಕಾರಿಗಳು. ಅವರಲ್ಲಿ ಬಹುಮಂದಿ ಉಚ್ಚ ಕುಲ ದಲ್ಲಿ ಜನ್ಮದಾಳಿದವರು.

ಅವರು ಎಲ್ಲರೂ ಈಗ ಆಚಾರಶೀಲರು; ಗಂಭೀರವೃತ್ತಿಯವರು; ಮರ್ಯಾದಸ್ಥರು; ಸಮಾಜದಲ್ಲಿ ಗಣ್ಯ ಜೀವಿಗಳು. ಅವರನ್ನು ಕಂಡರೆ ಎಲ್ಲರಿಗೂ ವಿಶ್ವಾಸಪೂರ್ವಕವಾದ ಮರ್ಯಾದೆ.

ಅಂತಹ ಗಣ್ಯಜೀವಿಗಳಲ್ಲಿ ನಮ್ಮ ಸಂಬಂಧಂ ಮಹಾಶಯರೂ ಒಬ್ಬರು.

ಸಂಬಂಧಂ ರವರ ಸಂಸಾರವೆಂದರೆ ಅವರ ವೃದ್ಧಳಾದ ತಾಯಿ, ಪಾತ್ರ ಹೀನರಾದ ಇಬ್ಬರು ಮಕ್ಕಳು ಮತ್ತು ಒಂದಿಬ್ಬರು ಆಳುಗಳು.

ಒಂದು ದಿನ ಬೆಳಿಗ್ಗೆ ಅವರು ತೋಟದಲ್ಲಿ ಕುಳಿತು ವಿಶ್ರಮಿಸುತ್ತಿದ್ದಾಗ ಅವರ ನೆರೆಯವರಾದ ಪಿಳ್ಳೆಯವರು ಬಂದು ಅಲ್ಲಿಯೇ ಇದ್ದ ಕುರ್ಚಿಯನ್ನು ಸೆಳೆದುಕೊಂಡು ಕುಳಿತರು. ಇಬ್ಬರು ವೃದ್ಧರೂ ವೃತ್ತ ಪತ್ರಿಕೆಯನ್ನು ಓದುತ್ತಾ ಕುಳಿತರು. ಸ್ವಲ್ಪ ಕಾಲದನಂತರ ಪಿಳ್ಳೆಯವರು "ಸಾರ್, ನಾಲ್ಕನೆಯ ಪೇಜ್ ಐದನೇಕಾಲಂ ನೋಡಿದಿರಾ ? ಅಲ್ಲಿ ಒಂದು ಸ್ವಾರಸ್ಯವಾದ ವಿಷಯವಿದೆ" ಎಂದರು.

ಸಂಬಂಧಂರವರು ಅದನ್ನು ಹುಡುಕಿ ಓದಿ

ಸಾವಧಾನಚಿತ್ತದಿಂದ ಓದಿದ ಬಳಿಕ "ಇಂತಹದೆಲ್ಲಾ ನಾವು ನೋಡ ಬಾರದು, ಪಿಳ್ಳೆಯವರೆ, ಆ ಹಾಳು ರಂಗನಾಯಕಿ ಗಂಡನನ್ನು ಬಿಟ್ಟು ಹೋದರೆ, ಇದ್ದರೆ, ನಮಗೇನು ? ಸಮಾಜ ನೋಡಿ, ಇಂತಹರಿಂದಲೇ ಹಾಳಾಗುವುದು" ಎಂದು ಬುದ್ಧಿ ಹೇಳಿದರು.

ಪಿಳ್ಳೆಯವರಿಗೆ ಇದರಿಂದ ಸ್ವಲ್ಪ ಅಸಮಾಧಾನವಾಯಿತು; ಸಂಗಡಲೇ ನಾಚಿಕೆಯಾಯಿತು. ಆದರೂ ಧೈರ್ಯಗೆಡದೆ 'ಅದು ಸರಿ, ಸಾರ್, ಅವರಿಗೆ ಮಾನಮರ್ಯಾದೆಯಿಲ್ಲ. ಇವರಿಂದಲೇ ಜನರ ಮಾನ ಹೋಗುವುದು ಒಂದೇ ಅಲ್ಲ; ಹುಡುಗರೂ ಕೆಟ್ಟು ಹೋಗುತ್ತಾರೆ." ಎಂದು ಮಾರುನುಡಿದರು.

ಸಂಬಂಧಂರವರು ಈ ಪೌರುಷವಾಕ್ಯಗಳಿಗೆ ಸಮ್ಮತಿಯಿತ್ತರು. ಜನಗಳಿಗೆ ಮಾನಮರ್ಯಾದೆಯ ಕಲ್ಪನೆಯು ಇಲ್ಲವೆಂದು ದೊಡ್ಡದಾಗಿ ಉಪನ್ಯಾಸಮಾಡಿದರು. ಪಿಳ್ಳೆಯವರು ಸಹಾ ತಮಗೆ ತಿಳಿದುಬಂದಿದ್ದ ಸಂಗತಿ

ಗಳನ್ನು ವಿಸ್ತಾರವಾಗಿ ಹೇಳಿ ಕೊನೆಗೆ ಇಬ್ಬರೂ ಕಾಫಿಯನ್ನು ಕುಡಿದು ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಕೆಲವು ದಿನಗಳ ನಂತರ ಸಂಬಂಧಂರವರು ತಮ್ಮ "ಪೆನ್‌ಷನ್" ತರಲು ಕಚೇರಿಗೆ ಹೊರಟರು. ಅಲ್ಲದೆ ಅವರು ಮನೆಮಾರುಗಳ ಬಾಡಿಗೆಯನ್ನು ಸಹಾ ಅಂದೇ ಅವರು ವಸೂಲು ಮಾಡುವ ಪದ್ಧತಿಯನ್ನು ಇಟ್ಟಿದ್ದರು. ಇದು ಅವರ ಪ್ರತಿ ತಿಂಗಳಿನ ಕಾರ್ಯಕ್ರಮ.

ಕಚೇರಿಯಲ್ಲಿ ಇವರು ಬಂದೊಡನೆಯೇ ಅವರ ಗಂಭೀರ ಸ್ವಭಾವವನ್ನು ನೋಡಿ, ಅವರನ್ನು ಬಹು ಸಂಭಾವಿತರೆಂದು ಭಾವಿಸಿ, ಅಲ್ಲಿನ ಗುಮಾಸ್ತರು ಅವರಿಗೆ ಸಲ್ಲಬೇಕಾಗಿದ್ದ ಹಣವನ್ನು ತೀವ್ರವಾಗಿ ಕೊಡುತ್ತಿದ್ದರು. ಇವರು ಹೋದನಂತರ 'ಮಹಾಸಂಭಾವಿತ, ಮುದಕ, ಜೋರಾಗಿದ್ದಾನೆ. ಚೆನ್ನಾಗಿ ಬದುಕಿದವನಿರಬೇಕು' ಎಂದು ಆಡಿಕೊಳ್ಳುತ್ತಿದ್ದರು.

ಬಾಕಿಗೆಗಿದ್ದವರು ಸಹಾ ಇವರನ್ನು ಪೀಡಿಸದೆ ಹಣವನ್ನು ಸಲ್ಲಿಸುತ್ತಿದ್ದರು.

ಎಲ್ಲರ ಭಾವನೆಯಲ್ಲಿ, ಯೋಚನೆಯಲ್ಲಿ ಸಂಬಂಧಂ ರವರು ದೊಡ್ಡ ಮನುಷ್ಯರು., ಸಂಭಾವಿತರು.

ಹಿಂದಿರುಗಿ ಬರುವಾಗ ನಮ್ಮ ಮಹಾಶಯರ ಅಭ್ಯಾಸವು ಮತ್ತೊಂದು ಇದ್ದಿತು. ಅವರು ನೇರವಾಗಿ ರುದ್ರಪುರದ ಹಾದಿಯನ್ನು ಹಿಡಿಯುತ್ತಿರಲಿಲ್ಲ. ಅದನ್ನು ಬಿಟ್ಟು 'ಕ್ವೀನ್ಸ್ ರೋಡಿ'ನ ಕಡೆಗೆ ತಮ್ಮ ಪಾದವನ್ನು ಬೆಳೆಸುತ್ತಿದ್ದರು. ಆ ರಸ್ತೆಯಲ್ಲಿ ಒಂದು ಭವ್ಯವಾದ ಉಪಹಾರ ಮಂದಿರವಿತ್ತು. ಅದು ಅವರು ಚಾಕರಿಯ ದಿನಗಳಿಂದಲೂ ಅಲ್ಲಿಯೇ ಇದ್ದುದರಿಂದ ಸಂಬಂಧಂ ರವರಿಗೆ ಬಹಳ ಬಳಿಕೆಯದಾಗಿದ್ದಿತು.

ಮಹಾಶಯರು ಸಂಬಳ–ಹಣವನ್ನು ತೆಗೆದುಕೊಂಡ ದಿನಗಳಲೆಲ್ಲಾ ಅಲ್ಲಿಗೆ ಬಂದು ತಮ್ಮ ದರ್ಶನವನ್ನು ಕೊಡುತ್ತಿದ್ದರು. ಒಳಗೆ ಹೋದ ಮೇಲೆ ಮೊದಲು ಸ್ವಲ್ಪ ಟೀಯನ್ನು ತರಲು ಹೇಳುತ್ತಿದ್ದರು. ಅದನ್ನು ಕುಡಿದು ದಣುವಾರಿಸಿ ಕೊಂಡನಂತರ ತಮ್ಮಲ್ಲಿದ್ದ ಹಣದ ವ್ಯವಸ್ಥೆಯನ್ನು ಲೆಕ್ಕ ಹಾಕುತ್ತಿದ್ದರು.

ಸಂಜೆಯು ಹೊತ್ತು. ವಯಸ್ಸು ಬೇರೆ ಆಗಿದ್ದುದರಿಂದ ಅವರಿಗೆ ಲೆಕ್ಕಾಚಾರ ಸ್ವಲ್ಪ ತಪ್ಪುತ್ತಿತ್ತು. ಆದುದರಿಂದ ಅವರು ಸೇವಕನನ್ನು ಕರೆದು ಸ್ವಲ್ಪ ಬ್ರಾಂಡಿಯನ್ನು ತರಿಸಿಕೊಂಡು ಸೇವಿಸುತ್ತಿದ್ದರು. ಅದರ ಪ್ರಭಾವದಿಂದ ಮಂದವಾಗಿದ್ದ ಬುದ್ಧಿಗತಿಯು ಸ್ವಲ್ಪ ಚೇತರಿಸಲು ಅವರು ಪುನಃ ಸೇವಕನನ್ನು ಕರೆದು “ ಜಾನ್, ಇನ್ನೂ ಸ್ವಲ್ಪ ತೆಗೆದುಕೊಂಡು ಬಾ, ಅದರಿಂದ ನನಗೇನೂ ತೊಂದರೆಯಾಗೋಲ್ಲ, ” ಎಂದು ಹೇಳುತ್ತಿದ್ದರು.

ಸೇವಕನು ಅವರು ಹೇಳಿದ ಹಾಗೆಲ್ಲ ಮಾದಕ ದ್ರವ್ಯವನ್ನು ತಂದು ಒದಗಿಸುತ್ತಿದ್ದನು. ಅವರು ರಾತ್ರಿ ಹತ್ತೂವರೆಯವರೆಗೂ ಅಲ್ಲಿಯೇ ಇದ್ದು ಅಲ್ಲಿಂದ ಹೊರಬೀಳುತ್ತಿದ್ದರು.

ಇನ್ನೂ ಹೆಚ್ಚು ಹೊತ್ತು ಅಲ್ಲಿರಲು ಅವಕಾಶವಿರಲಿಲ್ಲ. ಏಕೆಂದರೆ ಅದು ಅಂಗಡಿಹಾಕುವ ವೇಳೆ. ಆದರೂ ಸ್ವಲ್ಪ ತೊಂದರೆ ಬಿದ್ದು ಎರಡು ಮೂರು ಬಾಟ್ಲುಗಳನ್ನು ಸಂಪಾದಿಸಿ ಮುಂದೆ ಹೆಜ್ಜೆಹಾಕುತ್ತಿದ್ದರು.

ಇದು ಅವರ ಅನೇಕ ದಿನಗಳ ಮರ್ಯಾದೆಯ ಕೆಲಸ.

ಅಲ್ಲಿಂದ ಹೊರಬಿದ್ದು ಸ್ವಲ್ಪ ಚಿತ್ತ ಭ್ರಮೆಯಿಂದ ರುದ್ರಪುರದ ದಾರಿಯನ್ನು ಹಿಡಿಯದೇ “ರೋಸ್ ಲೇನ್ ”ನನ್ನು ಹಿಡಿದು ದಾರಿ ನಡೆಯುತ್ತಿದ್ದರು.

ಅಲ್ಲಿಯೇ ಅವರ ಹಳೆಯ ಸ್ನೇಹಿತಳಾದ ಮಿಸೆಸ್ ಗ್ರೇಸಿಬಿಂಗ್-ಹ್ಯಾಂ ಇರುತ್ತಿದ್ದರು.

ಇಬ್ಬರೂ ಸರಸಸಲ್ಲಾಪಗಳೊಂದಿಗೆ ಸಂಗಡ ಇದ್ದ ಬಾಟ್ಲುಗಳನ್ನು ಕುಡಿದು ಮುಗಿಸಿ, ಮಲಗುತ್ತಿದ್ದರು.

ಇದೂ ಸಹಾ ತಿಂಗಳಿಗೊಮ್ಮೆ ಜರುಗುತ್ತಿದ್ದ ಅವರ ಸಂಭಾವಿತ ತನದ ಅಭ್ಯಾಸ.

ಬೆಳಗಾದ ಮೇಲೆ ಮನೆಸೇರಿ ತಮ್ಮ ತಾಯಿಗೆ “ ನಿನ್ನೆ ಸುಂದರ ಶಾಸ್ತ್ರಿಗಳ ಮನೆಗೆ ಹೋಗಿದ್ದೆ. ಹೊತ್ತಾಯಿತು. ಬಲವಂತಮಾಡಿದುದರಿಂದ ಅಲ್ಲಿಯೇ ಇರಬೇಕಾಯಿತು ” ಎಂದು ಸಮಾಧಾನ ಸೂಚಕವಾದ ಉತ್ತರವನ್ನು ಕೊಡುತ್ತಿದ್ದರು.

ಪಾಪ, ಆ ಮುದುಕಿಗೆ ಮಗನ ಮರ್ಯಾದೆಯ ಮಾರ್ಗಗಳು ತಿಳಿದಿರಲಿಲ್ಲ.

ಒಂದು ದಿನ ನಮ್ಮ ಸಂಬಂಧಂ ಮಹಾಶಯರಿಗೆ ಒಂದು ವಿಪತ್ತು ಬಂದಿತು.

ಎಂದಿನಂತೆ ಅವರು ತಮ್ಮ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಮಿಸೆಸ್ ಬಿಂಗ್–ಹ್ಯಾಂ ರವರ ಮನೆಯನ್ನು ಸುಮಾರು ರಾತ್ರಿ ಹನ್ನೊಂದು ಗಂಟೆಗೆ ಸೇರಿದರು. ಇಬ್ಬರೂ ಸಂತೋಷದಿಂದ ಕುಡಿದು ತೃಪ್ತರಾಗಿ, ಮಗ್ನರಾಗಿರಲು ವಿಧಿವಶದಿಂದ ಮಿಸಸ್ ಬಿಂಗ್‌ಹ್ಯಾಂ ರವರ ಇನ್ನೊಬ್ಬ ಸ್ನೇಹಿತರಾದ ಮಿಸ್ಟರ್ ಅಬ್ದುಲ್ ರಹಿಮಾನ್ ಸಾಹೇಬರು ಬಂದು ಅಲ್ಲಿಗೆ ದಯಮಾಡಿಸಿದರು.

ಮೂವರೂ ಬಹು ಮಾನಸ್ಥರಾದ ಕಾರಣ ತಮ್ಮತಮ್ಮೊಳಗಿನ ವ್ಯಾಜ್ಯವನ್ನು ಪರಿಹರಿಸಿಕೊಳ್ಳಲು ಜ್ಞಾನವಿದ್ದಷ್ಟು ಪ್ರಯತ್ನ ಮಾಡಿದರು. ಆದರೆ ಅದು ವಿಫಲವಾಯಿತು ಕೊನೆಗೆ ಮಾತು ಮಾತಿಗೆಮೀರಿ, ಕೈಗೆ ಕೈ ಸೇರಿ, ಕೇಶಾಕೇಶಿ, ಮುಷ್ಟಾಮುಷ್ಟಿ, ಕುಸ್ತಿ ಮೊದಲಾದ ಅನೇಕ ವಿಧವಾದ ವಿನೋದ ಸಮ್ಮೇಲನಗಳು ಆರಂಭವಾದವು.

ನೆರೆಹೊರೆಯವರು ಅವರುಗಳ 'ಪ್ರೋಗ್ರಾಂ' ನೋಡಿ ಬೇಸತ್ತು ಕೊನೆಗೆ ಮೂವರನ್ನು ಕರೆದುಕೊಂಡು ಹೋಗಿ ಪೋಲೀಸಿನವರ ವಶಕ್ಕೆ ಒಪ್ಪಿಸಿದರು.

ಕ್ರಮವಾಗಿ ಮರುದಿನ ಸಂಬಂಧಂರವರು ಕೋರ್ಟಿನಲ್ಲಿ ಹಾಜರಾದರು. ಅಲ್ಲಿದ್ದ ಜನರನ್ನು ನೋಡಿ ಅಂಜಿ ತಮ್ಮ ಮಾನವು ಕಳೆದು ಹೋಗುವುದೆಂದು ಕಾತರಿಸಿ, ತಮ್ಮ 'ಕೇಸ'ನ್ನು ಮೊದಲಿನಲ್ಲಿಯೇ ಮುಗಿಸಬೇಕೆಂದು ಅಲ್ಲಿದ್ದ ಪೋಲೀಸರಿಗೂ ಗುಮಾಸ್ತರಿಗೂ ದಕ್ಷಿಣೆಯನ್ನು ಕೊಟ್ಟು ಕೈಮುಗಿದು ಕಾದಿದ್ದರು.

ಕೊನೆಗೆ ನ್ಯಾಯಾಧಿಪತಿಯು ಕೇಸನ್ನು ವಿಚಾರಮಾಡುತ್ತ 'ಹೀಗೇಕೆ ಆಯಿತು ?' ಎಂದು ಪ್ರಶ್ನೆ ಮಾಡಿದರು.

ಅದಕ್ಕೆ ಉತ್ತರವಾಗಿ ಸಂಬಂಧಂರವರು " ನಿನ್ನೆ ನನ್ನ ಪೆನ್‌ಷನ್ ದಿನ. ನಾವೆಲ್ಲ ಹಳೆಯ ಸ್ನೇಹಿತರು. ಆದರೂ ಅನರ್ಥವಾಯಿತು. ದಯ ವಿಟ್ಟು ನಮ್ಮ ಮಾನ ಕಾಪಾಡಬೇಕು " ಎಂದು ಅಂಗಲಾಚಿದರು

ನ್ಯಾಯಾಧೀಶರು ನಕ್ಕು " ಇಂತಹ ಕೇಸುಗಳು ಬಹಳವಿರುತ್ತವೆ. ಕಾಣ್ರಿ. ಇನ್ನು ಮೇಲೆ ಹೀಗೆ ಮಾಡಬೇಡಿ. ಹೂಂ, ತಲಾ ಐದು ರೂಪಾಯಿ ಜುಲ್ಮಾನೆ " ಎಂದು ಕೇಸನ್ನು ಪೂರ್ತಿಮಾಡಿ ಬಿಟ್ಟರು.

ಮೂವರೂ ಬದುಕಿದೆವೆಂದು ಸಂತಸದಿಂದ ಮನೆಗಳಿಗೆ ತೆರಳಿದರು.

ಕೆಲವು ತಿಂಗಳು ಕಾಲ ಇದೇ ರೀತಿ ಅಭ್ಯಾಸ ಬಲದಿಂದ ಕೋರ್ಟಿನ ಕಾರ್ಯಕ್ರಮವು ತಪ್ಪದೇ ನಡೆದು ಬಂದಿತು. ಕೋರ್ಟಿನವರಿಗೆ ಈ ಮೂವರ ಪರಿಚಯವೂ ಚೆನ್ನಾಗಿ ಆಯಿತು. ಇವರನ್ನು ಕಂಡೊಡನೆ 'ಏನು ಪೆನ್‌ಷನ್ ದಿನ ತಾನೆ ? ' ಎಂದು ನಕ್ಕು ಜುಲ್ಮಾನೆ ಹಾಕಿ ಕಳುಹಿಸುತ್ತಿದ್ದರು.

ಇದರಿಂದ ಯಾರಿಗೂ ತೊಂದರೆಯಾಗುತ್ತಿರಲಿಲ್ಲ. ಮಾನ ಹೋಗು ತ್ತಿರಲಿಲ್ಲ.

ಆದರೆ ದುರ್ದೈವದಿಂದ ಒಂದು ದಿನ ಸಂಬಂಧಂ ಮಹಾಶಯರು ಯಾವುದೋ ಹಣ ತರುವುದಕ್ಕಾಗಿ ತಿಂಗಳ ಮಧ್ಯೆಯೇ ಹೊರಟರು. ಮರ್ಯಾದಸ್ಥರ ಅಭ್ಯಾಸ ಬಲದಿಂದ ಮರುದಿನ ಕೋರ್ಟಿನಲ್ಲಿ ಹಾಜ ರಾದರು.

ಅವರನ್ನು ನೋಡಿ ಅಲ್ಲಿದ್ದವರಿಗೆ ಆಚ್ಚರಿಯಾಯಿತು. ಏಕೆಂದ ವಿಚಾರಿಸಲು ಮಹಾಶಯರು ಹಣಿ ಬಡೆದುಕೊಂಡು ಸುಮ್ಮನಿದ್ದರು.

ನ್ಯಾಯಾಧೀಶರು ಬಂದು ಪೀಠವನ್ನು ಅಲಂಕರಿಸಿದ ಮೇಲೆ ಮಹಾ-ಶಯರ ಕೇಸನ್ನು ಮೊದಲಿನಲ್ಲಿಯೇ ತೆಗೆದುಕೊಂಡರು. ಅವರನ್ನು ನೋಡಿ ವಿಸ್ಮಯಗೊಂಡು

" ಇದೇನು, ಈಗ ಬಂದಿರಿ ? " ಎಂದು ಕೇಳಿದರು.

ಸಂಬಂಧಂರವರು ಯಾವುದೋ ಹಣ ಬಂದಿದ್ದಿತೆಂದೂ ಅದನು ತರಲು ಬಂದಿದ್ದರೆಂದೂ ಹೇಳಿದರು.

ಅದಕ್ಕೆ ನ್ಯಾಯಾಧಿಪತಿಯು “ ಈಗ ಸರಿ ಹೋಯಿತು. ತಿಂಗಳಿಗೊಂದು ಸಾರಿ ಏನೇ ಹೋಗಲಿ ಎಂದರೆ ನೀವು ಹೀಗೆಲ್ಲ ಮಾಡಲು ಆರಂಭ ಮಾಡಿದಿರಿ. ಈ ಸಾರಿ ನಿಮಗೆ ಶಿಕ್ಷೆ ಕೊಡಬೇಕು. ” ಎಂದು ಖಂಡಿತವಾಗಿ ಹೇಳಿದರು.

ಮಹಾಶಯರ ಯಾವ ಪ್ರಯತ್ನವೂ ಅಲ್ಲಿ ಸಾಗಲಿಲ್ಲ. ಒಂದು ದಿನದ ಶಿಕ್ಷೆಯನ್ನು ಅವರು ಅನುಭವಿಸ ಬೇಕಾಯಿತು.

ಮರುದಿನ ಬೆಳಿಗ್ಗೆ ಅವರು ಮನೆಗೆ ದಯಮಾಡಿದರು. ಮನೆಯವರು ಕೇಳುವುದಕ್ಕೆ ಮೊದಲೇ ಅವರು ತಮ್ಮ ಉತ್ತರವನ್ನು ಕೊಟ್ಟರು.

“ ನಿನ್ನೆ ಅವರ ಮನೆಯಲ್ಲಿ ಮಗುವಿಗೆ ಹುಟ್ಟಿದ ದಿನ. ಆದುದರಿಂದ ಇರಬೇಕಾಯಿತು. ಇನ್ನು ಮೇಲೆ ಯಾರು ಎಷ್ಟು ಬಲವಂತಮಾಡಿದರೂ ಹೊರಗೆ ನಿಲ್ಲುವುದಿಲ್ಲ. ”

ಮನೆಯವರು ಮನೆಯ ಯಜಮಾನನ ಈ ಉತ್ತರದಿಂದ ಸುಮ್ಮನಾದರು.

× × × ×

ಇದಾದ ಸ್ವಲ್ಪ ದಿನಗಳ ನಂತರ ಪಿಳ್ಳೆಯವರು ಬಂದು, ಪ್ರಸ್ತಾಪ ತೆಗೆದು “ ಸಾರ್, ಆ ರಂಗನಾಯಕಿ ಸಿಕ್ಕದಳಂತೆ, ಗಂಡ ಹೆಂಡಿರು ಕುಡುಕರಂತೆ ” ಎಂದು ಸುದ್ದಿ ಹೇಳಿದರು.

ಸಂಬಂಧಂರವರು “ ಹಾಳಾದ ಜನ, ಸಾರ್, ಮನೆಯೋಚನೆಯಿಲ್ಲ; ಮಾನವಿಲ್ಲ. ಕುಡುಕುತನ, ವ್ಯಭಿಚಾರ ಸೇರಿದರೆ ನೋಡಿ, ಹೀಗೇನೆ. ಆದರೂ ನೋಡಿ ನಮ್ಮಂತಹ ಹಿರಿಯರು ಇಂತಹ ವಿಚಾರಗಳನ್ನು ಕಟ್ಟಿಕೊಳ್ಳಬಾರದು. ” ಎಂದು ಹೇಳಿದರು.

ಪಿಳ್ಳೆಯವರು ನಾಚಿ, ಸುಮ್ಮನೆ ಸ್ವಲ್ಪ ಕಾಲವಿದ್ದು ಹೊರಟು ಹೋದರು.

## IV

ಶಾರದೆಗೆ ಅವಳ ಮೆಚ್ಚಿನವರಾದ ಸಂಬಂಧಂ ಮಹಾಶಯರ ವೃತ್ತಾಂತವನ್ನು ಹೇಳಿದೆ. ಅವಳು ಇತಿವೃತ್ತವನ್ನು ಕೇಳಿ ಮನನೊಂದರೂ ನಗಲಾರಂಭಿಸಿದಳು.

“ ಇದ್ದರೆ ಹೀಗೆ ಇರಬೇಕು ” ಎಂದು ಹೇಳಿದಳು “ ಇಂತಹ ರಿಂದಲೇ ನಮ್ಮ ಪತಿತರ ಉದ್ಧಾರವಾಗಬೇಕು. ”

ನಾನು ಉತ್ತರವಿತ್ತೆ. ಅವರು ಸಂಭಾವಿತರು. ಸಮಾಜ ತಳಹದಿಯಂತಹರು. ಆದರೆ ನೋಡು ನಾನು, ನೀನು ಅದರ ಶತ್ರುಗಳು ”

ಅವಳು ನನ್ನ ಮಾತನ್ನು ಮುಂದೆ ಸಾಗಗೊಡಲಿಲ್ಲ.

“ ನಿಮ್ಮದು ಯಾವಾಗಲೂ ಒಂದೇ ಪಲ್ಲವಿ. ನಾವಿಬ್ಬರೂ ಏನೂ ತಪ್ಪುಮಾಡಿಲ್ಲ. ನಮ್ಮ ಮನಸ್ಸು ಬಂದಂತೆ ಜತೆಯಲ್ಲಿ ಇರುತ್ತೇವೆ. ಇದರಿಂದ ಯಾರಿಗೇನು ದುಃಖ ? ” ಎಂದು ವಾದಿಸಿದಳು.

ನಾನು ಶಾರದೆಗೆ ಅನೇಕಸಾರಿ ತಿಳಿಯಹೇಳಿದೆ. ಆದರೆ ಅದು ಅವಳಿಗೆ ಅರ್ಥವಾಗುವುದಿಲ್ಲ.

ಕಾರಣವಿಷ್ಟೆ· ಅವಳು ಜಗತ್ತಿನಂತೆ ಸಂಭಾವಿತಳಲ್ಲ. ಡಾಕ್ಟರ್ ಸ್ಟಾಕ್‌ಮನ್‌ನ Compact liberal majority ಗುಂಪಿಗೆ ಸೇರಿದವಳಲ್ಲ.

ಹೂಂ, ಬಡಪಾಯಿಯಾದ ಪ್ರೇಮಮೂರ್ತಿಯಾದ ಶಾರದೆ.

❋

# ಪರಿತ್ಯಕ್ತ

೧

ಶಾರದೆಯು ಎರಡು ಮೂರು ದಿನಗಳಿಂದಲೂ ನನ್ನಲ್ಲಿಗೆ ಬಂದಿರಲಿಲ್ಲ. ಕಾರಣವೇನೋ ತಿಳಿಯದು.

ಪ್ರತಿದಿನವೂ ಬರುತ್ತಿದ್ದವಳು ಹೀಗೇಕೆ ಉದಾಸೀನತೆ ವಹಿಸಿದಳೆಂದು ನನಗೆ ತೋಂದರೆಗಿಟ್ಟಿತು. ಪ್ರಾಯಶಃ ಅನಿವಾರ್ಯವಾದ ಕಾರಣವಿರಬೇಕು. ಏಕೆಂದರೆ ನಾವು ಒಬ್ಬರನ್ನೊಬ್ಬರು ನೋಡದೆ, ಅಗಲಿರುವುದು ಬಹು ಅಪರೂಪ.

ವಸತಿಯು ಬೇರೆ ಇದ್ದರೂ ಅನೇಕ ವೇಳೆಗಳಲ್ಲಿ ಬಹುಸಾರಿ ನಾವು ಸದಾ ಸಂಗಡಲೇ ಇರುತ್ತಿದ್ದೆವು.

ಈ ಸಮಾಧಾನಗಳಿಂದ ಯಾವ ಪ್ರಯೋಜನವೂ ಇಲ್ಲ; ಯಾರಿಗೂ ಉಪಯೋಗವಿಲ್ಲ. ಸಾಧಕ ಬಾಧಕಗಳ ಉಪಯುಕ್ತತೆಯು ಕಾಣಬರದೆ ಹೋಗಿ ಮನಸ್ಸು ಮಾತ್ರ ಕಾತರಗೊಳ್ಳುವುದು. ಆಗ ಅವಳಲ್ಲಿಗೆ ಒಂದು ಸಾರಿ ಹೋಗಿಬರಬೇಕೆಂದು ತೋರುವುದು. ಮರುಕ್ಷಣದಲ್ಲಿಯೇ ಅದು ಅಳಿಸಿ ಹೋಗುವುದು.

ಅವಳು ಇಲ್ಲಿಗೆ ಬಾರದಿರುವುದನ್ನು ನೋಡಿದರೆ ಪ್ರಾಯಶಃ ಊರು ಬಿಟ್ಟು ಎಲ್ಲಿಗೋ ಹೋಗಿರಬೇಕು—ಎಂಬ ಊಹೆಯು ಬರುವುದು.

ಹೂಂ ಹಾಗೂ ಹೀಗೂ ನನ್ನ ಪಾಡು "ಸರೋಜನಿಯುಂದನಿಗಲ್ದಿ—ಅಂಬರ ಮೊದಲೆ ಬಯಲಾಯ್ತು" ಎಂದು ಕವಿಯೊಬ್ಬನು ಹೇಳಿದ್ದಂತೆ ಆಯಿತು. ಇದು ನ್ಯಾಯ "ಲೋಕಬಾಹಿರರೋಜೆಯಾಯ್ತು."

ಆದರೆ ಆ ರಾಜನೋ ಇಲ್ಲವೇ ಸೂರ್ಯನೋ ಆ—ಪದ್ಯದಲ್ಲಿ ಶ್ಲೇಷಾಲಂಕಾರವಿದೆ. ಪಶ್ಚಿಮಾಚಲವನ್ನು ಏರಿ ಅಸುದೊರೆಯಲು ಪ್ರಯತ್ನಿಸಿದನೆಂದು ಕವಿಯು ಹೇಳಿರುವನು. ಆದರೆ ನಾವು ಹಾಗೆ ಮಾಡಲು ಸುಸಾಧ್ಯವಾದುದಲ್ಲ.

ಅದು ಕವಿಯ ಸಾಮ್ರಾಜ್ಯ; ನನ್ನದು ಕೇವಲ ಪಾರ್ಥಿವ ಜೀವನ-ರಾಜ್ಯ. ಒಂದು ಕಾವ್ಯದ ಧ್ವನಿ; ಇನ್ನೊಂದು ಕಾತರಿಸುವ ಬೇಕೆನ್ನುವ ಜೀವನವನ್ನು ಬಯಸುವ ಧ್ವನಿ.

ನಾಟಕದಲ್ಲಿ ಮಾತ್ರ ಇವೆರಡಕ್ಕೂ ಸಂಬಂಧ. ಲೌಕಿಕದಲ್ಲಿ ಯಾವ ಬಾದರಾಯಣ ಸಂಬಂಧವೂ ಇಲ್ಲ

ಜೀವನದ ನಿರಂತರವಾದ ವೃತ್ತಿಯು ಮುಂದೆ ಮುಂದೆ ಸಾಗಲೇ ಬೇಕು. ಆದರಿಂದ ಪಾರಾಗಿ ಹೊರಗಾಗಲು ಜೀವನವು ಕಾದಂಬರಿಯಂತೆ ಎಷ್ಟು ಕಾವ್ಯಮಯವಾಗಿದ್ದರೂ ಸಹಾ–ಬೇರಾಗಲು ಯಾರಿಗೂ ಸಾಧ್ಯ ವಿಲ್ಲ.

ಇದರಿಂದಲೇ ಇರಬಹುದು "ಅವರವರ ಅರ್ಚನೆಗೆ, ಅವರವರ ದರ್ಶನಕೆ" ಎಂದು ಷಡಕ್ಷರಿಯು ಬರೆದಿರುವುದು.

ಇಲ್ಲ, ಇಲ್ಲ, ಈ ವಿಚಾರತರಂಗಗಳಿಂದ ನನ್ನ ಮನಸ್ಸಿನಲ್ಲಿರುವ ಆವೇಗವನ್ನು, ಯೋಚನೆಯ ತೀವ್ರಗತಿಯನ್ನು ಹೊರತಳ್ಳಲು ಸಾಧ್ಯವಿಲ್ಲ.

ಶಾರದೆಯು ಮೂರು ದಿನಗಳಿಂದಲೂ ಬರಲಿಲ್ಲ, ಬಂದಿರಲಿಲ್ಲ ಈಗ ಕೇವಲ ಅವಳ ನೆನಪು, ಅವಳ ಧ್ಯಾನ.

ಯೋಚಿಸುತ್ತಾ, ಯೋಚಿಸುತ್ತಾ ಸನಿಯದಲ್ಲಿ ಕುರ್ಚಿಯನ್ನು ಎಳೆದುಕೊಂಡು ಕುಳಿತುಕೊಂಡೆ. ಸ್ವಲ್ಪ ಜಂಪು ಹತ್ತಿತು.

೨

ಹರಿಹರನು ನಮ್ಮ ಪ್ರಾಂತದವನಲ್ಲ. ಮಲೆಯಾಳದಿಂದ ಬಂದು ಇಲ್ಲಿ ವ್ಯಾಸಂಗ ಮಾಡುತ್ತಿದ್ದನು. ಅವನು ಇಲ್ಲಿಗೆ ಮೊದಲು ಬಂದಾಗ ಅವನಿಗೆ ಸುಮಾರು ಹನ್ನೆರಡು ವರ್ಷ ವಯಸ್ಸು ಇರಬಹುದಿತ್ತು.

ಹರಿಹರನ ತಂದೆ-ತಾಯಿಗಳು ಇಲ್ಲಿಯೇ ಬಂದು ನೆಲೆಸಿದ್ದರು. ಅವರ ಸಂಸಾರದಲ್ಲಿನ ಇನ್ನೊಬ್ಬ ವ್ಯಕ್ತಿಯೆಂದರೆ ಅವರ ಮಗಳಾದ ಪಾರ್ವತಿ.

ಪಾರ್ವತಿಯೆಂದರೆ ಸಾಧಾರಣವಾಗಿ ತಿಳಿಯುವುದಿಲ್ಲ. ಅವಳಿಗೆ-ಅವರು ಊರಿಗೆ ಬಂದಾಗ-ಎಂಟು ವರ್ಷಗಳಾಗಿದ್ದವು. ಇನ್ನೂ ಬಾಲಿಕೆ.

ಅವಳ ನೀಳವಾದ ಸುಕೋಮಲವಾದ ದೇಹ, ಚಂಚಲನಯನಗಳು, ಸದಾ ಚಂದ್ರನನ್ನು ಹಾಸ್ಯ ಮಾಡುತ್ತಿದ್ದಂತೆ ತೋರುತ್ತಿದ್ದ ಚಿರನಗುವು ಎಲ್ಲರನ್ನೂ ಮನಸೆಳೆದು ಅವಳ ಪರಿಚಯುವನ್ನು ಮಾಡಿಕೊಳ್ಳುವಂತೆ ಹುರಿದುಂಬಿಸುತ್ತಿದ್ದವು. ಅವಳ ಮುಂಗುರುಳು ಯಾವ ಹಿಡಿತಕ್ಕೂ ಸಿಕ್ಕದೆ ದಿನವೆಲ್ಲ ಅವಳ ಮುಖದ ಮೇಲೆ ಹರಿದಾಡುತಿದ್ದವು. ವಿಸ್ತಾರವಾದ ಅವಳ ಹಣೆಯಲ್ಲಿ ಮುದ್ದಾದ ವಿಭೂತಿಯ ಗುರುತು. ಅದರ ಮೇಲೆ ಒಂದು ಕುಂಕುಮದ ಬೊಟ್ಟು.

ಬಡಗಲನಾಡಿನ ಹೆಣ್ಣುಮಗು, ಅದರಲ್ಲಿಯೂ ರೂಪುಳ್ಳ ಹೆಣ್ಣು ಆ ಬಾಲಿಕೆ.

ಕೇವಲ ಈ ಸೌಂದರ್ಯನಿಧಿ ಅವಳಲ್ಲ. ಪಾರ್ವತಿಯಲ್ಲಿ ಮತ್ತೊಂದು ಗುಣವಿಶೇಷವಿತ್ತು. ಅವಳು ಯಾವಾಗಲೂ ಸುಮ್ಮನೆ ಕೂಡುತ್ತಿರಲಿಲ್ಲ. ಒಂದಲ್ಲ ಒಂದು ಚೇಷ್ಟೆಯಲ್ಲಿ, ಆಟ-ಪಾಟದಲ್ಲಿ ಅವಳು ಮಗ್ನಳಾಗಿರುತ್ತಿದ್ದಳು. ಏನೋ ತೋರಲು ಒಮ್ಮಿಂದೊಮ್ಮೆ ನಗುವಳು, ಹಾಡುವಳು; ಇಲ್ಲವೇ ಸಂತಸಗೊಂಡು ನರ್ತಿಸುವಳು.

ಪಾರ್ವತಿಯಂತಹ ಹುಡುಗಿಯನ್ನು ನಾನು ಎಲ್ಲಿಯೂ ನೋಡಿಲ್ಲ, ನೋಡುವಂತಿಲ್ಲ.

ಅವಳಿಗೆ ಹಿಮವಂತ ಕುವರಿಯ ಹೆಸರಿದ್ದರೂ, ಅವಳ ಸ್ವಭಾವವು ಮಾತ್ರ ಇನ್ನೂ ಸಂಪೂರ್ಣವಾಗಿ ವಿಕಸಿಸದಿರುವ ಕಮಲದಂತೆ ಇದ್ದಿತು.

ನೀವು ಎಂದಾದರೂ ಪಶ್ಚಿಮ ಘಟ್ಟಗಳ ಬನದಲ್ಲಿ ಸಂಚಸಿದ್ದರೆ ಅಲ್ಲಿ ಸಂಜೆಯ ವೇಳೆಯಲ್ಲಿ ಬರುವ ಸುಮಧುರ ಕುಸುಮವಾಸನೆಯ ಪರಿಚಯವು ನಿಮಗಿರಬಹುದು. ಕಾರ್ಮುಗಿಲು ಹರಡಿದ್ದ ದಿನದಲ್ಲಿ ಸೂರ್ಯದರ್ಶನವನ್ನು ನೀವು ಮಾಡಿರಬಹುದು.

ಪಾರ್ವತಿಯು ಈ ಅನುಭವಗಳಿಗಿಂತಲೂ ಮಿಗಿಲಾದವಳು. ಅವಳು ಯಾವ ಹೋಲಿಕೆಯೂ ಸರಿಬರುವುದಿಲ್ಲ-ಅವಳು ಪಾರ್ವತಿ. ಅವಳನ್ನು ನೋಡಿದರೇನೇ ನಿಮಗೆ ಅರ್ಥವಾಗುವುದು. ಇಲ್ಲದಿದ್ದರೆ ಇಲ್ಲ.

ಇದರ ಒಳಗುಟ್ಟು ಪಶ್ಚಿಮ ಘಟ್ಟಗಳ ತಪ್ಪಲಲ್ಲಿರುವ ನಿಸರ್ಗ ಸೌಂದರ್ಯ ನೋಡಿರುವವರಿಗೆ ಮಾತ್ರ ತಿಳಿಯುವುದು.

ಅವರು ಊರಿಗೆ ಬಂದಂದಿನಿಂದಲೂ ನನಗೂ ಅವರಿಗೂ ಪರಿಚಯವಾಯಿತು. ಹರಿಹರನು ಶಾಲೆಗೆ ಸೇರಿದ ಮೇಲೆ ಇದು ಇನ್ನೂ ಬೆಳೆಯಿತು. ಅಲ್ಲದೆ ನಾವಿಬ್ಬರೂ ಒಂದೇ ವರ್ಗದಲ್ಲಿ ಓದುತ್ತಿದ್ದೆವು.

ಸಹಾಧ್ಯಾಯಿಗಳಾದುದರಿಂದ ಹರಿಹರನಿಗೂ, ನನಗೂ ಅವನಿಂದ ಅವನ ಮನೆಯವರೆಲ್ಲರಿಗೂ ಬಹಳ ಪರಿಚಯವಾಯಿತು. ದಿನಗಳು ಕಳೆದು ಹೋದಂತೆ ಪರಿಚಯವು ಸ್ನೇಹದಲ್ಲಿಯೂ, ಸ್ನೇಹವು ಪ್ರೀತಿ-ವಿಶ್ವಾಸಗಳಲ್ಲಿಯೂ ಬೆರೆತು ಹೋಯಿತು. ಅತ್ಯಲ್ಪ ಕಾಲದಲ್ಲಿಯೇ ನಾನು ಅವರ ಮನೆಯವರಲ್ಲಿ ಒಬ್ಬನಾಗಿ ಬಿಟ್ಟೆ.

ಇದೇ ವೇಳೆಗಳಲ್ಲಿ ನನಗೂ ಪಾರ್ವತಿಗೂ ಬಹಳ ಗೆಳೆತನವಾಯಿತು. ಅವಳ ಆಟ-ಪಾಟಗಳಲ್ಲಿ, ನೋಟಗಳಲ್ಲಿ, ತಿಂಡಿ-ತಿನಸುಗಳಲ್ಲಿ ನಾನು ಸದಾ ಭಾಗಿ. ನನ್ನನ್ನು ಬಿಟ್ಟು ಆ ಹುಡುಗಿಯು ಏನನ್ನೂ ಮಾಡುತ್ತಿರಲಿಲ್ಲ

ಇದನ್ನು ಕಂಡ ನಮ್ಮ ಮನೆಯವರೇ ಆಗಲೀ ಅವರ ಮನೆಯವರೇ ಆಗಲಿ ಅಪಹಾಸ್ಯ ಮಾಡಿದರೆ ಅವಳು ನಗುತ್ತಾ, “ ನಮ್ಮದು ಇಬ್ಬರದೂ ಒಂದು ಸಂಸಾರ–ನಾವು ಮದುವೆ ಮಾಡಿಕೊಳ್ಳುತ್ತೇವೆ ” ಎಂದು ಸಹಜವಾಗಿ ಹೇಳುತ್ತಿದ್ದಳು.

ಇದು ಯಾರಿಗೂ ಏನೂ ತಪ್ಪೆಂದು ತೋರಿಬರುತ್ತಿರಲಿಲ್ಲ. ಅವಳು ಸಣ್ಣ ಹುಡುಗಿ, ನಾನು ಹುಡುಗ. ಸಾಲದುದಕ್ಕೆ ಜಾತಿ, ಪ್ರಾಂತ ಮೊದಲಾದ ಅನೇಕ ಭೇದಗಳಿದ್ದವು. ಆದರಿಂದ ನಮ್ಮ ಹಿರಿಯರು ಅದೇ ರೀತಿ ಹಾಸ್ಯದಲ್ಲಿ “ ಸರಿ, ಒಳ್ಳೆಯ ಗಂಡ–ಹೆಂಡತಿಯರು. ಸೋದರ ಕಡೆಯಾಗಿದ್ದರೆ ಚೆನ್ನಾಗಿರುತ್ತಿತ್ತು. ಈಗ ನೀವಿಬ್ಬರೂ ಏನು ಮಾಡಿದರೂ ನಿಮ್ಮ ಮದುವೆಯಾಗುವುದಿಲ್ಲ ” ಎಂದು ಅವಳನ್ನು ಪೀಡಿಸಿ, ಸಿಟ್ಟುಗೆಬ್ಬಿಸಲು ಯತ್ನಿಸುತ್ತಿದ್ದರು. ಕೆಲವು ಸಾರಿ ನಮ್ಮ ಹಿರಿಯರ ಪ್ರಯತ್ನವು ಸಾಧಿಸುತ್ತಿತ್ತು.

ನಮ್ಮ ಗೆಳೆತನವು–ಪಾರ್ವತಿಯ ಹಾಗೂ ನನ್ನ ವ್ಯವಹಾರವು–ಸಹಜರೀತಿಯಿಂದ ಬೆಳೆದುಕೊಂಡು ಬಂದಿತು. ಅದಕ್ಕೆ ಯಾವ ಅಡ್ಡಿಯೇ ಆಗಲಿ, ಆತಂಕವೇ ಆಗಲಿ ಇರಲಿಲ್ಲ.

ಆದರೆ ನಮ್ಮಿಬ್ಬರಿಗೂ ತಿಳಿಯದಂತೆ ಬೇರೊಂದು ಮಹಾಕಾರಣವು ನಮ್ಮ ಜೀವನದಲ್ಲಿ ತನ್ನ ನೆರಳನ್ನು ಮುಂದೆ ಹಾಕಿದ್ದಿತು. ಇದು ನಮ್ಮ ಹಿರಿಯರಿಗೂ ಗೋಚರವಾಗಲಿಲ್ಲ. ನಮಗೂ ತಿಳಿಯಲಿಲ್ಲ.

ನಾವು ಸದಾ ಸಂಗಡ ಇರುತ್ತಿದ್ದುದರಿಂದ ನಮ್ಮ ಪರಸ್ಪರ ಸ್ವಭಾವಗಳ ಪರಿಚಯವು ಬಹಳ ಚೆನ್ನಾಗಿ ಆಗಿತ್ತು. ಹರಿಹರನು ಈ ಸಹಾನುಭೂತಿವರ್ತನೆಯನ್ನು ಕಂಡು ನಗುತ್ತಿದ್ದನು, ಹಾಸ್ಯಮಾಡುತ್ತಿದ್ದನು. ಕೆಲವು ಸಾರಿ ಬೇಸರಗೊಂಡು ಬೈಯುತ್ತಿದ್ದನು. ಆದರೆ ಇದರಿಂದ ಪಾರ್ವತಿಗಾಗಲೀ, ನನಗಾಗಲೀ ಯಾವ ದುಃಖವೂ ಆಗುತ್ತಿರಲಿಲ್ಲ. ಸ್ವಲ್ಪವೂ ನೋವು ಇರಲಿಲ್ಲ.

ಕಾರಣವಿಷ್ಟೆ, ಹರಿಹರನು ನಮ್ಮ ಬಂಧು, ಗೆಳೆಯ. ಹರಿಹರನ ತಾಯಿಯನ್ನು ನಾನು ಸಲಿಗೆಯಿಂದ ಅತ್ತೆಯೆಂದು ಕರೆಯುತ್ತಿದ್ದೆನು.

ಈ ವರಸೆ–ನಾತಿಗಳಿಂದ ಎಲ್ಲರಿಗೂ ನಗು. ಅನೇಕ ಸಂದರ್ಭಗಳಲ್ಲಿ ನಮಗೂ ನಗೂ ಬರುತಿತ್ತು. ಆದರೆ ಅದರ ಕಡೆಗೆ ನಾವು ಯಾರೂ ಗಮನಿಸುತ್ತಿರಲಿಲ್ಲ.

× × × ×

ವಯಸ್ಸಿಗೆ ತಕ್ಕಂತೆ ಆಗಬೇಕಾಗಿದ್ದ ಬದಲಾವಣೆಗಳು ನಮ್ಮಲ್ಲಿ ಆಗಿ ಹೋಗಿದ್ದವು. ನಮ್ಮ ವ್ಯವಹಾರದಲ್ಲಿ ಸ್ವಲ್ಪ ವ್ಯತ್ಯಾಸವು ಬಂದಿದ್ದರೂ ಬಳಿಕೆಯಲ್ಲಿದ್ದ ವಿಶ್ವಾಸದಲ್ಲಿ ಯಾವ ವಿಧವಾದ ಕುಂದೂ ಬಂದಿರಲಿಲ್ಲ. ವಯೋಮಾನಕ್ಕೆ ಅನುಸರಿಸಿ ಹಾಸ್ಯವನ್ನು ಸ್ವಲ್ಪ ಕಡಿಮೆ ಮಾಡಿದ್ದೆವು. ಸಾಲದುದಕ್ಕೆ ಸ್ವಲ್ಪ ಗಾಂಭೀರ್ಯವನ್ನು ತಾಳಿದ್ದೆವು.

ಆಟದಿಂದಲೂ ವ್ಯಾಯಾಮದಿಂದಲೂ ನನ್ನ ದೇಹವು ಬಹಳ ಸದೃಢವಾಗಿತ್ತು. ಹರಿಹರನದು ಸ್ವಲ್ಪ ಸೂಕ್ಷ್ಮ. ಪಾರ್ವತಿ!

ಪಾರ್ವತಿಯನ್ನು ಈಗ ನೀವು ನೋಡಿದರೆ ಅಂತಹ ಸೊಬಗಿನ ಸೀಮೆಯನ್ನು ಎಂದೂ ಕಂಡಿಲ್ಲವೆಂದು ನಿಶ್ಚಯವಾಗಿ ಸಾರುತ್ತಿದ್ದಿರಿ.

ಸಹ್ಯಾದ್ರಿಪರ್ವತ ಪಂಙ್ತಿಯನ್ನು ನೀವು ವೈಶಾಖಮಾಸದಲ್ಲಿ ನೋಡಿರಬಹುದು. ಅದರ ಸೌಂದರ್ಯವನ್ನು ನೋಡಿ ಅಚ್ಚರಿಪಟ್ಟಿರಬಹುದು.

ಆಣೇಕಟ್ಟಿನಿಂದ ಹೆಚ್ಚಾಗಲು ಹೊರಗೆ ಬಿಟ್ಟ ಮಹಾ ಪ್ರವಾಹದ ವೈಭವವನ್ನು ನೀವು ನೋಡಿರಬಹುದು.

ಜಗತ್ತಿನಿಂದ ಹೊರಗಾಗಿ ಮುಕ್ತಿಯನ್ನು ಪಡೆಯಲು ಹೊರಬಿದ್ದಿರುವ ಸಿದ್ಧನ ಮೃದುಮಧುರವಾದ ಮಂದಸ್ಮಿತವನ್ನು ನೀವು ನೋಡಿ "ಇದು ಎಂತಹ ಕಿರುನಗೆ" ಎಂದು ಮೂಗಿನಮೇಲೆ ಕೈಯಿಟ್ಟಿರಬಹುದು.

ಆದರೆ ಪಾರ್ವತಿಯ ರೂಪನ್ನು, ಏರಿಕೆಯ ಯೌವನವನ್ನು ನೀವು ನೋಡಿದ್ದರೆ ಮುಗ್ಧರಾಗುತ್ತಿದ್ದಿರಿ; ಬೆಚ್ಚಿ ಮಂಕಾಗುತ್ತಿದ್ದಿರಿ.

ಪಾರ್ವತಿಯನ್ನು ನೋಡಿದೊಡನೆಯೇ, ಸನ್ಯಾಸವೃತ್ತಿಗೆ ನಿಶ್ಚಯ ಮಾಡಿಕೊಂಡಿದ್ದ ಪರಶಿವನು ಸಹ ಅವಳನ್ನು ಕಲ್ಯಾಣಮಾಡಿಕೊಳ್ಳಬೇಕೆಂಬ ಮಹದಾಶೆಯಿಂದ ಪುರೋಹಿತನನ್ನು ಸಂಗಡಕರೆದುಕೊಂಡು ಬಂದು ಪಾರ್ವತಿಯಬಳಿ ಸಾರಿ "ಲಾವಣ್ಯಮಯಿ, ನನ್ನನ್ನು ಬೇಡವೆನ್ನದೆ ಮದುವೆಮಾಡಿಕೊಂಡು ಉದ್ಧರಿಸು" ಎಂದು ಅಂಗಲಾಚುತಿದ್ದನೆಂದು ನನ್ನ ಬಲವಾದ ಊಹೆ.

ಮೇನಕೆಯಿಂದ ಹೊರಹೊರಟ ವಿಶ್ವಾಮಿತ್ರನು ಪಾರ್ವತಿಯನ್ನು ನೋಡಿದ್ದರೆ ಮತ್ತೊಮ್ಮೆ ಸಂಸಾರಿಗನಾಗಿ ನಿಂತು ತನ್ನ ಮಹೋದ್ದೇಶವನ್ನು ಮರೆತು ಬಿಡುತ್ತಿದ್ದನೆಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ.

ನನ್ನ ಭಾವನೆಯಲ್ಲಿ ಪಾರ್ವತಿಯಂತಹ ಲಾವಣ್ಯಮಯಿಯಾದ ಹೆಣ್ಣು ವಿಸ್ತಾರವಾದ ಜಗತ್ತಿನಲ್ಲಿ ಇಲ್ಲವೆಂಬುದು ನಿಶ್ಚಯವಾದ ಅವಿಚಲವಾದ ನಂಬುಗೆ.

ವಯಸ್ಸು ಬಂದುದರಿಂದ ನಾವು ಮೂವರೂ ಮೊದಲಿನಂತೆ ಯಾವಾಗಲೂ ಜತೆಯಲ್ಲಿರಲು ಕಾರಣಾನಂತರಗಳಿಂದ ಸಾಧ್ಯವಾಗುತ್ತಿರಲಿಲ್ಲ. ಆದರೂ ಹೊತ್ತು ಸಾಧಿಸಿ ಆದಷ್ಟುವೇಳೆ ಸಂಗಡ ಇರುತ್ತಿದ್ದೆವು. ಅನುವು ದೊರೆತಾಗ ಬಹಳ ಹೊತ್ತಿನವರೆಗೂ ಕಾಲಹರಣ ಮಾಡುತ್ತಿದ್ದೆವು.

ನಮ್ಮೀ ವ್ಯವಹಾರವನ್ನು ನೋಡಿ ನಮ್ಮ ಮನೆಯವರು ನನ್ನ ನಡತೆಯು ಸರಿಯಾಗಿಲ್ಲವೆಂದೂ, ನನ್ನ ಸ್ನೇಹಿತರ ಸಂಗಡ ಬಹಳ ಕಾಲ

ವ್ಯಯವಾಗುತ್ತಿರುವುದೆಂದೂ, ಇದರಿಂದ ನನಗೆ ಅನರ್ಥವಾಗುವುದೆಂದೂ ನನಗೆ ಹಿತವಾದ ಹೇಳಿದರು. ನಾನು ಇದಕ್ಕೆ ಉತ್ತರವೀಯದೆ ಸುಮ್ಮ ನಿರುತ್ತಿದ್ದೆ.

ಪಾರ್ವತಿಯ ಮನೆಯಲ್ಲಿ ಈ ತೊಂದರೆಯಿರುತ್ತಿರಲಿಲ್ಲ. ನಾನು ಮೊದಲೇ ಹೇಳಿದಂತೆ ಅವರ ವ್ಯವಹಾರವು ನಮ್ಮದಕ್ಕಿಂತಲೂ ಸುಧಾರಿಸಿದುದು.

ಈ ದಿನಗಳಲ್ಲಿ ನಮ್ಮಲ್ಲಿ ಆಗಿದ್ದ ಬದಲಾವಣೆಯ ಪರಿಚಯವು ನನಗೆ ಆಯಿತು.

ವಯಸ್ಸು ಬಂದಮೇಲೆ ನಮ್ಮ ಮೊದಲಿನ ಸರಳವ್ಯವಹಾರಕ್ಕೆ ಆಟ ನೋಟಗಳಿಗೆ, ಮಾತುಕತೆಗಳಿಗೆ ಯಾವ ಕಾರಣದಿಂದಲೋ ಏನೋ ಸಾಧ್ಯವಾಗುತ್ತಿರಲಿಲ್ಲ. ಮನಸ್ಸಿನಲ್ಲಿ ತರಂಗ ತರಂಗಳಾಗಿ ಏಳುತ್ತಿದ್ದ ಭಾವನೆಯಲ್ಲಿ ಒಂದು ವಿಧವಾದ ವಿದ್ಯುಲ್ಲತೆಯು ಸಂಚರಿಸುತ್ತಿತ್ತು. ಅದನ್ನು ಇಂತಹದೆಂದು ನಿರ್ದಿಷ್ಟವಾಗಿ ಹೇಳಲಾರದವನಾಗಿದ್ದೆ.

ಮನಸ್ಸಿನಲ್ಲಿ–ಇಬ್ಬರಲ್ಲಿಯೂ–ಏನೋ ಒಂದು ವಿಧವಾದ, ಅವ್ಯಕ್ತವಾದ ರೂಪುದೋರದ ಆಶೆ, ಭಾವನೆ, ಅಂಜಿಕೆ, ಉದ್ದೇಶ, ಸಂತಸ, ಲಜ್ಜೆ ಮೊದಲಾದುವುಗಳ ಸಮ್ಮೇಲನವಾಗಿ ಅನುದಿನವೂ ಒಂದು ಸಮಾರಂಭವಾಗಿತ್ತು. ಆದರೂ ನಾವಿಬ್ಬರೂ ಒಂದಲ್ಲ ಒಂದು ಕಾರಣದಿಂದ ಸ್ವಲ್ಪ ಹೊತ್ತಾದರೂ ಜತೆಯಲ್ಲಿ ಕಾಲವನ್ನು ಕಳೆಯುತ್ತಿದ್ದೆವು.

ಒಂದು ದಿನ ನಾವಿಬ್ಬರೂ ಹೊರಗೆ ಹೋಗಿದ್ದಾಗ ನಮ್ಮ ಪೂರ್ವ ಪರಿಚಯದವರೊಬ್ಬರು ನಮಗೆ ಸಂಧಿಸಿದರು. ಮಾತಿನ ಭರದಲ್ಲಿ ಮದುವೆ ಪ್ರಸ್ತಾಪ ತೆಗೆದು “ ಇನ್ನೇನು, ಪಾರ್ವತಿಯು ಮದುವೆ ಆಗಿ ಗಂಡನ ಮನೆಗೆ ಹೋಗಬೇಕು ” ಎಂದು ಹೇಳಿದರು.

ಅದಕ್ಕೆ ಅವಳು ಉತ್ತರಗೊಡಲಿಲ್ಲ ಆದರೂ ಅವರು ಸುಮ್ಮನಿರದೆ ನನ್ನನ್ನು ನೋಡಿ “ ಏನಪ್ಪಾ, ನಿನ್ನ ಮದುವೆಯ ಔತಣ ಯಾವಾಗ ? ” ಎಂದು ಹಾಸ್ಯ ಮಾಡಿದರು.

ಸಂಗಡ ಹರಿಹರನೂ ಇದ್ದ. ಅವನು ಯಾವಾಗಲೂ ಹುಡುಗಾಟದ ಮೂರ್ತಿ. ಸುಮ್ಮನಿರದೆ “ ಇಲ್ಲ, ಸಾರ್. ಪಾರ್ವತಿಗೂ ಅವನಿಗೂ

ಮೊದಲೇ ಗೊತ್ತಾಗಿದ್ದ ಹಾಗೆ ಮದುವೆ. ಆಗ ನಿಮ್ಮನ್ನು ಕರೆಯಲ್ಕು ಮರೆಯುವುದಿಲ್ಲ" ಎಂದು ನುಡಿದು ಬಿಟ್ಟ.

ಈ ವಚನವನ್ನು ಕೇಳಿ ಪಾರ್ವತಿಯು ತಲೆತಗ್ಗಿಸಿದಳು. ನಾನು ಹರಿಹರನಿಗೆ ಸುಮ್ಮನಿರಹೇಳಿ, ಸಿಳ್ಳುಹಾಕಲು ಯತ್ನ ಮಾಡಿದೆ. ಆದರೆ ಈ ಸಂದರ್ಭವನ್ನು ಅರಿಯದೆ ನಮ್ಮ ಪರಿಚಿತರು. "ಹರಿಹರ, ಇನ್ನು ಮೇಲೆ ಹುಡುಗಾಟವಾಡಬೇಡ. ಅವನಿಗೂ ವಯಸ್ಸಾಯಿತು. ಪಾರ್ವತಿಗೂ ವಯಸ್ಸಾಯಿತು. ಅವರಿಬ್ಬರಿಗೆ ಮದುವೆಯೆಂದರೆ ಏನು ಹುಡುಗಾಟ? ನೀವು ಮಲೆಯಾಳಿಗಳು, ಇವರು ಮೈಸೂರಿನವರು ಇನ್ನು ಮೇಲೆ ಈ ರೀತಿ ಹಾಸ್ಯ ಚೆನ್ನಾಗಿರುವುದಿಲ್ಲ" ಎಂದು ಗದರಿಸಿ ಉಪದೇಶ ಮಾಡಿದರು.

ನಾನು ಹಾಗೂ ಹೀಗೂ ಭಗೀರಥ ಪ್ರಯತ್ನ ಮಾಡಿ ಅವರಿಂದ ಬಿಡಿಸಿಕೊಂಡು ಹೊರಡಲು ಯತ್ನಿಸಿದೆ. ಸ್ವಲ್ಪ ಕಾಲದ ನಂತರ ಇದು ಸಾಧ್ಯವಾಯಿತು ಏನು ಉದ್ದೇಶವಿಲ್ಲದೆ, ಏನೋ ಹರಟುತ್ತಾ ಆ ದಿನ ಮನೆಯನ್ನು ಸೇರಿದವು.

ಮರುದಿನ ನಾನು ಪಾರ್ವತಿಯ ಮನೆಗೆ ಹೋಗಿ ಅವಳನ್ನು ತೋಟಕ್ಕೆ ಒಯ್ದು ತಿರುಗಾಡಲು ಆರಂಭಿಸಿದೆ. ಸ್ವಲ್ಪ ಹೊತ್ತಿನ ಬಳಿಕ ಅವಳನ್ನು ಕುರಿತು "ಪಾರು" ಎಂದೆ.

ಅವಳು "ಏನು?" ಎಂದು ಕೇಳಿದಳು.

'ಪಾರು, ನಿನ್ನೊಡನೆ ನಾನು ಇಂದು ಮನಬಿಚ್ಚಿ ಮಾತಾಡಬೇಕಾಗಿದೆ. ನೀನು ಬೇರೆ ಭಾವಿಸಬಾರದು.'

"ಅಂತಹದೇನು?"

"ಈಗ ನೋಡು, ಕೆಲವು ವರ್ಷಗಳಿಂದಲೂ ನಾನೂ ನೀನೂ ಕೂಡಿ ಆಡಿ ಬೆಳೆದೆವು. ಈಗ ಇಬ್ಬರಿಗೂ ವಯಸ್ಸು ಬಂದಿದೆ."

"ಹೌದು."

"ಹಿಂದೆ ಮದುವೆಯ ವಿಷಯದಲ್ಲಿ ನೀನು ಹೇಳುತ್ತಿದ್ದುದು ನಿನಗೆ ನೆನಪಿದೆಯೆ?"

"ಇದೆ."

" ಆಗ ಅದು ಹುಡುಗಾಟವಾಗಿತ್ತು. ಈಗ ಅದು—" ಮುಂದೆ ನಾನು ಹೇಳಲಿಲ್ಲ. ಅವಳೇ ಪ್ರಶ್ನೆ ಮಾಡಿದಳು. ನಾನು ಮುಂದುವರಿಸ ಬೇಕಾಗಿ ಬಂದಿತು.

" ಈಗ ಅದು ಗಹನವಾದ ವಿಷಯು. ಆಗಿದ್ದ ನನ್ನ ಹುಡುಗಾಟ ಈಗ ನನ್ನಲ್ಲಿಲ್ಲ. ಆ ಹಾಸ್ಯವಿಲ್ಲ. ನಿನ್ನಲ್ಲಿದ್ದ ಆ ಸರಳ ಸ್ನೇಹವಿಲ್ಲ."

" ಹೂಂ. "

" ನಿನ್ನ ಮದುವೆ ಯಾವಾಗ ? "

" ಅಂದರೆ ? "

" ನಿನ್ನ ಮದುವೆ ? "

ಮಾರುಪ್ರಶ್ನೆಯು ಬಂದಿತು. " ನಿನ್ನ ಮದುವೆ ? "

" ಹುಡುಗಾಟ ಮಾಡಬೇಡ, ನಿನಗೆ ಸಾಕಷ್ಟು ವಯಸ್ಸಾಗಿದೆ.— ಹೇಳು ನಿನ್ನ ಮದುವೆ ಯಾವಾಗ ? "

" ನನ್ನ ಮದುವೆ ಆಗಿದೆ "

ನನಗೆ ಅರ್ಥವಾಗಲಿಲ್ಲ. ಅವಳ ಹುಡುಗಾಟದ ದಿನಗಳು ಇನ್ನೂ ಮುಗಿದಿಲ್ಲವೆಂದು ನನಗೆ ತೋರಿತು. ಸ್ವಲ್ಪ ಸಿಟ್ಟಿನಿಂದ ಹೇಳಿದೆ.

" ಹುಚ್ಚು, ಹುಚ್ಚು ಮಾತು ಬೇಡ ? "

" ನಾನಲ್ಲ ಹುಚ್ಚು, ನೀನು ಹುಚ್ಚು. ನಿಜವಾಗಿಯೂ ನನ್ನ ಮದುವೆ ಆಗಿದೆ.

" —ಸರಿ. ನಿನ್ನ ಮದುವೆ ಯಾವಾಗ ? "

ನಾನು ಉತ್ತರಗೊಡಲಿಲ್ಲ. ಮುಖವನ್ನು ತಗ್ಗಿಸಿ ಸುಮ್ಮನಿದ್ದೆ. ಪುನಃ ಮುಖವನ್ನು ಮೇಲೆತ್ತಿ ಅವಳು " ನನ್ನ ಮದುವೆಯ ದಿನವೇ ನಿನ್ನ ಮದುವೆಯ ದಿನ" ಎಂದು ಹೇಳಿದಳು.

ನನಗೆ ಅರ್ಥವಾಯಿತು. ಅವಳು ತನ್ನ ಹುಡುಗಾಟವನ್ನು ಮರೆ ತಿರಲಿಲ್ಲ. ಅದಕ್ಕೆ ಜೀವವೆರೆದು ಜೀವನದ ಒಂದು ಗುರುತರವಾದ ಘಟ್ಟಕ್ಕೆ ಏರಿಸಿದ್ದಳು.

" ಪಾರು "

" ಹಾಗಾದರೆ— "

" ಇದು ಸರಿ."

" ಆದರೆ ಜನರು— "

" ಜನಕ್ಕೇನು ಕೆಲಸ. "

" ನೋಡು, ನೀನು ಮಲೆಯಾಳಿ. ಅದರಲ್ಲಿಯೂ ನಂಬೂದ್ರಿ. ನಾನು—ನಾನು—ನಮ್ಮ ಮದುವೆ ಹೇಗೆ ಆಗಬೇಕು ? "

" ಈ ತೊಂದರೆಗಳೇ ಇಲ್ಲ. ನಮಗೆ ಅಂದೇ ಮದುವೆ ಆಯಿತು. ನಿನಗೆ ಮಾತ್ರ ಜ್ಞಾಪಕವಿಲ್ಲ. "

ಈ ಉತ್ತರದಿಂದ ನನಗೆ ಹಿಡಿಸಲಾರದ ಆನಂದ.

ಪ್ರಾಂತ, ಮತ, ಜಾತಿಗಳ ಭೇದವಿಲ್ಲದೆ ಪಾರ್ವತಿಯು ನನ್ನನ್ನು ಆರಿಸಿದ್ದಳು. ಅನಂತವಾದ, ವಿಸ್ತಾರವಾದ ಜನ ನಿಬಿಡವಾದ ಜಗತ್ತು ಇದ್ದರೂ ಅದರಲ್ಲಿ ನನ್ನನ್ನು ಹುಡುಕಿ ಆಯ್ದಿದ್ದಳು. ತನ್ನ ಒಲವಿನ ಎಲ್ಲ ಸಾಮ್ರಾಜ್ಯವನ್ನು ನನಗೆ ಒಪ್ಪಿಸಿದ್ದಳು.

ನನ್ನ ಲೋಕದಲ್ಲಿಯೂ ನನ್ನ ಪ್ರೇಮಮಂದಿರದಲ್ಲಿ ಅಧಿಷ್ಠಾತ್ರಿಯಾದ ಮೂರ್ತಿಯೊಂದು ಇದ್ದಿತು. ಆ ಮೂರ್ತಿ ಪಾರ್ವತಿ.

ಸ್ವಲ್ಪ ಹೊತ್ತು ಇಬ್ಬರೂ ಸುಮ್ಮನಿದ್ದೆವು. ಬಳಿಕ ಪಾರ್ವತಿಯು " ಇದು ಹರಿಹರನಿಗೆ ಗೊತ್ತು. ನಮ್ಮ ತಾಯಿಗೆ ಈ ದಿನ ಹೇಳುತ್ತೇನೆ " ಎಂದು ಹೇಳಿದಳು.

ನಾನು ನಮ್ಮ ಮನೆಯಲ್ಲಿ ಹೇಳುತ್ತೇನೆಂದು ವಚನವಿತ್ತ ಪಾರ್ವತಿಯು ತನ್ನ ಭಾಗದ ಕಾರ್ಯಭಾರವನ್ನು ಮುಗಿಸಿದಳು. ಧೈರ್ಯಹೀನನಾದ ನಾನು ನಮ್ಮ ಮನೆಯಲ್ಲಿ ಈ ಪ್ರಸ್ತಾಪವನ್ನು ತೆಗೆಯಲಿಲ್ಲ.

ಇದೇ ರೀತಿ ಒಂದು ವರ್ಷ ಕಳೆಯಿತು ಒಂದು ದಿನ ನಮ್ಮ ತಂದೆಯವರು ಬಂದು " ಮಗು, ನಿನ್ನ ಮದುವೆ ನಿಶ್ಚಯಮಾಡಿದೆ. ಗುಂಡಪ್ಪನವರ ಮನೆಯ ಹೆಣ್ಣು. ಮನೆಯವರು ಸ್ಥಿತಿವಂತರು, ಹುಡುಗಿಯೂ ಚೆನ್ನಾಗಿದೆ " ಎಂದು ಹೇಳಿದರು.

ನನಗೆ ದಿಕ್ಕೇ ತೋರಲಿಲ್ಲ. ಕೊನೆಗೆ ಸ್ವಲ್ಪ ಬಾಯಿಬಿಟ್ಟು ನನಗೆ ಈಗ ಮದುವೆ ಬೇಡವೆಂದು ಹೇಳಿದೆ.

ತಂದೆಯವರಿಗೆ ಸಿಟ್ಟು ಬಂದಿತು. “ ಮಾತುಕೊಟ್ಟಿದ್ದೇನೆ ತೆಗೆದು ಹಾಕುವ ಹಾಗಿಲ್ಲ ಮನೆಯಲ್ಲಿ ಇರುವ ಹಾಗಿದ್ದರೆ ನನ್ನ ಮಾತು ಕೇಳು ಇಲ್ಲದ್ದಿದ್ದರೆ—” ಅವರು ಮಾತು ಮುಗಿಸಲಿಲ್ಲ.

ಹೇಡಿಯಾದ ನಾನು ಏನೂ ಹೇಳಲಿಲ್ಲ. ಪಾರ್ವತಿಯ ವಿಷಯ ವನ್ನು ತೆಗೆಯಲಿಲ್ಲ.

ರಾತ್ರಿ ನಮ್ಮ ತಾಯಿಗೆ ಪಾರ್ವತಿಯ ವಿಷಯವನ್ನು ಹೇಳಿದೆ. ಅವಳು ಕೇಳಿ “ ನಿನಗೆ ಬುದ್ಧಿಯಿಲ್ಲ. ಯಾವ ಜಾತಿಯೋ ಯಾವ ಕುಲವೋ ಅದು ಆಗದ ಮಾತು. ಯಜಮಾನರು ಹೇಳಿದ ಹಾಗೆ ಕೇಳಲೇ ಬೇಕು ” ಎಂದು ಹೇಳಿಬಿಟ್ಟರು.

ದಡಕ್ಕೆ ಕೈ ಚಾಚಿದ ನನ್ನನ್ನು ಪುನಃ ಕೆರೆಗೆ ತಳ್ಳಿದಂತೆ ಆಯಿತು.

ಧೈರ್ಯವಿಹೀನನಾದ ನನ್ನಿಂದ ಎಲ್ಲವೂ ಹಾಳಾಯಿತು.

ಮೆಚ್ಚಿ ಮನವೊಲಿದು ಬಂದಿದ್ದ ಗೆಳತಿಯಾದ ಹೆಣ್ಣು. ವಚನವಿತ್ತಿದ್ದ ಧರ್ಮಪತ್ನಿ - ಆದರೆ ಅವಳು ಸಮಾಜದ ಕಟ್ಟಳೆಗೆ ಹೊರಗಾದವಳು.

ಹಿರಿಯರು ಗೊತ್ತುಮಾಡಿದ್ದ ನನ್ನನ್ನು ನಂಬಲು ಹೊರಟಿದ್ದ ಏನೂ ಅರಿಯದ ಹುಡುಗಿ. ಆದರೂ ನಮ್ಮ ಕುಲದವಳು.

ನನ್ನ ಬಾಳು ಬಣ್ಣಗೆಟ್ಟಿತು. ಮತಿಗೇಡಿಯಂತೆ ದಾರಿ ತೋರದೆ ಎರಡು ಹೆಣ್ಣುಮಕ್ಕಳ ಜೀವನವನ್ನು ಮಣ್ಣುಗೂಡಿಸಲು ಕಾರಣನಾದೆ.

ಕಾರಣವಿಷ್ಟೆ ನಮ್ಮ ತಂದೆಯವರು ಧಾರ್ಮಿಕರು, ಕೃಪಣರು, ನಿಷ್ಠುರರು; ಹಿಡಿದ ಹಟವನ್ನು ಸಾಧಿಸಲು ಬದ್ಧಕಂಕಣರು.

ನಾನು—ನಾನು—

ತಂತ್ರಮುಗ್ಧನಂತೆ ನನ್ನ ಜೀವನವಾಯಿತು. ಮನದಲ್ಲಿ ವರ್ಣನಾ ತೀತವಾದ ನೋವು. ಗೊಂದಲ. ಹಾಗೆ ಮಾಡಬೇಕು, ಹೀಗೆ ಮಾಡ ಬೇಕು ಎಂದು ಮುಂದೆ ಬರುತ್ತಿದ್ದ ವಿಚಾರಗಳು. ಆದರೆ ಅವು ನನ್ನಿಂದ ಆಗದ, ನನ್ನ ಸಾಹಸಕ್ಕೆ ಹೊರಗಾದ ಕೆಲಸಗಳವು.

ಹತ್ತೆಂಟು ಕಾರಣಗಳು, ನೂರೆಂಟು ಕಾರಣಗಳು ಒಂದುಗೂಡಿ ಸೇರಿ ನಮ್ಮ ಜೀವನವನ್ನು ಈ ವಿಷಮಪರಿಸ್ಥಿತಿಗೆ ತಂದಿದ್ದವು.

ಪಾರ್ವತಿ, ಅವಳ ತಂದೆ-ತಾಯಿಗಳು, ಜಾತಿ, ಕುಲ, ಮತ ಮತ್ತು ಸಂಪತ್ತು ಇವು ಒಂದು ಕಡೆ.

ನಾನು, ನಮ್ಮ ಮನೆಯವರು ಇತ್ಯಾದಿ ಬೇರೊಂದು ಕಡೆ.

ಇವುಗಳ ನಡುವೆ ಯಜ್ಞಪಶುಗಳಾದ ನಾನು, ಪಾರ್ವತಿ, ನನಗೆ ಪರಿಚಯವಿಲ್ಲದ, ತಿಳಿವಿಲ್ಲದ ಹುಡುಗಿಯೊಂದು, ಎದುರಿನಲ್ಲಿ ವಿಸ್ತಾರವಾದ ಗಹಗಹಿಸುತ್ತಿರುವ ಯಜ್ಞಕುಂಡ

ಪುರೋಹಿತರೆಂದು, ನ್ಯಾಯಗಾರರೆಂದು ಹೇಳಿಕೊಳ್ಳುವ, ಸಾರಿ ಕೊಳ್ಳುವ ನಮ್ಮ ಗುರು-ಹಿರಿಯರು ಈ ನರಯಜ್ಞದ ಸಂಚಾಲಕರು.

× × × ×

ನಾನು ಪಾರ್ವತಿಗೆ ಈ ದುರ್ದಶೆಯನ್ನು ತಿಳಿಯಹೇಳಿದೆ. ನೀರವ ವಾಗಿ ಕೇಳಿದಳು. ಆದರೆ ಕೊನೆಗೆ ಒಂದು ಮಾತನ್ನ ಹೇಳಿದಳು " ನೀನು ಮೊದಲೇ ಹೇಳಿದ್ದರೆ — ಆಗ ಈ ಮರುಭೂಮಿಯು ಇರುತ್ತಿರಲಿಲ್ಲ· ವಡವಾನಲನ ಜ್ವಾಲೆಯ ತಾಪ ಇರುತ್ತಿರಲಿಲ್ಲ....ಹೂಂ, ಈಗ—"

ಮುಖವನ್ನು ಎರಡು ಕೈಗಳಿಂದ ಮುಚ್ಚಿಕೊಂಡಳು. ಕರ್ತವ್ಯ ಹೀನನಾದ, ಧೈರ್ಯವಿಹೀನನಾದ ನಾನು ಸುಮ್ಮನಿದ್ದೆ.

ಹೆಂಗುಸಿಗಿದ್ದ ಧೈರ್ಯವು ನನಗಿರಲಿಲ್ಲ.

ಆದುದರಿಂದ ಮೂರು ವ್ಯಕ್ತಿಗಳ ಜೀವಗಳ ವಿನಾಶ. ಆಯುಷ್ಯದ ದಹನ ಕಾರ್ಯ.

ಮನರಂಜಿಸುವ ಪೂ-ಮಳೆಯಲ್ಲಿ ಸತತಕಾರುವ ಅಗ್ನಿವೃಷ್ಟಿ.

× × × ×

ಪಾರ್ವತಿಯು ಹರಿಹರನೊಂದಿಗೆ ನನ್ನ ಮದುವೆಯ ದಿನ ಬಂದಿದ್ದಳು. ಏನೋ ಒಂದು ಉಡುಗೊರೆಯನ್ನು ತಂದು ನನ್ನ ಹೆಂಡತಿಗೆಕೊಟ್ಟಳು. ನನಗೂ ಒಂದು ಪುಸ್ತಕವನ್ನು ಕೊಟ್ಟಳು. ಅದು 'In Memoriam'

ನಮ್ಮಿಬ್ಬರನ್ನೂ ನೋಡಿ ಮಲೆಯಾಳಿಯಲ್ಲಿ " ಅವಳಿಂದ ನಿನಗೆ ಇಪ್ಪತ್ತು ಮಕ್ಕಳಾಗಲಿ " ಎಂದು ಹೇಳಿ ನಗಲಾರಂಭಿಸಿದಳು-

ನನಗೆ ಸಹಸ್ರಸರ್ಪದಂಶನದಷ್ಟು ನೋವಾಯಿತು.

ದೇವರಿಗೆ ನಮಸ್ಕಾರ ಮಾಡಲು ಹುಡುಗಿಯು ಕೈಯನ್ನು ಹಿಡಿದು ಕೊಂಡು ಹೊರಟುಹೋದೆ.

ಹೊರಗೆ ಬಂದವನು ಪುಸ್ತಕದ ಅಂಕಿತವನ್ನು ನೋಡಿದೆ. ಹೊಟ್ಟೆಯಲ್ಲಿ ಬೆಂಕಿಬಿದ್ದ ಹಾಗೆ ಆಯಿತು. ಇಂಗ್ಲೀಷು ಕಾವ್ಯಕ್ಕೆ ಲಕ್ಷ್ಮೀಶನ ಪದ್ಯದಲ್ಲಿನ ಭಾಗ

**" ಕಡೆಗೆ ಕರುಣಾಳು ರಾಘವನಲಿ ತಪ್ಪಿಲ್ಲ " —ಪಾರ್ವತಿ**

ಪಕ್ಕದಲ್ಲಿದ್ದವರನ್ನು ಕುಡಿಯಲು ನೀರು ಬೇಕೆಂದು ಕೇಳಿದೆ. ಅವರು ತರಲು ಒಳಕ್ಕೆ ಹೋದರು.

೪

ನಾನೂ ನೀರು ಕುಡಿಯಬೇಕೆಂದು ಜೆಂಪಿನಿಂದ ಕೈ ನೀಡಿದೆ. ಶಾರದೆಯು " ಎಚ್ಚರವಾಯಿತೆ ? ನಾನು ಬಂದು ಅರ್ಧಗಂಟೆಯಾಯಿತು. ಪಾಪ, ಬಹಳ ಕನಸುಗಳಿರಬಹುದು. " ಎಂದು ಹಂಗಿಸಿದಳು.

ಅವಳ ಮಾತು ನಿಜ. ನನಗೆ ನಿಜವಾಗಿಯೂ ಶಾರದೆಯು ಇಲ್ಲದಿದ್ದುದರಿಂದ ನೋವಾಗಿ ಕೊನೆಗೆ ಜೆಂಪಿನಲ್ಲಿ ಪಾರ್ವತಿಯ ನೆನಪು ಬಂದಿತು. ಹರಿಹರನೂ ನಾನೂ ಸಹಪಾಠಿಗಳು, ಪಾರ್ವತಿಯ ಪರಿಚಯವು ನನಗುಂಟು.

ಆ ಬಡ ಯುವತಿಯ ದುಃಖಜೀವನವನ್ನು ಜ್ಞಾಪಕಕ್ಕೆ ತಂದುಕೊಂಡು ಶಾರದೆಯ ಕೈಹಿಡಿದುಕೊಂಡೆ. ಅವಳು ಕೈಕೊಸರಿಕೊಂಡು " ಯಾವಾಗಲೂ ಇದೇ ? " ಎಂದು ನಕ್ಕಳು.

ನಾನು ಮನಸ್ಸಿನಲ್ಲಿ ಮಿಂಚಿನಂತೆ ಯೋಚಿಸಿದೆ. ಜಗತ್ತು ಹಾಳಾಗಿ ಹೋದರೂ ನನಗೆ ಚಿಂತೆಯಿಲ್ಲ. ನನಗೆ ಶಾರದೆಯು ಸದಾ ಸಹವಾಸಿಯಾಗಿರಬೇಕು.

ಆದರಿಂದ ಅವಳನ್ನು ಕುರಿತು " ಶಾರದಾ, ಇನ್ನು ಮೇಲೆ ಎಲ್ಲಿಯೂ ಹೋಗಬೇಡ, ಇಲ್ಲಿಯೇ ಇದ್ದು ಬಿಡು " ಎಂದು ಬೇಡಿಕೊಂಡೆ.

ಅದಕ್ಕೆ ಅವಳು " ನಿಮಗೆ ಒಬ್ಬರಿಗೇ ಮನೆಯಿರುವುದು. ನನಗೂ ಇದೆ" ಎಂದು ಉತ್ತರವಿತ್ತಳು.

" ಹಾಗಾದರೆ ನಾವು ಇಬ್ಬರ ಮನೆಯನ್ನು ಒಂದುಗೂಡಿಸಿ ಒಂದೇ ಮನೆ......." ನನ್ನ ಅಭಿಪ್ರಾಯವು ಹೊರಗೇ ಬೀಳಲಿಲ್ಲ.

" ಅದು ಸಾಧ್ಯವಿಲ್ಲ " ವೆಂದು ಹೇಳಿಬಿಟ್ಟಳು.

ನಾನು ಮಾತನಾಡಲಿಲ್ಲ. ಆಂಧ್ರಕವಿಯೊಬ್ಬನ ಕೃತಿಯು ನೆನಪಿಗೆ ಬಂದಿತು. ಮೆಲ್ಲನೆ ಹೇಳತೊಡಗಿದೆ.

" ಆಯೆ ಜಗದೀಶಮುಕುಟಾಗ್ರಸೀಮಮುಂಡಿ
ಯೂರ್ವಿಪೈ ಜೇರಿನ ಸುಧಾಮಯಾರೇಖ
ಆಮೆ ಮೂಡು ಲೋಕಾಲ ಕಲ್ಯಾಣಮುನಕು
ಅವರಂಜಿನ ಯೊಕ ಪವಿತ್ರಾನುಭಾವ
ಮಾಮೆ ನಾ ಜನ್ಮ ಜನ್ಮ.ಪುಣ್ಯಮುಲುಪಂಡಿ
ಪ್ರಾಪ್ತ ಮೈನ ಕೇಳಿಪರಿತ್ಯಾಗಲೀಲ
ಆಮೆ ಪದಸನ್ನಿಧಾನ ದಿವ್ಯಸ್ಥಲಾನ
ಭಕ್ತಿನಮ್ರುಡನೈ ನಿಲಂಬಕಿಸವುಡು
ತಲಪುನಕು ವಚ್ಚುನಾ ಪೇದಕನಮು ನಾಕು ?

ಶಾರದೆಯು " ಕವಿಯು ಮೂಢ ಪ್ರೇಮದ ಬಂಧನವನ್ನು ಅರಿಯದವನು " ಎಂದು ವಿಮರ್ಶಿಸಿದಳು.

ನಾನು ಏನೂ ಮಾತನಾಡದೆ · ಬಾಹ್ಯದಲ್ಲಿ ಗೋಚರವಾಗುತ್ತಿದ್ದ ಶಾರದೆಯ ಮುಖವನ್ನು ಮನೋಭಿತ್ತಿಯಲ್ಲಿ ಗೋಚರವಾಗಿದ್ದ ಹರಿಹರನ ತಂಗಿಯಾದ ಪಾರ್ವತಿಯ ಮುಖದೊಡನೆ ಹೋಲಿಸಲು ಆರಂಭಿಸಿದೆ.

ಪಾಪ, ಹೆಣ್ಣು ಜೀವನವು ನಿರಂತರ ದುಃಖಮಯ.